ಶ್ರೀ ಜಿ. ಪುಟ್ಟಸ್ವಾಮಿ.— ಚಿಕ್ಕಮಗಳೂರಿನಲ್ಲಿ ಒಬ್ಬ ನವಸ್ಯರು ಜೆತ್ತರೆ ಇದ್ದರೆಂದು ಹೇಳಿದರು. ಅದನ್ನು ಹೇಳುವಾಗ ರುಜುವಾತು ಮಾಡಲು ತಯಾರಿರಬೇಕು. ಅಲ್ಲರುವ ಫಿರ್ಯಾದು ಗೊತ್ತಿರಬೇಕು. ಅನೇಕ ಅಪಾದನೆಗಳು ನಿರಾಧಾರವಾದುವು.

ಅಧ್ಯಕ್ಷರು.— ನಭೆಯ ಕಾಲ ಬಹಳ ಪವಿತ್ರವಾದುದು ಎಂದು ಹೇಳಿದ ನೀವೇ ಹೀಗೆ ಮಾತನಾಡುತ್ತಾ ಹೋಗುವುದು ಸರಿಯಲ್ಲ.

ಶ್ರೀ ಎಚ್. ಡಿ ದೇವೇಗೌಡ.— 312 ನೇ ನಿಯಮದ ಪ್ರಕಾರ ಒಂದು ವಿಷಯವನ್ನು ಪ್ರಸ್ತಾಪಿಸಲು ತಮ್ಮ ಅನುಮತಿಯನ್ನು ಕೇಳಿದ್ದೇನೆ. ಅದು ಶ್ರೀ ಬಸವಲಿಂಗಪ್ಪನವರಿಗೆ ಸಂಬಂಧಪಟ್ಟಿದೆ. ವಿಧಾನಪರಿಷತ್ತಿನಲ್ಲಿ ಒಂದು ಪ್ರಶ್ನೆಗೆ ಉತ್ತರ ಕೊಡುವ ಸನ್ನಿವೇಶವಿರುವುದರಿಂದ ಅದು ಚರ್ಚೆಯಾದನಂತರ ಅವಕಾಶ ಕೊಡಬಹುದು.

ಅಧ್ಯಕ್ಷರು.—ಅವರು ಈಗ ಹಾಜರಿಲ್ಲ.

NON-OFFICIAL RESOLUTIONS

Re : Recommending the Central Government for amending the Election Rules

† ಶ್ರೀ ಟಿ. ಆರ್. ಶಾಮಣ್ಣ (ಕೋಜೆ).—ಮಾನ್ಯ ಸಭಾಪತಿಗಳೇ, ಶ್ರೀಮಾನ್ ನಾಗಣ್ಣನವರು ನಭೆಯ ಮುಂದಿಟ್ಟಿರುವ ನಿರ್ಣಯ ಪಾರ್ಲಮೆಂಟ್ ಮತ್ತು ಅಸೆಂಬ್ಲಿಗಳಿಗೆ ಚುನಾವಣೆಗೆ ನಿಲ್ಲುವವರು ಚುನಾವಣೆಗೆ ಸಂಬಂಧಪಟ್ಟ ಖರ್ಚಿನ ಲೆಕ್ಕ ಕೊಡುವಾಗ ಸರಿಯಾದ ಲೆಕ್ಕ ಯಾರೂ ಕೊಡುತ್ತಿಲ್ಲ, ನುಮ್ಮನೆ ಹೆನರಿಗೆ ಮಾತ್ರ ಒಂದು ಲೆಕ್ಕ ಕೊಡುತ್ತಿದ್ದಾರೆ, ಆದರಿಂದ ಪ್ರಯೋಜನವಾಗುವುದಿಲ್ಲ, ಆದುದರಿಂದ ಕೇಂದ್ರ ಸರಕಾರಕ್ಕೆ ಮನವಿ ಮಾಡಿ ಲೆಕ್ಕಪತ್ರ ಈ ಬಗ್ಗೆ ಕೊಡುವುದನ್ನು ನಿಲ್ಲಿಸುವಂತೆ ಮಾಡಬೇಕು, ಲೆಕ್ಕ ಕೊಡುವುದರಲ್ಲಿ ಅರ್ಥವಿಲ್ಲ ಎಂದು ಸೂಚಿಸುವುದು, ಅದನ್ನು ವಿವರಿಸಿದ್ದಾರೆ. ಈಗಿರುವ ಎಲೆಕ್ಷನ್ ರೂಲ್ಸ್ ಪ್ರಕಾರ ಚುನಾವಣೆಗೆ ನಿಲ್ಲುವವರು 25 ಸಾವಿರ ರೂಪಾಯಿಗಳೊಳಗೇ ಖರ್ಚುಮಾಡಬೇಕು ಮತ್ತು ಚುನಾವಣೆ ಫಲತಾಂಶ ತಿಳಿದ ಒಂದು ತಿಂಗಳಲ್ಲೇ ಚುನಾವಣೆಗೆ ಆಗಿರುವ ಖರ್ಚಿನ ವಿವರವನ್ನು ಎಲೆಕ್ಷನ್ ಕಮಿಷನರಿಗೆ ಕಳಿಸಬೇಕು ಎಂದು ಕಡ್ಡಾಯವಿದೆ. 10 ಸಾವಿರ ರೂಪಾಯಿಗಳಲ್ಲಿ ಯಾರೂ ಖರ್ಚು ಮಾಡಿ ತಮ್ಮ ಕೆಲಸ ಮಾಡಿಕೊಳ್ಳಲು ಸಾಧ್ಯವಾಗುವುದಿಲ್ಲ. ಕಾಯಿದೆ ಮಾಡುವವರು ನೀತಿ ನಿಯಮ ಮಾಡಿದರೂ ಸರಿಯಾದ ಲೆಕ್ಕ ಯಾರೂ ಕೊಡುವುದಿಲ್ಲ. ಹೀಗೆ ಮಾಡಲು ಅವಕಾಶವಿರಬಾರದು. ಪಾರ್ಲಿಮೆಂಟಿಗೆ ನಿಲ್ಲುವವರು ಒಂದು ಲಕ್ಷವಾದರೂ ಖರ್ಚುಮಾಡಬೇಕು, ಅನೇಕ ಸಂದರ್ಭಗಳಲ್ಲಿ 3 ರಿಂದ 5 ಲಕ್ಷದವರೆಗೂ ಖರ್ಚುಮಾಡುವರು. ಹಾಗೆಯೇ ಅಸೆಂಬ್ಲಿಗೆ ನಿಲ್ಲುವವರೂ ಖರ್ಚುಮಾಡುವರು; 50 ಸಾವಿರದಿಂದ ಒಂದು ಲಕ್ಷದವರೆಗೂ ಖರ್ಚುಮಾಡುವರು. ಬ್ಯಾಲೆಟ್ ಪೇಪರ್ ಪ್ರಿಂಟ್ ಮಾಡಿಸುವುದು, ಸ್ಲಿಪ್ಪುಗಳನ್ನು ಹಂಚುವುದು, ಸಹಾಯಮಾಡುವವರಿಗೆ ಊಟ ತಿಂಡಿ ಖರ್ಚು ಕೊಡುವುದು ಮುಂತಾದುವಕ್ಕೆಲ್ಲಾ ಅವರು ಖರ್ಚು ಮಾಡುವುದನ್ನು ನೋಡಿದರೆ ನುಮಾರು 20—25 ಸಾವಿರ ಆಗುವುದು. ಅಷ್ಟೆ ಎಲೆಕ್ಷನ್ ವಿಚಾರದಲ್ಲಿ ಎಷ್ಟೋ ಜನ ಕೋರ್ಟಿಗೆ ಹೋಗಿರುವ ನಿದರ್ಶನಗಳಿವೆ. ಬಡವರಿಗೆ ತೊಂದರೆಯಾಗುವುದು ಎಂಬ ಉದ್ದೇಶದಿಂದ ಪರಿಮಿತಿ ಗೊತ್ತು ಮಾಡಲಾಗಿದೆ. ಆದರ ಉದ್ದೇಶ ಸಾರ್ಥಕವಾಗುತ್ತಿದೆಯೇ ಎಂದು ಯೋಚನೆ ಮಾಡಬೇಕಾಗಿದೆ. ಪಾರ್ಟಿಯವರು ಸಹ ಖರ್ಚು ಮಾಡುವರು, ಲೆಕ್ಕ ಕೊಡುವಾಗ ಮೋಸಮಾಡುವರು. ಇದು ಹೆಚ್ಚಾಗಿ ರಾಜ್ಯ ಸರಕಾರಕ್ಕೆ ಸಂಬಂಧವಿಲ್ಲ. ಕೇಂದ್ರ ಸರಕಾರ ಇದನ್ನು ನೋಡಿಕೊಳ್ಳುವುದು. ಸರಿಯಾದ ಲೆಕ್ಕ ಕೊಡುತ್ತಿಲ್ಲವಾದುದರಿಂದ ಎಲೆಕ್ಷನ್ನಿಗೆ ನಿಂತವರು ಲೆಕ್ಕ ಕೊಡಬೇಕೆಂಬ ನಿಯಮವನ್ನು ತೆಗೆದುಹಾಕಬೇಕು ಎಂದು ರಾಜ್ಯ ಸರಕಾರದವರು ಕೇಂದ್ರ ಸರಕಾರಕ್ಕೆ ಶಿಫಾರಸು ಮಾಡಬೇಕು ಎಂಬ ಉದ್ದೇಶದಿಂದ ಶ್ರೀ ನಾಗಣ್ಣನವರು ಈ ನಿರ್ಣಯವನ್ನು ತಂದಿದ್ದಾರೆ.

ಇದರಲ್ಲಿ ಲೆಕ್ಕ ಇಡಬೇಕಾದ ಪಕ್ಷದಲ್ಲಿ ಬಹಳ ಕಷ್ಟ ಇರುತ್ತದೆ. ಚುನಾವಣೆಯಲ್ಲಿ ಗೆದ್ದವರು ಲೆಕ್ಕ ಕೊಡಬೇಕು, ಸೋತವನು ಲೆಕ್ಕ ಕೊಡಬೇಕು. ಲೆಕ್ಕ ಕೊಡದೆ ಹೋದ ಪಕ್ಷದಲ್ಲಿ ಲೆಕ್ಕದಲ್ಲಿ ವ್ಯತ್ಯಾಸ ಇದ್ದ ಪಕ್ಷದಲ್ಲಿ ಆರು ವರ್ಷಗಳ ಕಾಲ ಅಂಥವನ್ನು ಡಿಬಾರ್ ಮಾಡುವ ಪದ್ಧತಿ ಇದೆ.

ಈ ಹೇಳಿಕೆ ಪ್ರಕಾರ ನಡೆದುಕೊಳ್ಳದೆ ಇರತಕ್ಕ ನಂದರ್ಭದಲ್ಲಿ ನಿಜವಾಗಿಯೂ ಈ ಕಾನೂನನ್ನು ಇಟ್ಟುಕೊಂಡಿರತಕ್ಕದ್ದು ನ್ಯಾಯವಾದುದಲ್ಲ. ಇದರಿಂದ ಅನುಕೂಲಕ್ಕಿಂತ ಪ್ರತಿಕೂಲವೇ ಜಾಸ್ತಿ. ಆದ್ದರಿಂದ ರಾಜ್ಯಸರ್ಕಾರದವರು ಕೇಂದ್ರಸರ್ಕಾರಕ್ಕೆ ಈ ನಿಯಮವನ್ನು ತೆಗೆದುಹಾಕಬೇಕು ಎಂದು ಶಿಫಾರಸ್ ಮಾಡಬೇಕು ಎಂದು ಒತ್ತಾಯಪೂರ್ವಕವಾಗಿ ಹೇಳಿ ನನ್ನ ಎರಡು ಮಾತನ್ನು ಮುಗಿಸುತ್ತೇನೆ.

† ಶ್ರೀ ಡಿ. ದೇವರಾಜ ಅರಸ್ (ಮುಖ್ಯಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ನಮ್ಮ ಮಾನ್ಯ ಸದಸ್ಯರಾದಂಥ ಶ್ರೀಮಾನ್ ನಾಗಣ್ಣನವರು ತಂದಿರತಕ್ಕ ತೀರಾವನ್ನು ತಾತ್ವಿಕವಾಗಿ, ನಾವೆಲ್ಲರೂ ಒಪ್ಪತಕ್ಕದ್ದು ಇದೆ. ಅವರು ಕೊನೆಯಲ್ಲಿ ಒಂದು ಮಾತನ್ನು ಹೇಳಿದ್ದಾರೆ, ಏನೆಂದರೆ, "Limit of Election expenditure fixed at present is unrealistic and impracticable" ಎಂದು. ಇದನ್ನು ಸಂಪೂರ್ಣವಾಗಿ ನಾವೆಲ್ಲರೂ ಒಪ್ಪತಕ್ಕಂಥಾದ್ದು. ಶಾಸನಸಭೆಯ ಚುನಾವಣೆಗೆ ನಿಂತಿರುವವರೆಲ್ಲರಿಗೂ ಇದರ ಅನುಭವ ಇದೆಯೆಂದು ಕಾಣುತ್ತದೆ. ಈಗ ನಾವು ಏನು ಒಂದು ಮಿತಿಯನ್ನು ಹೇಳಿದ್ದೇವೆ, ಆ ಮಿತಿಯಂತೆ ಎಲೆಕ್ಷನ್‌ನಲ್ಲಿ ಖರ್ಚು ಮಾಡುವುದು ಬಹಳ ಕಷ್ಟಕರವಾದ ವಿಚಾರ.

ಶ್ರೀ ಕೋಣಂಡೂರು ಲಿಂಗಪ್ಪ.—ಮಿತಿಗಿಂತಲೂ ಕಡಿಮೆ ಖರ್ಚು ಮಾಡಿರುವವರು ನಾವು ಇದ್ದೇವೆ.

ಶ್ರೀ ಡಿ. ದೇವರಾಜ ಅರಸ್.—ನೀವು ಪ್ರಥಮವಾಗಿ ಬಂದಿದ್ದೀರಿ, ಒಂದೆರಡು ಸಾರಿ ಎಲೆಕ್ಷನ್ ಗೆದ್ದು ಬಂದಮೇಲೆ ತಮ್ಮ ಅನುಭವವನ್ನು ನೋಡೋಣ.

ಶ್ರೀ ಕೋಣಂಡೂರು ಲಿಂಗಪ್ಪ.—ನಮ್ಮ ಗುರುಗಳ ಕಾಲದಿಂದಲೂ ಇಷ್ಟೇ ಖರ್ಚು ಮಾಡಿಕೊಂಡು ಬಂದಿರುವುದು.

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಲಿಂಗಪ್ಪನವರು ಹೇಳಿದ್ದನ್ನು ನಾನು ನಂಬುತ್ತೇನೆ. ಅವರದು ಮೊದಲನೆಯ ಅನುಭವ, ಒಂದೆರಡು ಸಾರಿ ಚುನಾವಣೆಗೆ ನಿಂತ ಮೇಲೆ ನೋಡೋಣ. ನಾವು ಇನ್ನೂ ಕೆಲವು ಕಾಲ ಇರುತ್ತೇವೆ, ಇನ್ನೊಂದು ಚುನಾವಣೆ ಬರುತ್ತದೆ ಆಗ ಏನಾಗುತ್ತದೆ ಎನ್ನುವುದನ್ನು ಸ್ವಲ್ಪ ಕಾದು ನೋಡಿ. ತಾವು ಬಹಳ ಕಡಿಮೆ ಖರ್ಚಿನಲ್ಲಿ ಚುನಾವಣೆಯಲ್ಲಿ ಗೆದ್ದು ಬಂದಿದ್ದೀರಿ ಎಂದು ಖಂಡಿತವಾಗಿಯೂ ಒಪ್ಪುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ತಾವು ಎರಡನೇ ಸಾರಿ ಗೆದ್ದು ಬಂದಿದ್ದೀರಿ, ತಮಗೆ ಅನುಭವ ಬಂದಿರಬಹುದು.

ಶ್ರೀ ಎಚ್. ಡಿ. ದೇವೇಗೌಡ.—ಸಮಾಜವಾದದ ಚುನಾವಣೆಯ ಮುಖಾಂತರ ಇನ್ನೊಂದು ಸಾರಿ ಗೆದ್ದು ಬರುವುದಾದರೆ ಏತಕ್ಕೆ ದುಡ್ಡು ವಿತರಣೆ ಆಗಬೇಕು ?

ಶ್ರೀ ಡಿ. ದೇವರಾಜ ಅರಸ್.—ಸ್ವಂತ ದುಡ್ಡು ವಿತರಣೆ ಆಗುವುದು ಇದ್ದರೆ ಹಿಂದು ಮುಂದು ನೋಡುತ್ತೀರಿ, ಯಾರ ಯಾರದೋ ದುಡ್ಡು ವಿತರಣೆಯಾಗುತ್ತದೆ.

ಶ್ರೀ ಎಚ್. ಡಿ. ದೇವೇಗೌಡ.—ನಾನು ಒಬ್ಬ ಪಾರ್ಟಿಯ ಅಧ್ಯಕ್ಷನಾಗಿದ್ದರೆ, ದುಡ್ಡು ವಿತರಣೆಯಾಗುವುದನ್ನು ಹೇಳುತ್ತಿದ್ದೆ.

ಶ್ರೀ ಡಿ. ದೇವರಾಜ ಅರಸ್.—ಅಧ್ಯಕ್ಷರ ಜೊತೆಗೆ ಇರುತ್ತೀರಿ, ಅಧ್ಯಕ್ಷರಿಗೆ ಬೆಂಬಲಿಗರಾಗಿರುತ್ತೀರಿ, ತಮಗೂ ಬಹಳ ಅನುಭವ ಇದೆ.

ಶ್ರೀ ಎಸ್. ಬಂಗಾರಪ್ಪ.—ತಮಗೆ ಎಲ್ಲಾ ಅನುಭವ ಇದೆ, ತಮ್ಮ ಅನುಭವ ಹೇಳಿ ಸ್ವಾಮಿ ?

ಶ್ರೀ ಡಿ. ದೇವರಾಜ ಅರಸ್.—ಇದು ಅನಾರಿಯಲಿಸ್ಟಿಕ್ ಎನ್ನುವುದು ನಿಜ. ಪಾರ್ಲಿಮೆಂಟಿನಲ್ಲಿ ಈ ವಿಚಾರ ಚರ್ಚೆಗೆ ಬಂದು ಅಲ್ಲೂ ಕೂಡ ಚುನಾವಣೆಯ ಖರ್ಚನ್ನು ಕೊಡುವುದು ಬೇಡ ಎಂದು ಹೇಳುವವರು ಇದ್ದಾರೆ. ಈ ಮಿತಿಯನ್ನು ಹೆಚ್ಚಿಸಬೇಕು ಎನ್ನತಕ್ಕದ್ದು ಇದೆ. ಮಾನ್ಯ ಸದಸ್ಯರೇ ಇದರ ಬಗ್ಗೆ ನಾವು ಕೇಂದ್ರ ಸರ್ಕಾರಕ್ಕೆ ರೆಕಮೆಂಡೇಷನ್ಸ್ ಕಳುಹಿಸಬೇಕು ಎಂದು ಹೇಳುತ್ತಿದ್ದಾರೆ. ನಾನು / ಅವರಲ್ಲಿ ವಿನಂತಿ ಮಾಡಿಕೊಳ್ಳುವುದು ಇಷ್ಟೆ, ತಾವು ಏನು

(ಶ್ರೀ ಡಿ. ದೇವರಾಜ ಅರಸ್)

ಠರಾವನ್ನು ಮಂಡಿಸಿದ್ದೀರಿ ಇದು ಚರ್ಚಾತ್ಮಕವಾದ ವಿಚಾರವಾಗಿದೆ. ಇದನ್ನು ನಾನು ತಾತ್ವಿಕವಾಗಿ ಒಪ್ಪುತ್ತೇನೆ. ಸದಸ್ಯರುಗಳ ಅಭಿಪ್ರಾಯವು ಹ್ಯೆಗೆ ಇದೆಯೋ ಹಾಗೆ ಸರ್ಕಾರದ ಅಭಿಪ್ರಾಯವೂ ಇದೆ. ತಾವು ಅನುಮತಿ ಕೊಡುವುದಾದರೆ ನಾನು ಕೇಂದ್ರಕ್ಕೆ ಬರೆಯುವುದಕ್ಕೆ ಸಿದ್ಧನಿದ್ದೇನೆ. ಮಾನ್ಯ ಶಾಮಣ್ಣನವರು ಹೇಳಿದ ಹಾಗೆ ಕಡ್ಡಾಯವಾಗಿ ಖರ್ಚಾಗಿರುವುದನ್ನು ಲೆಕ್ಕ ಕೊಡುವುದಕ್ಕೆ ಹಿಂದು ಮುಂದು ನೋಡುವಂಥ ಪರಿಸ್ಥಿತಿಗೆ ಈ ಒಂದು ಕಾನೂನನ್ನು ನಾವೇ ಇಟ್ಟುಕೊಂಡ ಹಾಗೆ ಆಯಿತು. ನಮಗೆ ಈ ಕಾನೂನಿನ ವಿಚಾರವನ್ನು ಹೇಳುವುದು ಕಷ್ಟವಾಗಿದೆ ಇಂಥ ಪರಿಸ್ಥಿತಿಯಲ್ಲಿ ನಾವು ಇದ್ದೇವೆ. ಇದು ಹೆಚ್ಚು ಆರ್ಟಿಫಿಷಿಯಲ್ ವಾತಾವರಣ ಇದ್ದಹಾಗೆ, ಬೋತ್ ಆರ್ಟಿಫಿಷಿಯಲ್ ಅಂಡ್ ನಫೊಕೇಟಿಂಗ್, ಪ್ರಾಮಾಣಿಕವಾಗಿರುವ ವಿಚಾರ ಹೇಳಬೇಕು ಎಂದರೆ, ಹೇಳುವುದಕ್ಕೆ ಅಡ್ಡಿ ಬಂದ ಹಾಗೆ ಆಗಿದೆ. ಇದರಿಂದ ಸಾಕಷ್ಟು ಮನಸ್ಸಿಗೆ ವ್ಯಥೆ ಪಟ್ಟಿರುವವರಲ್ಲಿ ನಾನೂ ಒಬ್ಬ. ನನ್ನ ದೃಷ್ಟಿಯಲ್ಲಿ ಇದು ಓಪನ್ ಆಗಿರುವುದು ಉತ್ತಮ. ನಾನು ಇದರ ಬಗ್ಗೆ ಹೆಚ್ಚಾಗಿ ಭಾಷಣ ಮಾಡಬೇಕಾಗಿಲ್ಲ. ಮಾನ್ಯ ನಾಗಣ್ಣನವರಿಗೆ ಪ್ರಾರ್ಥನೆ ಮಾಡುವುದು ಏನೆಂದರೆ, ಈ ಠರಾವಿನ ಒಂದು ಸ್ಪಿರಿಟ್ ಅನ್ನು ಒಪ್ಪಿ ಕೇಂದ್ರ ಸರ್ಕಾರಕ್ಕೆ ಬರೆಯುವುದಕ್ಕೆ ನಾನು ಸಿದ್ಧನಿದ್ದೇನೆ, ದಯವಿಟ್ಟು ಇದನ್ನು ವಾಪಸ್ ತೆಗೆದುಕೊಳ್ಳಬೇಕು.

† ಶ್ರೀ ಕೆ. ಎಂ. ನಾಗಣ್ಣ.—ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದನ್ನು ಕೇಳಿದ್ದು ಆಯಿತು, ಅದರೆ ಈ ರೀತಿ ಸಭೆಯ ಅಭಿಪ್ರಾಯವನ್ನು ಕೇಂದ್ರ ಸರ್ಕಾರಕ್ಕೆ ಮುಖ್ಯಮಂತ್ರಿಗಳೇ ಬರೆಯುವುದರಿಂದ ತಕ್ಕ ಪರಿಣಾಮವಾಗುತ್ತದೆ ಎನ್ನುವ ಭರವಸೆಯನ್ನು ನೀಡುವುದಾದರೆ ನಾನು ನನ್ನ ನಿರ್ಣಯವನ್ನು ವಾಪಸ್ ತೆಗೆದುಕೊಳ್ಳುವುದಕ್ಕೆ ತಯಾರಿದ್ದೇನೆ. ನನ್ನ ಅಭಿಪ್ರಾಯವಾದರೂ ಇಷ್ಟೇ ನಾವು ಶಾಸನ ಮಾಡತಕ್ಕ ನಾನ್ಯರಾಗಿ, ಕಾನೂನನ್ನು ಮಾಡುವವರಾಗಿ, ಕಾನೂನನ್ನು ಪೀರುತ್ತಿದ್ದೇವೆ ; ಚುನಾವಣೆಯಲ್ಲಿ 10 ಸಾವಿರ ರೂಪಾಯಿಗಿಂತ ಜಾಸ್ತಿ ಖರ್ಚು ಮಾಡಬಾರದು ಎನ್ನುವ ಕಾನೂನಿಗೆ ನಾವು ವಿರೋಧವಾಗಿ ನಡೆಯುತ್ತಿದ್ದೇವೆ. ಪ್ರತಿ ವರ್ಷವೂ ಒಬ್ಬ ಸದಸ್ಯನಿಗೆ ಇಪ್ಪತ್ತು ಸಾವಿರ ರೂಪಾಯಿಗಿಂತ ಕಡಿಮೆ ಖರ್ಚು ಆಗಿಲ್ಲ. ಅಂಥವರ ಕೈಯಲ್ಲಿ 10 ಸಾವಿರ ರೂಪಾಯಿಗಿಂತ ಕಡಿಮೆ ಪೆಚ್ಚವಾಗಿದೆ ಎಂದು ಸ್ಟೇಟ್‌ಮೆಂಟ್ ಬರೆಸಿಕೊಂಡು ದೇಶದ ಜನತೆಗೆ ಮೋಸ ಮಾಡುತ್ತಿದ್ದೇವೆ. ಸರ್ಕಾರಕ್ಕೆ ಸುಳ್ಳು ಲೆಕ್ಕ ಕೊಡುತ್ತಿದ್ದೇವೆ. ಆದ್ದರಿಂದ ನನಗೆ ಅನ್ನಿಸುವುದು, ಹೀಗೆ ಮಾಡುವುದು ಬೇಡ, ಈ ಚುನಾವಣೆಯ ಪೆಚ್ಚವನ್ನು ಕೊಡುವುದು ಬೇಡ ಎಂದು. ಯಾರು ಯಾರಿಗೆ ಎಷ್ಟೆಷ್ಟು ದುಡ್ಡು ಜಾಸ್ತಿ ಇದೆಯೋ ಅವರು ಖರ್ಚು ಮಾಡಿಕೊಂಡು ಹೋಗಲಿ. ಒಂದು ವೇಳೆ ಖರ್ಚು ಮಾಡುವುದು ಬೇಡ ಎಂದು ಹೇಳಿದರೆ ಅದನ್ನು ನಿಲ್ಲಿಸಲು ಮಡಕ್ಕಾಗುವುದಿಲ್ಲ. ಈ ಒಂದು ಠರಾವಿಗೆ ಸದನದ ಅಭಿಪ್ರಾಯ ಫೂರ್ತಿ ಇದೆ, ತಾವು ಕೇಂದ್ರ ಸರ್ಕಾರಕ್ಕೆ ಇದನ್ನು ತಿಳಿಯಪಡಿಸಿದರೆ ಹೆಚ್ಚಿನ ಪರಿಣಾಮವಾಗುತ್ತದೆಯೇ ಅಥವಾ ಬಿಸಿ ಸರ್ಕಾರದ ಅಭಿಪ್ರಾಯದಿಂದ ಹೆಚ್ಚಿನ ಪರಿಣಾಮವಾಗುತ್ತದೆಂದು ಹೇಳಿದರೆ ನಾನು ನನ್ನ ಠರಾವನ್ನು ವಾಪಸ್ ತೆಗೆದುಕೊಳ್ಳುವುದಕ್ಕೆ ಸಿದ್ಧನಿದ್ದೇನೆ.

ಶ್ರೀ ಕೆ. ಪ್ರಭಾಕರ್.—ಪಕ್ಷದ ಅಭ್ಯರ್ಥಿಗಳು 20 ಸಾವಿರ ರೂಪಾಯಿಗಳಿಗಿಂತ ಕಡಿಮೆ ಮಾಡ್ತಿನಲ್ಲ ಗೆದ್ದಿರಲಾರರೆಂದು ಮಾನ್ಯ ನಾಗಣ್ಣನವರು ಹೇಳಿದ ಮಾತು ರೆಕಾರ್ಡಿನಲ್ಲಿ ಬಂದಿರಬಹುದು, ಅದು ಆಧಾರ ರಹಿತವಾದ ವಿಚಾರ, ಅದನ್ನು ಮನ್ನಾ ಮಾಡಬೇಕು.

ಶ್ರೀ ಕೆ. ಎಂ. ನಾಗಣ್ಣ.—ಸರ್ಕಾರದ ಪರವಿಂದ ಬರೆದರೆ ಹೆಚ್ಚಿನ ಪರಿಣಾಮವಾಗುತ್ತದೆಯೇ ಅಥವಾ ಎಲ್ಲರ ಅಭಿಪ್ರಾಯವನ್ನು ಕೇಂದ್ರಕ್ಕೆ ತಿಳಿಸಿದರೆ ಹೆಚ್ಚಿನ ಪರಿಣಾಮವಾಗುತ್ತದೆಯೇ ಎನ್ನುವುದನ್ನು ತಿಳಿಸಬೇಕು.

ಶ್ರೀ ಡಿ. ದೇವರಾಜ ಅರಸ್.—ಉತ್ತರವನ್ನು ಆಗಲೇ ಹೇಳಿದ್ದೇನೆ. ಎಲ್ಲಾ ಸದಸ್ಯರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ, ಇದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಅದನ್ನು ಕೇಂದ್ರ ಸರ್ಕಾರಕ್ಕೆ ಬರೆದು ಹೇಳುತ್ತೇನೆ. ಇದನ್ನು ಬಿಟ್ಟುಬಿಡಬೇಕೇ ಅಥವಾ ಹೆಚ್ಚಿಗೆ ಮಾಡಬೇಕೇ ಎನ್ನುವ ಬಗ್ಗೆ ಕೇಂದ್ರದಲ್ಲೂ ಕೂಡ ಚರ್ಚೆ ನಡೆದಿದೆ. ಆದರೆ ಯಾವ ತೀರ್ಮಾನವನ್ನು ತೆಗೆದು ಕೊಂಡಿಲ್ಲ. ನಾನು ಇದರ ಬಗ್ಗೆ ಬರೆಯುತ್ತೇನೆ. ಮತ್ತು ಸಂದರ್ಭ ಬಂದಾಗ ಇದನ್ನು ಹೇಳುವುದಕ್ಕೆ ಸಿದ್ಧನಿದ್ದೇನೆ.

ಶ್ರೀ ಕೆ. ಎಂ. ನಾಗಣ್ಣ.—ನಾನು ನನ್ನ ನಿರ್ಣಯವನ್ನು ವಾಪಸ್ ತೆಗೆದುಕೊಳ್ಳುತ್ತೇನೆ.

The Rssolution was, by leave with drawn.

(ii) *re* : **Full Assistance of the Scheduled Cases and Scheduled Tribes College Students in the State.**

Sri P. P. HEGRE (Chikodi).—I move :-

"That this Assembly recommends that provision be made in the relevant rules to give full assistance to the Scheduled Castes and Scheduled Tribes' College Students in the State so as to achieve the desired results in the advancement of these Communities in education field:'

MADAM SPEAKER.—Resolution moved :

"That this Assembly recommends that provision be made in the relevant rules to give full assistance to the Scheduled Castes and Scheduled Tribes College Students in the State so as to achieve the desired results in the advancement of these Communities in the education field."

† ಶ್ರೀ ಪಿ. ಪಿ. ಹೆಗಡೆ.—ಮಾನ್ಯ ಸಭಾಧ್ಯಕ್ಷರೇ, ಎಲ್ಲರಿಗೂ ತಿಳಿದಂತೆ ಭಾರತದಲ್ಲಿ ಈ ಹರಿಜನ ಗಿರಿಜನ ಸಮಾಜ ಎಲ್ಲಾ ದೃಷ್ಟಿಯಿಂದಲೂ ಹಿಂದುಳಿದು ಈಗಲೂ ಚಟಪಡಿಸುತ್ತಿದೆ. ಹರಿಜನ ಗಿರಿಜನ ಸಮಾಜ ಹಿಂದು ಉಳಿಯುವುದಕ್ಕೆ ನಮ್ಮ ಭಾರತದಲ್ಲಿರುವ ಸಾಮಾಜಿಕ ಪದ್ಧತಿ ಮುಖ್ಯ ಕಾರಣವೆಂದು ನನ್ನ ಅಭಿಮತ. ಸ್ವಾವಿರಾರು ವರ್ಷಗಳಿಂದ ಹರಿಜನಗಿರಿಜನರಿಗೆ ಜೀವಿಸಲು ಯಾವ ಆಧಾರ ಇಲ್ಲದೆ ಗಾಳಿಗೆ ತೂರಿದ ಹಾಗೆ ಹಿಂದೂ ಸಮಾಜದಲ್ಲಿ ಬಿಟ್ಟಿರುವುದರಿಂದ ಅವರಿಗೆ ಆಸ್ಪದ ದೊರೆಯದೆ ಇರುವುದರಿಂದ ಇವತ್ತಿನ್ನು ದಾಸರಂತೆ ನಡೆಸಿಕೊಂಡಿರುವುದರಿಂದ ಇವರು ಯಾವ ಗತಿ ಕಾಣದೆ ಯಾವ ದೃಷ್ಟಿಯಿಂದಲೂ ಯಾವ ಕ್ಷೇತ್ರಗಳಲ್ಲೂ ಪ್ರಗತಿ ಹೊಂದದೆ ಹಾಗೆಯೇ ಹಿಂದುಳಿಯಬೇಕಾಯಿತು. ಅದು ಈ ಸದನಕ್ಕೆ ಗೊತ್ತಿರುವ ಹಾಗೆ ಸ್ವಾವಿರಾರು ವರ್ಷಗಳಿಂದ ಈ ಸಮಾಜವು ದಾಸರಂತೆ ಉಳಿದು ಬಂದಿದೆ. ಇವರಿಗೆ ಯಾವುದು ಹಕ್ಕು ಇಲ್ಲ ಯಾವ ರೀತಿ ಆಸ್ಪದ ಇಲ್ಲ. ಈ ರೀತಿ ಬೆಳೆಯುತ್ತಾ ಬಂದಿದ್ದಾರೆ. ಪುರಾಣಕಾಲದಿಂದಲೂ ಸ್ವಾವಿರಾರು ವರ್ಷಗಳಿಂದಲೂ ಈ ಸಮಾಜಕ್ಕೆ ಶಿಕ್ಷಣ ದೊರೆಯುವ ಯಾವ ಆಧಾರವು ಇರಲಿಲ್ಲ. ನಮ್ಮ ಈ ಭಾರತದಲ್ಲಿ ಚತುರ್ವರ್ಣ ಪದ್ಧತಿ ಪ್ರಕಾರ ಈ ಸಮಾಜವನ್ನು ಅತಿ ಅಶುದ್ಧ ಸಮಾಜವೆಂದು ಪರಿಗಣಿಸಲ್ಪಟ್ಟಿದೆ. ಇವರಿಗೆ ಓದು ಬರೆಯುವ ಹಕ್ಕು ಇಲ್ಲ, ಶಿಕ್ಷಣ ಪಡೆಯುವ ಹಕ್ಕು ಇಲ್ಲ ಈ ರೀತಿಯಿಂದ ಈ ಜನರಿಗೆ ಅತಿ ಅನ್ಯಾಯವಾಗಿದೆ. ಈ ತನಕ ಕಷ್ಟಪಡಬೇಕಾಗಿದೆ. ನಾವು ಹಿಂದು ಸಮಾಜದಲ್ಲಿ ಜನಿಸಿಬಂದರೂ ಇವರು ಹಿಂದುಗಳು ಹೌದೋ ಅಲ್ಲವೋ ಎಂಬ ಸಂಶಯ ಬರುತ್ತಿದೆ. ಒಂದು ಪ್ರಸಂಗದಲ್ಲಿ ಲೋಕಮಾನ್ಯ ತಿಲಕರವರು ಹಿಂದುಗಳು ಯಾರು ಎಂದು ಹೇಳಿದಕಾಲಕ್ಕೆ ವೇದವನ್ನು ಬಲ್ಲವನೇ ಹಿಂದೂ ಎಂದು ಹೇಳಿದ್ದಾರೆ. ಹಾಗಾದರೆ ಈ ಹರಿಜನಗಿರಿಜನ ಸಮಾಜದಲ್ಲಿ ಯಾರಿಗೆ ಓದಲು ಬರೆಯಲು ಬರಲಿಲ್ಲ, ಯಾರಿಗೆ ಶಿಕ್ಷಣದ ಹಕ್ಕು ಇರಲಿಲ್ಲ ಇವರು ವೇದ ಅಭ್ಯಾಸ ಮಾಡುವುದು ಹೇಗೆ ವೇದವನ್ನು ಅರಿಯುವುದು ಹೇಗೆ, ಇವರು ವೇದಗಳ ವಿಷಯದಲ್ಲಿ ಏನೂ ಗೊತ್ತಿಲ್ಲದೆ ಸಮಾಜವಾಯಿತು. ಹಿಂದೂ ವಾಕ್ಯ ಪ್ರಕಾರ ವೇದಬಲ್ಲವನೇ ಹಿಂದೂ ಎಂದು ಹೇಳಿದ್ದಾರೆ. ಈ ವಿಷಯಕ್ಕೆ ಈಗ ನಾನು ಹೋಗುವುದಕ್ಕೆ ಬಯಸುವುದಿಲ್ಲ. ಈ ಹರಿಜನಗಿರಿಜನ ಮೂಲವನ್ನು ಪರಿಶೋಧಿಸಲು ಬಯಸುವುದಿಲ್ಲ. ಇದು ಅತಿ ಗಂಭೀರವಾದ ವಿಷಯವಾಗಿದೆ. ಭಾರತದಲ್ಲಿ ಈ ಸಮಾಜ ಮೊದಲಿಂದಲೂ ದಾಸ್ಯತ್ವದಲ್ಲಿ ಇರುವವರನ್ನು ಹಾಗೆ ಬಿಟ್ಟುಕೊಂಡು ಹೋದರೆ ದೇಶದ ಭವಿಷ್ಯ ಒಳ್ಳೆಯದಾಗುವುದಿಲ್ಲ ಎಂದು ಅತ್ಯಂತ ದುಃಖದಿಂದ ಹೇಳಬೇಕಾಗುತ್ತದೆ. ನಮ್ಮ ಭಾರತಕ್ಕೆ ಬ್ರಿಟೀಷರು ಬರುವ ತನಕ ಹರಿಜನಗಿರಿಜನರಿಗೆ ಶಿಕ್ಷಣದ ಆಸ್ಪದ ಇರಲಿಲ್ಲ. ನನ್ನ ತಿಳುವಳಿಕೆ ಪ್ರಕಾರ ಮಹಾರಾಷ್ಟ್ರದಲ್ಲಿ ಒಬ್ಬ ಸಮಾಜ ಸುಧಾರಕ ಅಂದರೆ ಆ ಮಹನೀಯ ಮಹಾತ್ಮಾ ಜ್ಯೋತಿ ಬಾಫುಲೆ ಹರಿಜನಗಿರಿಜನರಿಗಾಗಿ ಕಳೆದ ಶತಮಾನದ ಮಧ್ಯದಲ್ಲಿ ಒಂದು ಶಾಲೆಯನ್ನು ಪುಣೆಯಲ್ಲಿ ಪ್ರಾರಂಭಮಾಡಿದರು ಆವರೆಗೆ ಹರಿಜನಗಿರಿಜನರ ಶಿಕ್ಷಣವು ಅವಕಾಶ ದೇಶದಲ್ಲಿ ಎಲ್ಲೂ ಇರಲಿಲ್ಲ. ಆ ಮಹಾನುಭಾವ ಈ ವಿಷಯದಲ್ಲಿ ಮಹಾ ತೊಂದರೆಗೆ ಈಡಾದ

(ಶ್ರೀ ಪಿ. ಪಿ. ಹೆಗಡೆ)

ಹಿಂದೂ ಸಮಾಜ ಅವನಿಗೆ ಬಹಿಷ್ಕಾರ ಮಾಡಿದರು. ಅವನನ್ನು ಜಾತಿಯಿಂದ ಹೊರಗೆ ಹಾಕಿದರು. ಶ್ರೀಮಾನ್ ಜ್ಯೋತಿಬಾಪುಲೆಯವರು ಆ ವಿಷಯದಲ್ಲಿ ಮಾತ್ರವಲ್ಲ ಸ್ತ್ರೀ ಸಮಾಜಕ್ಕೂ ಶಿಕ್ಷಣ ಕೊಡುವುದಕ್ಕೆ ಪ್ರಯತ್ನ ಮಾಡಿದರು. ಇದು ನಮ್ಮ ದೃಷ್ಟಿಯಲ್ಲಿ ಅವರನ್ನು ಅನ್ಪೃಶ್ಯರ ಮಹಾದೇವತೆ ಎಂದು ಭಾವಿಸುತ್ತೇವೆ. ಈ ರೀತಿಯ ಶಿಕ್ಷಣ ಪ್ರಾರಂಭ ಮಾಡಿದರು ಸಹಿತ ಆದು ಬಹು ಸಂಖ್ಯೆಯಲ್ಲಿ ಜನ ಶಿಕ್ಷಣ ಪಡೆಯಲು ಸಾಧ್ಯವಾಗಲಿಲ್ಲ. ಆ ಬಳಿಕ ನಮ್ಮ ಕೊಲ್ಲಾಪುರದ ಬರೋಡ ಮಹಾರಾಜರು ಈ ಜನರಿಗಾಗಿ ಕೆಲವು ಶಾಲೆಗಳನ್ನು ತೆಗೆದರು. ಆಮೇಲೆ ಬ್ರಿಟೀಷ್ ಸರ್ಕಾರದವರು ಹರಿಜನಗಿರಿಜನ ಶಾಲೆ ಶುರು ಮಾಡಿದರು. ಏನಾದರೂ ಬ್ರಿಟೀಷ್ ಸರ್ಕಾರದಿಂದ ಹರಿಜನ ಗಿರಿಜನರಿಗೆ ಹೆಚ್ಚು ಹೆಚ್ಚು ಸೌಲತ್ತುಗಳನ್ನು ಕೊಟ್ಟು ಹರಿಜನರಿಗೆ ಶಿಕ್ಷಣ ಸುಧಾರಣೆ ಮಾಡಬೇಕು ಎನ್ನುವ ಇಚ್ಛೆಯಿಂದ ಏನೂ ಮಾಡಲಿಲ್ಲ, ಹರಿಜನಗಿರಿಜನರ ಉದ್ಧಾರ ಮಾಡುತ್ತೇವೆಂದು ಶೋ ಮಾಡುವ ಸಲುವಾಗಿ ಮಾಡಿದರು. ಅಂತೂ ಈ ಶಿಕ್ಷಣದಲ್ಲಿ ಹರಿಜನರು ಪ್ರವೇಶ ಮಾಡಿದರು, ಆದರೆ ಎಷ್ಟು ಸೌಲತ್ತು ಕೊಡಬೇಕೋ ಅಷ್ಟು ಸೌಲತ್ತು ಅವರ ಕಾಲದಲ್ಲಿ ನಮಗೆ ದೊರೆಯಲಿಲ್ಲ.

[MR. DEPUTY SPEAKER in the Chair]

10-30 A. M.

ಇದೇ ಶತಮಾನ ಪ್ರಾರಂಭದಲ್ಲಿ ಡಾಕ್ಟರ್ ಅಂಬೇಡ್ಕರ್‌ರಿಗೆ ಆ ಕಾಲಕ್ಕೆ ಅವರಿಗೆ ಸಂಸ್ಕೃತ ಕಲಿಸಲಿಕ್ಕೆ ಯಾರೂ ಸಿದ್ಧರಾಗಿರಲಿಲ್ಲ. ಅವರು ಹಿಂದೂ ಧರ್ಮ ಅಭ್ಯಾಸ ಮಾಡಬೇಕು ಎಂದು ಮಹಾ ಇಚ್ಛೆ ಪಟ್ಟಿದ್ದರೂ ಕೂಡ ಆ ಮಹನೀಯರಿಗೆ ಸಂಸ್ಕೃತ ಕಲಿಸಲು ಯಾರೂ ಮುಂದೆ ಬರಲಿಲ್ಲ. ಇದು ದುಃಖದ ಸಂಗತಿ; ಇದು ನಮ್ಮ ಹಿಂದೂ ಸಮಾಜದ ಪದ್ಧತಿಯೊಳಗಿನ ಪರಿಣಾಮ. ಆದು ದರಿಂದ ಡಾಕ್ಟರ್ ಬಾಬಾಸಾಹೇಬ್ ಅಂಬೇಡ್ಕರ್ ಅವರು ಪರ್ಷಿಯನ್ ಭಾಷೆ ಕಲಿಯಬೇಕಾಯಿತು ಮತ್ತು ಅದರಲ್ಲಿ ತಜ್ಞರಾದರು. ಈ ರೀತಿ ಯಾವ ಸಂಸ್ಕೃತ ಭಾಷೆಯಿದೆಯೋ ಅದು ನಮಗೆ ಬಾರದಂತೆ, ನಾವು ಕಲಿಯದಂತೆ ಸಮಾಜದಲ್ಲಿ ನಿರ್ಬಂಧವಿತ್ತು. ಇಷ್ಟಾದರೂ ಹೇಗೋ ಡಾಕ್ಟರ್ ಅಂಬೇಡ್ಕರ್ ಅವರು ಹೆಚ್ಚು ತೊಂದರೆ ಅನುಭವಿಸದೆ ಬರೋಡದ ಒಂದು ರಾಜವಾನೆತನದ ಸಹಾಯ ಪಡೆದು ಉಚ್ಚ ಶಿಕ್ಷಣ ಪಡೆದು ಈ ಸಮಾಜದ ತೊಂದರೆಗಳನ್ನು ನಿವಾರಣೆ ಮಾಡುವುದರ ನಲುವಾಗಿ ಸರ್ಕಾರದ ಕೂಡ ಮತ್ತು ಹಿಂದೂ ಸಮಾಜದ ಕೂಡ ಹೋರಾಡಿದರು. ಹಿಂದೂ ಸಮಾಜದಲ್ಲಿರುವ ಚಾತುರ್ವರ್ಣ ನಮ್ಮ ಹರಿಜನ ಗಿರಿಜನ ಸಮಾಜವನ್ನು ಹಿಂದಕ್ಕೆ ಇಡಲು ಕಾರಣೀಭೂತವಾಗಿದೆ ಎನ್ನುವ ಸಂಗತಿಯನ್ನು ಡಾಕ್ಟರ್ ಅಂಬೇಡ್ಕರರು ಒತ್ತಿ ಒತ್ತಿ ಹೇಳಿದರೂ ಕೂಡ ಅದರ ಪರಿಣಾಮ ಆಗಬೇಷ್ಟು ಆಗಲಿಲ್ಲ. ಬ್ರಿಟಿಷ್ ಸರ್ಕಾರದವರು ಕೂಡ ಹರಿಜನ ಗಿರಿಜನರ ಉದ್ಧಾರ ಮಾಡಬೇಕೆಂದು ಸ್ವಯತ್ನ ಮಾಡಿದ್ದರೆ ಬೇಕಾಷ್ಟು ಮಾಡಬಹುದಾಗಿತ್ತು. ಆದರೆ ಅವರಿಗೆ ಈ ಸಮಾಜದ ಉದ್ಧಾರ ಮಾಡಬೇಕು, ದೇಶ ಉದ್ಧಾರ ಮಾಡಬೇಕು ಎನ್ನುವ ಕಲ್ಪನೆ ಇರಲಿಲ್ಲ. ಅವರ ಆಳ್ವಿಕೆಗೆ ಎಷ್ಟು ಜನರನ್ನು ಸಮಾಧಾನ ಪಡಿಸಬಹುದೋ ಅಷ್ಟು ಮಾತ್ರಕ್ಕೆ ಬೇಕಾದ ಕಾರ್ಯಗಳನ್ನು ಮಾಡಿದರು. ಈ ರೀತಿ ಹರಿಜನ ಗಿರಿಜನರು ಈ ತೊಂದರೆಗಳೊಳಗಿಂದ, ಸಂಕಟಗಳೊಳಗಿಂದ ಹಾದು ಬರಬೇಕಾಯಿತು. ಸ್ವತಂತ್ರ ಭಾರತದಲ್ಲಿ ಈ ಹರಿಜನಗಿರಿಜನರಿಗೆ ನಾನಾಷ್ಟು ಸೌಲಭ್ಯಗಳು ದೊರೆತು ನಾವು ತೀವ್ರಗತಿಯಿಂದ ಪ್ರಗತಿಯನ್ನು ಹೊಂದಬಹುದು ಎನ್ನುವ ಆಶೆ ಇತ್ತು. ಸ್ವಾತಂತ್ರ್ಯ ಪಡೆದ ಬಳಿಕ ನಾವು ಪ್ರಜಾರಾಜ್ಯ ಪಡೆದು ನಮ್ಮ ಸರ್ಕಾರ ಪೋಷಣೆ ಮಾಡಿತು. ನಮ್ಮ ಘಟನೆಯಲ್ಲಿ ಆ ಪ್ರಕಾರ ನಿರ್ಧಾರ ಕೈಗೊಂಡಿತು. ಆದರೂ ಸಹಿತ ಪ್ರಜಾರಾಜ್ಯದಲ್ಲಿ ಸಮರೀತಿಯಿಂದ ಸರ್ವರಿಗೆ ಸಮಾನ ಹಕ್ಕು, ಎಲ್ಲರಿಗೂ ನ್ಯಾಯ ದೊರೆಯಬೇಕೂ ಆ ರೀತಿಯಾಗಿ ದೊರೆಯಲೇ ಇಲ್ಲ. ಪ್ರಜಾಸತ್ತೆಯಲ್ಲಿ ಎಲ್ಲರಿಗೂ ರಾಜಕೀಯ ಸ್ವಾತಂತ್ರ್ಯವಿದೆ. ಆದರೂ ಕೂಡ ನಮ್ಮ ದೇಶದಲ್ಲಿ, ಆರ್ಥಿಕ ಮತ್ತು ಸಾಮಾಜಿಕ ಸ್ವಾತಂತ್ರ್ಯ ಹರಿಜನ ಗಿರಿಜನರಿಗೆ ದೊರೆಯದೆ ಹೋಗಿದೆ. ಹೀಗಾಗಿ ಉಳ್ಳವರು ಉಳ್ಳವರಾಗಿಯೇ ಇದ್ದಾರೆ, ಇಲ್ಲದವರು ಇಲ್ಲದವರಾಗಿಯೇ ಉಳಿದಿದ್ದಾರೆ. ಈ ಪರಿಸ್ಥಿತಿಯಲ್ಲಿ ಉಳ್ಳವರು ಎಂದರೆ ಶ್ರೀಮಂತರೇ ಶಿಕ್ಷಣ ಪಡೆಯುವುದಕ್ಕೆ ಸಾಧ್ಯವಿದೆ, ಅಂತೆಯೇ ಅವರು ಸತ್ತಾಸ್ಥಾನದಲ್ಲಿ ಇದ್ದಾರೆ. ಹರಿಜನಗಿರಿಜನರು ಬಡವರಾಗಿ ಹುಟ್ಟಿ ಶಿಕ್ಷಣಹೀನರಾಗಿ ಹಾಗೆಯೇ ಮುಂದುವರೆಯುತ್ತಿದ್ದಾರೆ.

ಸ್ವಾತಂತ್ರ್ಯ ದೊರೆತ ಬಳಿಕ ಹರಿಜನ ಗಿರಿಜನರಿಗೆ ಶಿಕ್ಷಣಕ್ಷೇತ್ರದಲ್ಲಿ ಕೆಲ ಒಂದು ರೀತಿಯಿಂದ ಸಹಾಯ ಸರ್ಕಾರ ಮಾಡುತ್ತಿದೆ. ಏನೂ ಮಾಡುತ್ತಿಲ್ಲವೆಂದು ಹೇಳುವುದಿಲ್ಲ. ಆದರೆ ಈ ಸಹಾಯ ಎಷ್ಟು ಕಡಮೆ ಎನ್ನುವುದನ್ನು ವಿಚಾರ ಮಾಡಬೇಕು, ಪ್ರತಿಯೊಬ್ಬರಿಗೂ ಶಿಕ್ಷಣದ ಅಗತ್ಯವಿದೆ. ನಾವು ಸುನಂಸ್ಕೃತರಾಗಬೇಕಾದರೆ, ಯೋಗ್ಯ ರೀತಿಯ ಜೀವನ ಸಾಗಿಸಬೇಕಾದರೆ ಶಿಕ್ಷಣ ಮುಖ್ಯವಾಗಿ ಬೇಕು. ಆ ರೀತಿಯಿಂದ ಹರಿಜನಗಿರಿಜನರಿಗೆ ಶಿಕ್ಷಣ ಬೇಕು ಎನ್ನುವುದರಲ್ಲಿ ಯಾವ ಭಿನ್ನಾಭಿಪ್ರಾಯವೂ ಇಲ್ಲ. ಯಾವ ಸಾಧನವೂ ಇಲ್ಲದೆ ಹರಿಜನಗಿರಿಜನರು ತಮ್ಮ ಹೊಟ್ಟೆಗೆ ಅನ್ನ ಹೇಗೆ ಗಳಿಸಬೇಕು ? ಒಂದು ತುತ್ತು ಅನ್ನ ಉಂಡು ಹೇಗೆ ಬದುಕಬೇಕು ಎಂದು ಇರುವಾಗ, ಅವರು ತಮ್ಮ ಮಕ್ಕಳಿಗೆ ಶಿಕ್ಷಣ ಕೊಡುವುದು ಸಾಧ್ಯವಾಗದೆ ಇದೆ. ನಮ್ಮ ಸರ್ಕಾರ ಹರಿಜನ ಮಕ್ಕಳಿಗೆ ಸ್ಕಾಲರ್‌ಷಿಪ್ ರೂಪದಲ್ಲಿ, ಇನ್ನೊಂದು ರೂಪದಲ್ಲಿ ಕೆಲವಂದು ಸಹಾಯವನ್ನು ಮಾಡುತ್ತ ಬಂದಿದೆ. ಆದರೆ ಈ ಸಹಾಯದಿಂದ ಎಷ್ಟು ಉಪಯೋಗವಾಗಬೇಕೋ ಅಷ್ಟು ಆಗುವುದಕ್ಕೆ ಸಾಧ್ಯವಿಲ್ಲ. 'ಬಡ ಸಮಾಜದಲ್ಲಿ 8–10 ವರ್ಷದ ಬಾಲಕನಿದ್ದಾರೆ, ಬಡತನದ ದೆಸೆಯಿಂದ ಅವನನ್ನು ಶಾಲೆಗೆ ಕಳುಹಿಸಲು ಸಾಧ್ಯವಿಲ್ಲದೆ ಯಾವುದಾದರೂ ಒಂದು ಕೆಲಸಕ್ಕೆ ಕಳುಹಿಸಿದರೆ ಹೆಚ್ಚು ಗಳಿಸಬಹುದು ಎನ್ನುವ ವಿಚಾರ ಆ ಬಡ ಜನರಲ್ಲಿರುತ್ತದೆ. ಕೆಲಸಕ್ಕೆ ಕಳುಹಿಸದೆ ಶಾಲೆಗೆ ಕಳುಹಿಸಿದರೆ ಆ ಬಡ ಜನರಿಗೆ ಒಂದು ರೀತಿಯಲ್ಲಿ ಅಪಕಾರವೇ ಆಗುತ್ತದೆ. ಹರಿಜನ ಗಿರಿಜನರನ್ನು ಉದ್ಧಾರ ಮಾಡಬೇಕು ಎಂದೇ ಡಾಕ್ಟರ್ ಅಂಬೇಡ್ಕರ್ ಅವರು ಎಲ್ಲರಿಗೂ ಶಿಕ್ಷಣ ಕೊಡಿರಿ ಎನ್ನುವ ಉಪದೇಶ ಮಾಡಿ ಹೋದರು. ಅವನ್ನನುಸರಿಸಿ ಈ ಜನಾಂಗಗಳಿಗೆ ಶಿಕ್ಷಣ ಕೊಡುವ ಪ್ರಯತ್ನ ನಡೆದು ಅವರಿಗೆ ಸ್ಕಾಲರ್‌ಷಿಪ್ ರೂಪದಲ್ಲಿ ಕೆಲವೊಂದು ಹಣವನ್ನು ಕೊಡುತ್ತಿದ್ದಾರೆ. ಇದು ಬರೀ ನಿಮಿತ್ತ ಮಾತ್ರ. ಪ್ರಾಥಮಿಕ ಶಾಲೆಯಲ್ಲಿರುವ ಬಾಲಕನಿಗೆ 50 ರೂಪಾಯಿ ಒಂದು ವರ್ಷಕ್ಕೆ ಕೊಟ್ಟರೆ, ಹೈಸ್ಕೂಲ್‌ನಲ್ಲಿ ಓದುವ ಬಾಲಕನಿಗೆ ವರ್ಷಕ್ಕೆ 75 ರೂಪಾಯಿ ಕೊಟ್ಟರೆ ಅದು ಬರೀ ನಿಮಿತ್ತ ಮಾತ್ರ ಕೊಟ್ಟಂತಾಗುತ್ತದೆ. ಈ ರೀತಿ ಸರ್ಕಾರದವನು ಅಲ್ಪ ಪ್ರಮಾಣದ ಸಹಾಯ ನೀಡುತ್ತ ಹೋದರೆ ಈ ಸಮಾಜ ಶಿಕ್ಷಣ ಪಡೆದು ಮುಂದುವರಿದ ಸಮಾಜದಂತೆ, ಅವರಿಗೆ ದೊರೆಯುವ ಎಲ್ಲ ಸೌಲಭ್ಯಗಳನ್ನೂ ಪಡೆದು ಜೀವನ ನಡೆಸುವುದಕ್ಕೆ ಸಾಧ್ಯವಿಲ್ಲ. ನನ್ನ ದೃಷ್ಟಿಯಲ್ಲಿ ಪ್ರಜಾ ರಾಜ್ಯದಲ್ಲಿ ದೇಶದೊಳಗಿರುವ ಪ್ರತಿಯೊಬ್ಬ ಮಾನವನಿಗೂ ಶಿಕ್ಷಣ ಕೊಡುವುದು ಸರ್ಕಾರದ ಕರ್ತವ್ಯ, ಸರ್ಕಾರದ ಧರ್ಮ. ಅದರಲ್ಲಿಯೂ ಅತಿ ಹಿಂದುಳಿದ ಹರಿಜನ ಗಿರಿಜನರಿಗೆ ಶಿಕ್ಷಣ ಕೊಡುವುದು ಸರ್ಕಾರದ ಕರ್ತವ್ಯವೆಂದು ನಾನು ಭಾವಿಸುತ್ತೇನೆ. ಈ ಕರ್ತವ್ಯವನ್ನು ಸರ್ಕಾರ ಪೂರ್ಣ ಮಾಡದೆ ಹೋದರೆ ಈ ಸಮಾಜ ಹೀಗೆಯೇ ಹಿಂದುಳಿಯುವ ಭೀತಿ ಇದೆ. ಈ ಸಮಾಜಕ್ಕೆಯೋಗ್ಯ ಶಿಕ್ಷಣ ಕೊಡಬೇಕಾಗಿದ್ದರೆ ಈಗಲಾದರೂ ಪ್ರಾಥಮಿಕ ಶಿಕ್ಷಣದಿಂದ ಉಚ್ಚ ಶಿಕ್ಷಣದವರೆಗೆ ಸರ್ಕಾರವೇ ಪೂರ್ಣ ಹೊಣೆ ಹೊರಬೇಕು. ಆದರೆ ನಾನು ತಂದಿರುವ ತರಾವಿನ ಮೂಲಕ ಕಾಲೇಜಿನಲ್ಲಿ ಶಿಕ್ಷಣ ಪಡೆಯುವ ವಿದ್ಯಾರ್ಥಿಗಳಿಗೆ ಮಾತ್ರ ಎಲ್ಲ ಸೌಲಭ್ಯ ದೊರೆಯುಬೇಕೆಂದು ಕೇಳಿರುವ ಕಾರಣವೇನೆಂದರೆ ಒಮ್ಮೆಲೇ ಅತಿ ಹೊರೆ ಸರ್ಕಾರದ ಮೇಲೆ ಬೀಳಬಾರದು, ಎಲ್ಲವನ್ನೂ ಮಾಡಬೇಕೆಂದು ಯಾವುದನ್ನೂ ಮಾಡದೆ ಹೋಗಬಾರದೆನ್ನುವ ದೃಷ್ಟಿಯಿಂದ ನಾನು ಕಾಲೇಜು ವಿದ್ಯಾಭ್ಯಾಸದ ಬಗ್ಗೆ ಮಾತ್ರ ತರಾವು ಮಂಡಿಸಿದ್ದೇನೆ. ಹರಿಜನ ಗಿರಿಜನರ ಸಮಾಜದಲ್ಲಿ ವಿದ್ವತ್ತನ್ನು ಪಡೆದ ಬಾಲಕರಿದ್ದಾರೆ, ಬುದ್ಧಿವಂತ ಬಾಲಕರಿದ್ದಾರೆ. ಆದರೆ ಅವರಿಗೆ ಆಸ್ಪದ ದೊರೆಯದೆ ಹೋದುದರಿಂದ, ಅವರಿಗೆ ಮುಂದೆ ಬರಲಿಕ್ಕೆ ಆಸ್ಪದವಿಲ್ಲದ್ದರಿಂದ, ಆ ವಿದ್ವತ್ತು, ಆ ಬುದ್ಧಿ ಇದ್ದರೂ ಶಿಕ್ಷಣ ಪಡೆಯದೆ ಮನೆಯಲ್ಲಿಯೇ ಕುಳಿತುಕೊಂಡು ಬಿಟ್ಟಿದ್ದಾರೆ.

ಈಗ ನೂರು ಜನ ಹರಿಜನ ಗಿರಿಜನ ವಿದ್ಯಾರ್ಥಿಗಳು ಪ್ರಾಥಮಿಕ ಶಾಲೆಗೆ ಹೋದರೆ ಅದರಲ್ಲಿ 15–20 ಜನ ಮಾಧ್ಯಮಿಕ ಶಾಲೆಗೆ ಹೋಗುವುದಿಲ್ಲ. ಪ್ರಾಥಮಿಕ ಶಾಲೆ ಮುಗಿಸಿ ಮನೆಯಲ್ಲಿ ಉಳಿದುಕೊಂಡು ಹೊಟ್ಟೆಪಾಡಿಗೋಸ್ಕರ ಉಪಜೀವನವನ್ನು ಸಾಗಿಸುತ್ತಾರೆ. ಹೈಸ್ಕೂಲಿನಲ್ಲಿಯೂ ಸಹ 100ಕ್ಕೆ 5ರಷ್ಟು ಮಂದಿ ಕಾಲೇಜು ಪ್ರವೇಶ ಮಾಡುವುದಿಲ್ಲ, ಕಾಲೇಜು ಪ್ರವೇಶ ಮಾಡಿದ ವರಲ್ಲಿಯೂ ಕೂಡ 100ಕ್ಕೆ 5 ಜನ ಕೊನೆ ತನಕ ಅಭ್ಯಾಸ ಮಾಡುವುದಿಲ್ಲ. ಆದ್ದರಿಂದ ಪ್ರಾಥಮಿಕ ಶಿಕ್ಷಣ ಪಡೆದವರಲ್ಲಿ 100ರಲ್ಲಿ ಒಬ್ಬರು ಅಥವಾ ಇಬ್ಬರು ಕೂಡ ಕಾಲೇಜು ಶಿಕ್ಷಣ ಪಡೆಯುವುದಕ್ಕೆ ಸಾಧ್ಯವಾಗಿಲ್ಲ. ಕಾಲೇಜಿನಲ್ಲಿ ಶಿಕ್ಷಣ ಕೊಡುವ ಕಾಲಕ್ಕೆ ಅವರಿಗೆ ಸರಕಾರದ ಕಡೆಯಿಂದ 200–300 ರೂಪಾಯಿಗಳ ಸ್ಕಾಲರ್‌ಷಿಪ್ ದೊರೆಯುತ್ತದೆ. ಅವಕ್ಕಿಂತ ಹೆಚ್ಚಿಗೆ ಹಣ ಅವರುಗಳಿಗೆ ದೊರೆಯುವುದಿಲ್ಲ. ಮತ್ತು ಹೆಚ್ಚಿನ ಕಾಲೇಜು ಶಿಕ್ಷಣ ಪಡೆಯಲು ಸಾಧ್ಯವಿಲ್ಲ. ಹಾಗಾಗಿ ವಿದ್ಯಾರ್ಥಿಗಳಿಗೆ ಶಿಕ್ಷಣ ಸಿಗದೆ ಅರ್ಧ ಶಿಕ್ಷಣವನ್ನು ಪಡೆದು ಮನೆಗೆ ಹಿಂದಿರುಗಿ ಹೋಗುತ್ತಾರೆ. ಇದನ್ನು ತಪ್ಪಿಸಬೇಕೆಂದು ಕೇಳಿಕೊಳ್ಳುತ್ತೇನೆ. ನಾನು ಒಂದು ಪ್ರಶ್ನೆ ಬಂದಾಗ ಹಿಂದೆ ಇದೇ

ಸದನದಲ್ಲಿ ಬಂದು ಮಾತು ಹೇಳಿದ್ದೆ. ಈ ಭಾರತದಲ್ಲಿ ಸಂಪತ್ತು, ವಿದ್ಯೆ ಮತ್ತು ಅಧಿಕಾರ ಇವುಗಳು ಕೇವಲ ಕೆಲವೇ ಜನರ ಕೈಯಲ್ಲಿ ಉಳಿದಿರುವುದರಿಂದ ಅವರೇ ಆಳುವವರು ಆಗಿದ್ದಾರೆ. ಉಳಿದವರು ಸಮಾಜದಲ್ಲಿ ದಾಸರಾಗಿ ಹಾಗೆಯೇ ಉಳಿದಿದ್ದಾರೆ. ಒಂದು ಸಂಗತಿ ನನಗೆ ನೆನಪು ಬರುತ್ತದೆ. ಅಧಿಕಾರದಲ್ಲಿರುವವರು ತನ್ನ ಸಲುವಾಗಿ, ತನ್ನ ಸಮಾಜದ ಸಲುವಾಗಿ ಉಪಯೋಗ ಮಾಡಿಕೊಳ್ಳುತ್ತಾನೆ. ಇದು ಮಾನವ ನಡತೆ. ಹರಿಜನ ಗಿರಿಜನರು ಬಡವರಾಗಿರುವುದರಿಂದ, ಇವರು ಸುಶಿಕ್ಷಿತರು ಆಗಿಲ್ಲದೆ ಇರುವುದರಿಂದ, ಬುದ್ಧಿವಂತರು ಆಗಿಲ್ಲದೆ ಇರುವುದರಿಂದ, ಇವರ ಕೈಯಲ್ಲಿ ಯಾವ ಅಧಿಕಾರವೂ ಇಲ್ಲದೆ ಇರುವುದರಿಂದ ಇವರ ಸುಖ ಸಲುವಾಗಿ ಇವರು ಪ್ರಗತಿ ಹೊಂದಿರಬೇಕು ಎನ್ನುವ ವಿಷಯದಲ್ಲಿ ಯಾರಲ್ಲಿಯೂ ಆಸೆ ಇಲ್ಲ. ಇವರು ಮುಂದೆ ಬರಲಿ ಎಂದು ಹೇಳುವವರು ಎಲ್ಲಿಯೋ ಕೆಲವು ಪುಣ್ಯಾತ್ಮರು ಕೆಲವೊಂದು ಸಮಾಜದಲ್ಲಿ ಮಾತ್ರ ಇರುತ್ತಾರೆ. ಅವರಿಗೆ ಈ ಹರಿಜನರ ಮೇಲೆ ಒಳ್ಳೆಯ ಭಾವನೆ ಇರುಬಹುದು. ಒಟ್ಟಿನ ಮೇಲೆ ನೋಡುವುದಾದರೆ, ಈ ಕೆಳ ಸಮಾಜದ ವಿಚಾರದಲ್ಲಿ ತಿರಸ್ಕಾರ ಮನೋಭಾವನೆ ಹೋದಾಗ ಅವರು ಮುಂದೆ ಬರುವುದಕ್ಕೆ ಸಾಧ್ಯವಾಗುತ್ತದೆ. ಪ್ರಜಾರಾಜ್ಯದಲ್ಲಿ ಮನುಷ್ಯ ವಿಚಾರ ಅಡಕವಾಗಿದೆ. ಲಿಬರ್ಟಿ, ಈಕ್ವಾಲಿಟಿ ಅಂಡ್ ಫ್ರೆಟರ್ನಿಟಿ. ಈ ಸಮಾನತೆ ಎಲ್ಲಿ ಇಲ್ಲವೋ ಅಲ್ಲಿ ಪ್ರಜಾರಾಜ್ಯ ಆಗುವುದಕ್ಕೆ ಸಾಧ್ಯವಿಲ್ಲ (ದ್ಯಾಟ್ ಕೆನಾಟ್ ಬಿ. ಎ. ಡೆಮಾಕ್ರೆಸಿ) ಸಮಾನತೆ ಅಷ್ಟೇ ಅಲ್ಲ ಬಂಧುಭಾವನೆ ಇರಬೇಕು. ನಾವು ಪ್ರಜಾ ರಾಜ್ಯದಲ್ಲಿ ಇದ್ದರೂ ನಮ್ಮಲ್ಲಿ ಸಮಾನತೆ ಇಲ್ಲ, ಬಂಧುತ್ವ ಇಲ್ಲ. ಇಂತಹ ಪರಿಸ್ಥಿತಿಯಲ್ಲಿ ಹರಿಜನರ ಕಲ್ಯಾಣ ಆಗಬೇಕಾದರೆ, ಅವರು ಸಮಾಜದಲ್ಲಿ ಸುಖ ಸಂತೋಷದಿಂದ ಜೀವಿಸಬೇಕಾದರೆ ಅವರು ಬುದ್ಧಿವಂತರಾಗಿ ಅಧಿಕಾರದಲ್ಲಿ ಇರಬೇಕೆಂದು ಹೇಳುತ್ತೇನೆ. ಅವರ ಕೈಯೊಳಗೆ ಅಧಿಕಾರ ಇರಬೇಕು. ಎಲ್ಲಿಯವರೆಗೆ ಇವರು ಅಧಿಕಾರ ಸ್ಥಾನದಲ್ಲಿ ಬರುವುದಿಲ್ಲವೋ ಅಲ್ಲಿಯವರೆಗೆ ಹರಿಜನ ಗಿರಿಜನರು ಸಮಾಜದಲ್ಲಿ ದುಃಖ ದಿಂದ ಇರಬೇಕಾಗುತ್ತದೆ. ಉಳಿದ ಸಮಾಜದ ಕೈಯಲ್ಲಿ ಇವರ ಭವಿತವ್ಯದ ಸುರಕ್ಷತೆಯಿಲ್ಲ ಎಂದು ನಿಶ್ಚಯವಾಗಿ ಹೇಳುತ್ತೇನೆ.

Mr. DEPUTY SPEAKER.—Just now the hon. Member said that he is coming to the subject, but he has again deviated from it. ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸಕ್ಕೋಸ್ಕರ ಪುಸ್ತಕ, ವಸ್ತ್ರ ಇನ್ನು ಬೇಕೋ ಆ ವಿಷಯ ತಪ್ಪು ಹೇಳಿ.

ಶ್ರೀ ಪಿ. ಪಿ. ಹೆಗಡೆ—ಅಧ್ಯಕ್ಷರೆ, ವಿದ್ಯಾರ್ಥಿಗಳಿಗೆ ಸ್ಕಾಲರ್‌ಷಿಪ್ ಕೇಳುವುದರಲ್ಲಿಯೇ ಎಲ್ಲಾ ಅವರಿಸಿಕೊಂಡಿದೆ. ಸ್ಕಾಲರ್‌ಷಿಪ್ ಏಕೆ ಬೇಕು, ಶಿಕ್ಷಣ ಯಾಕೆ ಬೇಕು ಎನ್ನುವ ವಿಚಾರ ಹೇಳುತ್ತೇ ದ್ದೇನೆ. ಭಾರತದಲ್ಲಿ ಹರಿಜನರು ಗಿರಿಜನರು ಕೂಡ ಉಳಿದ ಸಮಾಜದ ಜನರು ಹೇಗೆ ಸುಖವ ಜೀವನ ಮಾಡುತ್ತಿದ್ದಾರೋ ಹಾಗೆಯೇ ನಾವು ಕೂಡ ಮಾಡಬೇಕು ಎನ್ನುವುದು ನಮ್ಮ ಹಕ್ಕು ಇದೆ. ಸಂವಿಧಾನದೊಳಗೆ ಈ ರೀತಿ ಬರಬಿದೆ. ಅದನ್ನು ದೊರಕಿಸಿಕೊಳ್ಳುವ ಸಲುವಾಗಿ ಈ ಸಂಗತಿಗಳನ್ನು ಹೇಳಬೇಕಾಗಿದೆ. ನಮ್ಮ ಜನಕ್ಕೆ ಅಧಿಕಾರದಲ್ಲಿ ಇಲ್ಲದೆ ಇರುವುದರಿಂದ ಕೆಜ್ಜೆ ಹೆಜ್ಜೆಗೂ ನಮಗೆ ತೊಂದರೆಗಳು ಬರುತ್ತಿವೆ.

Mr. DEPUTY SPEAKER.—The Resolution is to give full assistance to the Scheduled Castes and Scheduled Tribes College students in the State so as to achieve the desired results in the advancement of these Communities in the education field. ಅಧಿಕಾರದ ವಿಚಾರದ ಕಡೆಗೆ ಆಮೇಲೆ ನೋಡುವಂತೆ.

ಶ್ರೀ ಪಿ. ಪಿ. ಹೆಗಡೆ—ನನ್ನ ಉದ್ದೇಶ ಮತ್ತು ಪರಿಣಾಮದ ಸಲುವಾಗಿ ನಾನು ವಿಷಯ ನಾಡಲು ಹತ್ತಿದೆ. ಈಗ ಸರಕಾರದಿಂದ ಕೊಡುವ ಸೌಲತ್ತುಗಳು ಹರಿಜನ ಗಿರಿಜನರ ಕಾಲೇಜು ವಿದ್ಯಾರ್ಥಿಗಳಿಗೆ ಕೊಡುತ್ತಿದ್ದಾರೆ ಅದರಿಂದ ಯಾವ ಪ್ರಯೋಜನವೂ ಆಗುತ್ತಾ ಇಲ್ಲ. ಇದರಿಂದ ಏನೋ ಒಬ್ಬರೋ ಇಬ್ಬರಿಗೆ ಪಾತ್ರ ಉಪಯೋಗ ಆಗುತ್ತಿದೆಯೇ ಹೊರತು ಉಳಿದ ವಿದ್ಯಾರ್ಥಿಗಳಿಗೆ ಶಿಕ್ಷಣವನ್ನು ಕಲಿತು ಮುಂದಕ್ಕೆ ಹೋಗುವಂಥಹ ಪರಿಸ್ಥಿತಿ ಬಂದಿಲ್ಲ ಮತ್ತು ಜೀವನ ಮಾಡುವುದಕ್ಕೂ ಕೂಡ ಅಸಾಧ್ಯವಾಗಿದೆ. ನಮ್ಮ ಹರಿಜನ ಗಿರಿಜನರು ಬಹು ಸಂಖ್ಯೆಯಲ್ಲಿ ಇರುವುದರಿಂದ ಅವರುಗಳು ಶಿಕ್ಷಣ ಪಡೆಯಬೇಕು, ಉಳಿದ ಸಮಾಜದ ಜನಗಳ ಜೊತೆಗೆ ಸರಿಸಮಾನರಾಗಿ ಹೋಗಬೇಕು ಮತ್ತು ಸುಖ ಜೀವನ ಮಾಡಬೇಕು ಎಂದು ಹೇಳುತ್ತೇನೆ.

ಮೊದಲು ಠರಾವಿನಲ್ಲಿ ಹೇಳಿದ ಸಂಗತಿಯನ್ನು ತಿಳಿಸಿದ್ದೇನೆ. ಕಾಲೇಜು ವಿದ್ಯಾಭ್ಯಾಸದ ಸಂಪೂರ್ಣ ಜವಾಬ್ದಾರಿಯನ್ನು ಸರಕಾರವೇ ತೆಗೆದುಕೊಳ್ಳಬೇಕು ಮತ್ತು ಹರಿಜನ ಗಿರಿಜನ ವಿದ್ಯಾರ್ಥಿಗಳು ಕಾಲೇಜು ಪ್ರವೇಶ ಪ್ರಾಮಾಡಿದಂದಿನಿಂದ ಮೊದಲು ಅವರಿಗೆ ಎಲ್ಲಾ ರೀತಿಯ ಸೌಲಭ್ಯಗಳು ಎಂದರೆ ಹಾಸ್ಟಲುಗಳು ಪ್ರತಿಯೊಂದು ಜಿಲ್ಲೆಯಲ್ಲೂ ಇರಬೇಕೆಂದು ಹೇಳುತ್ತೇನೆ. ಪ್ರಸ್ತುತ ವಿದ್ಯಾರ್ಥಿಗಳು ಕಾಲೇಜು ವಿದ್ಯಾಭ್ಯಾಸಕ್ಕೆ ಬರುತ್ತಾರೆ ಅವರಿಗೆಲ್ಲಾ ರೀತಿಯಿಂದಲೂ ಎಂದರೆ ಆಹಾರ, ಆರಿವೆ, ಪುಸ್ತಕ ಇತ್ಯಾದಿ ಸೌಲಭ್ಯಗಳು ವಿದ್ಯಾರ್ಥಿಗಳಿಗೆ ಪುಕ್ಕಟ್ಟೆಯಾಗಿ ಸಿಗುವ ಹಾಗೆ ಸರಕಾರವು ಕೂಡಲೆಯೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಇವರುಗಳು ಕಾಲೇಜು ಶಿಕ್ಷಣವನ್ನು ಪೂರ್ತಿ ಮಾಡುವ ಹೊಣೆಯನ್ನು ಸರಕಾರದವರು ವಹಿಸಿಕೊಳ್ಳಬೇಕು. ಇಷ್ಟೇ ಅಲ್ಲ ಮೊದಲು ಹೇಳಿದ ಪ್ರಕಾರ, ಹರಿಜನ ಗಿರಿಜನ ಸಮಾಜದಲ್ಲಿ ಕೆಲವು ವಿದ್ಯಾರ್ಥಿಗಳು ಅತ್ಯಂತ ಬುದ್ಧಿವಂತ ವಿದ್ಯಾರ್ಥಿಗಳಾಗಿರುತ್ತಾರೆ. ಇಂತಹವರು ಶಿಕ್ಷಣ ಪೂರ್ಣವಾದ ಬಳಿಕ ಕಾಲೇಜುಗಳಲ್ಲಿ ಹೆಚ್ಚಿನ ಬುದ್ಧಿವಂತ ವಿದ್ಯಾರ್ಥಿಗಳನ್ನು ಆರಿಸಿ ಅವರನ್ನು ಉಚ್ಚ ಶಿಕ್ಷಣಕ್ಕಾಗಿ ಕಳಿಸುವ ವ್ಯವಸ್ಥೆಯನ್ನು ಸಹ ಸರಕಾರದವರು ಮಾಡಬೇಕು. ಈಗ ನರ್ಸರಿ ಸ್ಕೂಲಿನಿಂದ ಪ್ರಾರಂಭವಾಗಿ ಹರಿಜನ ಗಿರಿಜನರು ಮೈಕರಿಯುಲ್ಲಿ ಥೂವ್ ಕ್ಲಾಸಿನಲ್ಲಿ ಇದ್ದಾರೆ ಎಂದರೆ ಥರ್ಡ್ ಕ್ಲಾಸ್ ಮತ್ತು ಫೋರ್ಥ್ ಕ್ಲಾಸಿನಲ್ಲಿ ಇದ್ದಾರೆಯೇ ವಿನಾ ಸೆಕೆಂಡ್ ಕ್ಲಾಸ್ ಅಥವಾ ಫಸ್ಟ್ ಕ್ಲಾಸಿನಲ್ಲಿ ಇಲ್ಲ ಎಂದು ಹೇಳುತ್ತೇನೆ. ನನ್ನ ಹಾನ್ಯನಾಲಯಕರು ಹೇಳಿದರು. ನರಕಾರಿ ನೌಕರಿಯಲ್ಲಿ ಹರಿಜನರಿಗೆ ಸಾಕಷ್ಟು ಪ್ರಾತಿನಿಧ್ಯ ದೊರಕಲಿಲ್ಲ, ಅದಕ್ಕೆ ಕಾರಣ, ಅವರಲ್ಲಿ ಅರ್ಜಿದಾರ ಅಭ್ಯರ್ಥಿಗಳ ಪ್ರಾತಿನಿಧ್ಯ ದೊರಕಲಿಲ್ಲ ಎಂದು ಹೇಳಿದರು. ಅದೂ ಒಂದು ಕಾರಣ. ಈಗ ನರಕಾರದಲ್ಲಿ ಅಲ್ಪಸ್ವಲ್ಪ ಸಹಾಯ ದೊರೆಯುತ್ತಿದ್ದೆ. ನರಕಾರಿ ರಂಗದಲ್ಲಿ ಪ್ರವೇಶಿಸಿನ್ನಪ್ರಕಾರ ಸ್ಥಾನ ಪಡೆಯಬೇಕಾದರೆ ನಮಗೆ ಆಗಿಲ್ಲ. ಈಗ ಖಾಸಗೀ ರಂಗದಲ್ಲಿಯೂ ಕೂಡ ಸ್ಥಾನ ಕೊಟ್ಟಿಲ್ಲ. ಇನ್ನೂ ಮುಂದೆ ಖಾಸಗೀ ರಂಗದಲ್ಲಿಯೂ ಕೂಡ ಸ್ಥಾನ ಪಡೆಯಬೇಕಾದರೆ ಹರಿಜನ ಗಿರಿಜನರಲ್ಲಿ ನುಶಿಕ್ಷಿತರು ಶಿಕ್ಷಣ ಪಡೆದುಕೊಳ್ಳುವುದರಲ್ಲಿ ಸಾಕಷ್ಟು ಮುಂದೆ ಬರಬೇಕೆಂದು ಹೇಳುತ್ತೇನೆ. ಇದಕ್ಕಾಗಿ ನಾನು ನರಕಾರದಲ್ಲಿ ಕೇಳ್ಕೊಳ್ಳುವುದು ಹೈಸ್ಕೂಲು ವಿದ್ಯಾರ್ಥಿಗಳಿಗೆ ಸಾಕಷ್ಟು ಹೆಚ್ಚು ಸಹಾಯ ಗಳನ್ನು ದೊರೆಯುವಂತೆ ಮಾಡಿಸಿ ಕೊಡಬೇಕೆಂದು. ಇದರ ಸಂಪೂರ್ಣ ಹೊಣೆಯನ್ನು ನರಕಾರವೇ ವಹಿಸಬೇಕು. ಇದರಲ್ಲಿ ಬುದ್ಧಿವಂತರಾಗಿರುವವರು ಖಾಸಗಿಯಾಗಿ ಬಂದ ನಂತರ ಇವರನ್ನು ಉಚ್ಚ ಶಿಕ್ಷಣಕ್ಕೆ ಕಳುಹಿಸಿ ಅವರಿಗೆ ತಗಲುವ ಎಲ್ಲ ಖರ್ಚುಗಳನ್ನೂ ನರಕಾರವೇ ವಹಿಸಿಕೊಳ್ಳಬೇಕು ಮತ್ತು ಹರಿಜನ ಹಾಗೂ ಗಿರಿಜನರಿಗೆ ಯೋಗ್ಯವಾದ ಎಲ್ಲ ಸಹಾಯ ನಲಕರಣಗಳನ್ನೂ ಒದಗಿಸಿ ಕೊಡುವುದು ಅವಶ್ಯವಾಗಿದೆ. ಮತ್ತು ಇದು ನರಕಾರದ ಕರ್ತವ್ಯವೂ ಆಗಿದೆ. ಮತ್ತು ರಾಜ್ಯಾಂಗದ ಘಟನೆಯಲ್ಲಿ ನಮ್ಮೂಧಾರಿಸುವಂತೆ ಹರಿಜನ, ಗಿರಿಜನರಿಗೆ ವಿಶೇಷ ವಿಷಯದಲ್ಲಿ ಹಾಗೂ ಜೇರೆ ಕ್ಷೇತ್ರಗಳಲ್ಲಿ ಸಾಕಷ್ಟು ಪ್ರಪಲತಾ ಗಳು ದೊರೆಯುವಂತೆ ಮಾಡುವುದು ನರಕಾರದ ಕರ್ತವ್ಯ. ಇವರು ಕೂಡ ಸಮಾಜದ ಇತರ ಜನರೊಂದಿಗೆ ಸುಖವಾಗಿ ಜೀವನ ನಾಡಲು ಅವಕಾಶ ಮಾಡಿಕೊಡಬೇಕು. ಸುಖ ಜೀವನ ಮಾಡುವುದು ಇವರ ಹಿಂದು ಹಕ್ಕೂ ಆಗಿದೆ. ಇದರ ಬಗ್ಗೆ ನರಕಾರ ಯೋಜನೆ ಮಾಡಿ ಎಲ್ಲರಿಗೂ ಅನುಕೂಲಗಳನ್ನು ಒದಗಿಸಿಕೊಡಬೇಕು. ಮತ್ತು ಇಲ್ಲ ತಂದಿರುವ ಠರಾವು ಪನ್ನು ಬೆಂಬಿದೆ. ಇದನ್ನು ಎಲ್ಲರೂ ಒಪ್ಪಿ ಸಹಾಯ ಮಾಡಬೇಕು ಎಂದು ಹೇಳಿ ಅಧ್ಯಕ್ಷರು ಇಷ್ಟು ಮಾತಾಡಲು ಅವಕಾಶ ಕೊಟ್ಟುದಕ್ಕಾಗಿ ಅವರನ್ನೂ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆಂಗೋಡು ತಿಮ್ಮಪ್ಪ (ಸಾಗರ): ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರೆ ಶ್ರೀ ಹೆಗರೆಯವರು ತಂದಿರತಕ್ಕಂತಹ ಗೊತ್ತುವಳಿಯನ್ನು ನಾನು ಸಂಪೂರ್ಣವಾಗಿ ಬೆಂಬಲಿಸುತ್ತೇನೆ. ಕಳೆದ ಇಪ್ಪತ್ತೈದು ವರ್ಷಗಳಿಂದಲೂ ಹರಿಜನ ಗಿರಿಜನ ಮಕ್ಕಳಿಗೆ ವಿದ್ಯಾಭ್ಯಾಸ ಸಂಬಂಧವಾಗಿ ಕಾಲಕಾಲಕ್ಕೆ ನಾನಾ ವಿಧವಾದ ಕಾರ್ಯಕ್ರಮಗಳು ನಡೆದರೂ ಅವೆಲ್ಲ ಮರ್ಜಿಯಂತೆ ಆಗುತ್ತಿದೆ. ಇದುವರೆಗೆ ಇಪ್ಪತ್ತೈದು ವರ್ಷಗಳಾದರೂ ಕೂಡ ವಿದ್ಯಾಭ್ಯಾಸ ಮಟ್ಟದಲ್ಲಿ ಹರಿಜನ ಗಿರಿಜನರ ಮಕ್ಕಳಿಗೆ ಸಾಕಷ್ಟು ಸಹಾಯಗಳು ಸಿಗಲಿಲ್ಲ. ಅವರಿಗೆ ಸಿಗತಕ್ಕಂತ ಸೌಲಭ್ಯಗಳು ಕೂಡ ಏನೋ ಒಂದು ರೀತಿಯಾಗಿ ಮರ್ಜಿಯಂತೆ ಸಿಗುವಂತಹ ಒಂದು ಹವ್ಯಾನ ಇದುವರೆಗೂ ನಡೆದುಕೊಂಡು ಬಂದಿದೆ. ಇವರಿಗೆ ಪ್ರಾಥಾನ್ಯ ವಹಿಸಿರುವ ನರಕಾರದಲ್ಲೂ ಸಾಕಷ್ಟು ಕೊಡಲಿಲ್ಲ. ಇಲ್ಲಿ ಬೇರೆ ಸದಸ್ಯರುಗಳಿಗೂ ಅನಸಕ್ತಿ ವಹಿಸಿಲ್ಲ ಎಂದಿಗೆಲ್ಲ. ಹೀಗಾಗಿ ವಿದ್ಯಾಭ್ಯಾಸ ಕ್ಷೇತ್ರದಲ್ಲಿ ಹರಿಜನ ಗಿರಿಜನರ ಮಕ್ಕಳು ಅನುಮಾನವಂತರಾಗಿದೆ. ಪಕ್ಕಿದ್ದರೆ ಈ ಜನರು ಮುಂದುವರಿಯಲು ಸಾಧ್ಯವೇ ಇದನ್ನು ನರಕಾರ ಯೋಜನೆ ಮಾಡಲಲ್ಲ. ಸಾಮಾನ್ಯ

(ಶ್ರೀ ಕಾಗೋಡು ತಿಮ್ಮಪ್ಪ)

ವಾಗಿ ಇವರಿಗೆ ಸಿಗಬೇಕಾದ ಕೆಲವು ಸೌಕರ್ಯಗಳು ಕೂಡ ಸಿಗುತ್ತಿಲ್ಲ. ಕೆಲವು ಕಡೆ ಇಂತಹ ವಿದ್ಯಾರ್ಥಿಗಳಿಗಾಗಿಯೇ ವಿದ್ಯಾರ್ಥಿನಿಲಯಗಳು ಹಾಗೂ ಆಶ್ರಮಗಳು ಅಲ್ಲಲ್ಲಿ ಮಾಡಲಾಗಿದೆ. ನಮ್ಮ ಕಡೆ ಕೂಡ ಇಂತಹ ಒಂದು ಆಶ್ರಮ ಇದೆ. ಇಲ್ಲಿಗೆ ಸರಕಾರ ಇಲ್ಲವೇ ಬೇರೆ ಜನರು ಹೋಗಿ ನೋಡಿದರೆ ಇವರ ಪೂರ್ಣ ಸ್ಥಿತಿ ನಿನಿದೆ ಎನ್ನುವುದು ಚೆನ್ನಾಗಿ ಗೊತ್ತಾಗುತ್ತದೆ. ಇಂತಹ ಆಶ್ರಮಕ್ಕೆ ಇಲ್ಲವೇ ವಿದ್ಯಾರ್ಥಿನಿಲಯಕ್ಕೆ ಸೇರುವ ಮಕ್ಕಳ ಸಂಖ್ಯೆ ಸುಮಾರು 25 ರಿಂದ 30 ರ ವರೆಗೆ ಇರುತ್ತದೆ. ಇಲ್ಲಿ ಸಿಗತಕ್ಕ ಸೌಕರ್ಯಗಳನ್ನು ನೋಡಿದರೆ ಇಲ್ಲಿನ ಹರಿಜನ ಗಿರಿಜನ ಮಕ್ಕಳು ಓದುವ ಪರಿಸ್ಥಿತಿ ಇದೆಯೇ ಎನ್ನುವುದು ಗೊತ್ತಾಗುತ್ತದೆ ಏನೋ ಇಲ್ಲಿ ನಮ್ಮ ಮುಂದೆ ಕೆಲವು ಹರಿಜನ ಮಂತ್ರಿಗಳು ಹಾಗೂ ಕೆಲ ಸದಸ್ಯರು ಚೆನ್ನಾಗಿ ವಿದ್ಯಾವಂತರಾಗಿದ್ದಾರೆಂದು ತಿಳಿದುಕೊಂಡು ಎಲ್ಲ ಕಡೆಯಲ್ಲೂ ಇಂತಹ ಜನ ಹೀಗೆ ಇರುತ್ತಾರೆ ಎಂದು ಭಾವಿಸಿದರೆ ಅದು ತಪ್ಪಾಗುತ್ತದೆ. ಇಂತಹ ಭಾವನೆ ತಪ್ಪು. ಗ್ರಾಮಾಂತರ ಪ್ರದೇಶದಲ್ಲಿರುವ ಹರಿಜನ ಹಾಗೂ ಗಿರಿಜನರ ಸ್ಥಿತಿ ಕೂಡ ಬಹಳ ದಾರುಣವಾಗಿದೆ. ಅವರು ವಿದ್ಯಾಭ್ಯಾಸಕ್ಕಾಗಿ ಖರ್ಚು ಮಾಡಿ ಓದುವ ಸ್ಥಿತಿಯಲ್ಲಿಲ್ಲ. ಇಂತಹ ಮಕ್ಕಳು ಬಂದು ಓದಲು ಸಾಕಷ್ಟು ಆಕರ್ಷಣೆ ಕೂಡ ಇಲ್ಲಿಲ್ಲ. ಸರಕಾರ ಸುವ್ಯವಸ್ಥೆಯಿಂದ ಇಂತಹ ಜನರ ವಿದ್ಯಾಭ್ಯಾಸಕ್ಕೆ ಅವಕಾಶ ಮಾಡದೇ ಇದ್ದರೆ ಇವರು ಹೇಗೆತಾನೇ ವಿದ್ಯಾಭ್ಯಾಸ ಮಾಡಲು ಸಾಧ್ಯ? ಇವತ್ತು ಒಬ್ಬ ವಿದ್ಯಾರ್ಥಿಗೆ ಸರಕಾರ 30 ರೂಪಾಯಿನಂತೆ ಕೊಡುತ್ತದೆ. ಇದರಲ್ಲೇ ಅವನಿಗೆ ಪುಸ್ತಕ, ಸೋಪು ಇತ್ಯಾದಿಗಳಿಗೆಲ್ಲಾ ಖರ್ಚಾಗಬೇಕು ಬಟ್ಟೆಕೊಡಬೇಕು ಇವೆಲ್ಲ ಖರ್ಚು ಕಳೆದು ಊಟಕ್ಕೆ ಕೇವಲ ಹತ್ತು ರೂಪಾಯಿ ಮಾತ್ರ ಉಳಿಯುತ್ತದೆ, ಇದರಿಂದ ಯಾವ ರೀತಿ ಆಹಾರ ಕೊಡಲು ಸಾಧ್ಯ ಇದನ್ನು ಯಾರೂ ಸರಿಯಾಗಿ ಯೋಚನೆ ಮಾಡಲಿಲ್ಲ. ಈ ಹಾಸ್ಟಲ್‌ಗೆ ಹೋಗಿ ನೋಡಿ, ಇಲ್ಲಿರುವ ಮಕ್ಕಳಿಗೆ ಊಟ ಹೇಗೆ ಕೊಡುತ್ತಾರೆ ಎಂದರೆ ಇಲ್ಲಿನ ಹುಡುಗರು ತಟ್ಟೆ ಹಿಡಿದು ಕೂರುತ್ತವೆ. ಇವಕ್ಕೆ ಒಂದು ತುತ್ತು ಅನ್ನ ಇಲ್ಲವೇ ರಾಗಿ ಮುದ್ದೆ ಮತ್ತು ತಿಳಿಸಾರು ಇಲ್ಲವೇ ಸ್ವಲ್ಪ ಗಂಜಿ ಕೊಡುತ್ತಾರೆ. ಇವನ್ನು ತಿಂದು ಓದಬೇಕಾಗಿ ಬಂದಿದೆ, ಇನ್ನು ವರ್ಷಕ್ಕೆ ಎರಡು ಜೊತೆ ಬಟ್ಟೆ ಎಂದು ಕೊಡುತ್ತಾರೆ. ಇದೇನೋ ಒಂದು ರೀತಿಯಾದ ಖಾದಿ ಬಟ್ಟೆ ಎನ್ನುತ್ತಾರೆ. ಇದು ನೀರಿಗೆ ಹಾಕಿದರೆ ಏನಾಗುತ್ತದೆ ಎಂದರೆ ಬಲೆ ಬಲೆಯಾಗಿ ತೂತು ಬೀಳುತ್ತದೆ, ಇಂತಹ ಬಟ್ಟೆಗಳನ್ನು ಈ ಹುಡುಗರು ಉಡಬೇಕಾಗಿ ಬಂದಿದೆ. ಹೀಗಿರುವ ಮಕ್ಕಳಿಗೆ ಯಾವ ರೀತಿ ಹೇಗೆ ಓದಲು ಸಾಧ್ಯ. ಇಂತಹ ಆಶ್ರಮಗಳು ಅನೇಕ ಈಗಲೂ ರಾಜ್ಯದಲ್ಲಿವೆ. ಬೇಕಾದರೆ ಸರಕಾರದವರು ಹೋಗಿ ಅದನ್ನು ನೋಡಬಹುದು. ಇಲ್ಲಿರುವ ವಾರ್ಡನ್‌ಗಳು ಹಾಗೂ ಇತರ ಅಧಿಕಾರಿಗಳು ಬೇರೆ ಇದರಲ್ಲಿ ಮಾಮೂಲು ಸಂಪಾದನೆ ಮಾಡಿ ಲಪಟಾಯಿಸುತ್ತಾರೆ. ಇದನ್ನು ಬೇರೆ ಹೇಳಬೇಕಾಗಿಲ್ಲ. ಹೀಗಾಗಿ ಇಲ್ಲಿಗೆ ಬರುವ ಹರಿಜನ ಮಕ್ಕಳಿಗೆ ಸರಿಯಾಗಿ ಊಟವೂ ಇಲ್ಲ ಬಟ್ಟೆಯೂ ಇಲ್ಲ. ಇಂತಹ ಮಕ್ಕಳು ಹೇಗೆ ತಾನೇ ಓದಲು ಸಾಧ್ಯ. ಶಿಕ್ಷಣದಲ್ಲಿ ಮೂಲಭೂತವಾಗಿ ಮಾರ್ಪಾಡು ಮಾಡಬೇಕು. ಇತರ ಸಂಸ್ಥೆಗಳಲ್ಲಿ ಯಾವ ರೀತಿಯಾದ ಸಹಾಯಗಳನ್ನು ವಿದ್ಯಾಭ್ಯಾಸ ಮಾಡುವ ಮಕ್ಕಳಿಗೆ ಕೊಡುತ್ತಿದ್ದಾರೋ ಅದೇ ರೀತಿಯ ಸೌಕರ್ಯಗಳನ್ನು ಇವರಿಗೂ ಒದಗಿಸಿ ಕೊಡಬೇಕು. ಉದಾಹರಣೆಯಾಗಿ ಕಳೆ ಬೇಕಾದರೆ ಮೌಂಟು ಕಾರ್ಮೆಲ್ ಕಾಲೇಜಿನವರು ನಡೆಸುತ್ತಿರುವ ಹಾಸ್ಟಲುಗಳಲ್ಲಿ ಇಲ್ಲವೇ ಸೆಂಟ್ ಜೋಸೆಫ್ ಕಾಲೇಜು ಹಾಸ್ಟಲ್‌ನಲ್ಲಿ ಇರುವ ಹುಡುಗರಿಗೆ ಯಾವ ರೀತಿಯಾಗಿ ಸೌಕರ್ಯಗಳನ್ನು ಒದಗಿಸಿಕೊಡುತ್ತಿದ್ದಾರೋ ಅದೇ ರೀತಿಯಾಗಿ ಇಂತಹ ಮಕ್ಕಳಿಗೂ ಹಾಸ್ಟಲುಗಳನ್ನು ಮಾಡಿ ಎಲ್ಲ ಸೌಕರ್ಯಗಳನ್ನೂ ಒದಗಿಸಿಕೊಡುವುದು ಅಗತ್ಯ? ಇಲ್ಲಿ ಹೇಗೆ ಊಟ ಉಪಚಾರಗಳು ಮಕ್ಕಳಿಗೆ ಸಿಗುತ್ತೋ ಇದೇ ಮಾದರಿಯಲ್ಲಿ ಇಂತಹ ಹರಿಜನ ಮಕ್ಕಳಿಗೂ ಸಿಗುವ ವ್ಯವಸ್ಥೆ ಮಾಡಬೇಕು. ಈಗ ಇರುವ ಪರಿಸ್ಥಿತಿಯಲ್ಲಿ ಹರಿಜನ ಮಕ್ಕಳು ಸಾಕಷ್ಟು ವಿದ್ಯಾಭ್ಯಾಸ ಮಾಡದೇ ಇರುವುದರಿಂದಾಗಿ ಇಂತಹ ಜನರು ಎಂ.ಎ.ಎಸ್. ಗಾಗಲೀ ಇಲ್ಲವೇ ಐ.ಎ.ಎಸ್. ಗಾಗಲಿ ಪರೀಕ್ಷೆಗೆ ಕುಳಿತುಕೊಳ್ಳುವ ಸ್ಥಿತಿಯಲ್ಲಿಲ್ಲ. ಇದಕ್ಕಾಗಿ ಸರಕಾರ ತನ್ನ ರೀತಿ ನೀತಿಗಳನ್ನು ಮಾರ್ಪಾಡು ಮಾಡಬೇಕು. ಸರಕಾರ ಪ್ರಾಮಾಣಿಕವಾಗಿ ಎಷ್ಟು ಮಾಡಬೇಕೋ ಅದನ್ನು ಇದುವರೆಗೂ ಮಾಡಲಿಲ್ಲ. ಇದರಿಂದಾಗಿ ಇಂತಹ ಸ್ಥಿತಿ ಬಂದು ಇವರಿಗೆ ಹೀಗಾಗಿದೆ. ಇನ್ನು ಮುಂದಾದರೂ ಹರಿಜನ ಗಿರಿಜನ ಮಕ್ಕಳಿಗೆ ಸಾಕಷ್ಟು ಸುವ್ಯವಸ್ಥಿತವಾದ ಏರ್ಪಾಡುಗಳನ್ನು ಸರಕಾರ ಮಾಡಿ ಅವರಿಗೆ ತಾವ್ಲೂಕು ಮಟ್ಟದಲ್ಲಿ ನ್ಯಾಯವಾಗಿ ಸಿಗಬೇಕಾದ ಎಲ್ಲ ಸವಲತ್ತುಗಳನ್ನೂ ಒದಗಿಸಿಕೊಡಬೇಕು. ಇನ್ನು ಕೆಲವರಿಗೆ ಸ್ಕಾಲರ್‌ಶಿಪ್ಪು ಎಂದು ಕೊಡುತ್ತಾರೆ. ಇದು ಸರಕಾರ ಕೊಡುವುದು ವರ್ಷದ ಕೊನೆಯಲ್ಲಿ. ಇವರು ಕಾಲೇಜು ವಿದ್ಯಾಭ್ಯಾಸ ಮಾಡಬೇಕಾದರೆ

ಇವರಲ್ಲಿ ಹಣವಿರುವುದಿಲ್ಲ. ಮತ್ತು ಇವರು ಕಾಲೇಜುಗಳಲ್ಲಿ ಓದುವಾಗ ಹೋಟಲುಗಳಿದ್ದು ರೂಂ ಬಾಡಿಗೆಗೆ ತೆಗೆದುಕೊಂಡು ಓದಬೇಕಾದರೆ ಇವರಿಗೆ ಹಣ ಸಹಾಯ ಬೇಕು. ಅದಕ್ಕಾಗಿ ಸರಕಾರ ಕಾಲೇಜು ಸೇರುವ ಮುನ್ನವೇ ಇಂತಹ ಹುಡುಗರಿಗೆ ಮೊದಲೇ ಹಣ ಒದಗಿಸುವ ವ್ಯವಸ್ಥೆ ಮಾಡಬೇಕು, ಇದರಿಂದ ಬಡ ಹುಡುಗರಿಗೆ ಓದಲು ಸಹಾಯವಾಗುತ್ತದೆ, ಇದೇ ರೀತಿ ತಾಲ್ಲೂಕಾ ಮಟ್ಟದಿಂದ ಹಿಡಿದು ಎಲ್ಲಾ ಮಟ್ಟದಲ್ಲೂ ಇವರಿಗೆ ಬೇಕಾಗುವ ಹಣ ಸಹಾಯವನ್ನು ಮಾಡಿಕೊಡಬೇಕು. ತಿಂಗಳಿಗೆ 15 ರೂಪಾಯಿನಂತೆ ಈಗ ಕೊಡುವ ಸ್ಕಾಲರುಷಿಪ್ಪು ಬಹಳ ಕಡಿಮೆ. ಇದು ಸಾಕಾಗುವುದಿಲ್ಲ ಇದರಲ್ಲಿ ಇವನು ಊಟ ಇತ್ಯಾದಿ ಖರ್ಚುಗಳನ್ನು ಮಾಡಲು ಆಗುವುದಿಲ್ಲ. ಕೊನೆಯ ಪಕ್ಷ ಹೋಟಲುಗಳಿಗೆ ಸೇರುವ ಹುಡುಗರಿಗಾಗಿ ಅವರಿಗೆ ತಗಲುವ ಖರ್ಚು ಎಂದರೆ ರೂಮಿನ ಬಾಡಿಗೆ ಊಟದ ಖರ್ಚು ಇವುಗಳೆಲ್ಲಾ ಸರಕಾರವೇ ಒದಗಿಸಿಕೊಟ್ಟರೆ ಇಂತಹ ಬಡ ಹರಿಜನ ಮಕ್ಕಳಿಗೆ ಬಹಳ ಸಹಾಯವಾಗುತ್ತದೆ ಮತ್ತು ಅವರು ಮುಂದೆ ವಿದ್ಯಾಭ್ಯಾಸ ಮಾಡಲೂ ಅನುಕೂಲವಾಗುತ್ತದೆ, ಕೊನೆಯ ಪಕ್ಷ ಹೋಟಲಿಗಾಗಿ ತಗಲುವ ಖರ್ಚನ್ನಾದರೂ ಕೊಡಬೇಕು.

11-00 A. M.

ಇವರಿಗಾಗಿ ಇರತಕ್ಕಂಥ ಸಮಾಜ ಕಲ್ಯಾಣ ಇಲಾಖೆಯವರು ಇವರನ್ನು ರಕ್ಷಣೆ ಮಾಡುವುದಕ್ಕೆ ಬದಲಾಗಿ ಭಕ್ಷಣೆ ಮಾಡುತ್ತಿದ್ದಾರೆ ವಿದ್ಯಾರ್ಥಿನಿಲಯದಿಂದ ಏನಾದರೂ ಒಂದು ಬಿಲ್‌ನ್ನು ಮಂಜೂರಾತಿಗಾಗಿ ಕಳುಹಿಸಿ ಕೊಟ್ಟರೆ ಅದು ಜಿಲ್ಲಾಧಿಕಾರಿಯವರಿಂದ ಮಂಜೂರಾಗಿ ಬರಬೇಕಾದರೆ ಮೂರು ನಾಲ್ಕು ತಿಂಗಳಾಗುತ್ತಿದೆ. ಅದೇ ರೀತಿ ಒಬ್ಬ ವಿದ್ಯಾರ್ಥಿ ಹೋಟೇಲ್‌ನಲ್ಲಿ ಊಟ ಮಾಡಿ ಆದರ ಬಿಲ್‌ನ್ನು ಮಂಜೂರಾತಿಗಾಗಿ ಕಳಿಸಿಕೊಟ್ಟರೆ ಅದು ಮಂಜೂರಾಗಿ ಬರಬೇಕಾದರೆ ಎರಡು-ಮೂರು ತಿಂಗಳಾಗುತ್ತದೆ. ಅಲ್ಲಯವರೆಗೆ ಆ ವಿದ್ಯಾರ್ಥಿ ಎಲ್ಲಿ ಊಟ ಮಾಡಬೇಕು ? ಈ ಒಂದು ವ್ಯವಸ್ಥೆಯನ್ನು ತಪ್ಪಿಸಬೇಕು. ಅವರಿಗೆ ಕೊಡುತ್ತಿರುವ ಸೌಲಭ್ಯವನ್ನು ತಡ ಮಾಡದೆ ಜಾಗ್ರತೆ ಒದಗಿಸಿಕೊಡಬೇಕು. ಅವರಿಗೆ ಕುರಿ, ಕೋಳಿ, ಎತ್ತು, ಜಮೀನು ಕೊಡುವುದರಿಂದ ಯಾವ ಪ್ರಯೋಜನವೂ ಸಹ ಆಗುವುದಿಲ್ಲ. ಅವೆಲ್ಲಾ ನಿಷ್ಫಲವಾಗಿದೆ. ಮುಖ್ಯವಾಗಿ ಈ ಜನರನ್ನು ವಿದ್ಯಾವಂತರನ್ನಾಗಿ ಜರೂರಾಗಿ ಮಾಡಬೇಕು. ವಿದ್ಯಾವಂತರನ್ನಾಗಿ ಮಾಡಲು ಬೇಕಾದ ಎಲ್ಲ ಸೌಕರ್ಯಗಳನ್ನು ಸರ್ಕಾರದವರು ಒದಗಿಸಿ ಕೊಡಬೇಕು ಈ ರೀತಿ ಮಾಡದೆ ಬೇರೆ ಏನೇ ಸೌಕರ್ಯ ಮಾಡಿಕೊಟ್ಟರೂ ಸಹ ಅದೆಲ್ಲಾ ಹೊಳೆಯಲ್ಲಿ ಹುಣಸೆ ಹಣ್ಣನ್ನು ತೊಳೆದಂತಾಗುತ್ತದೆ. ಈ ಜನಾಂಗದವರನ್ನು ವಿದ್ಯಾವಂತರನ್ನಾಗಿ ಮಾಡಿದ್ದೇ ಆದರೆ, ಮುಂದೆ ಆ ವಿದ್ಯಾವಂತ ಜನರು ಹೆಪ್ಪುಗಟ್ಟಿ ನಿಂತಿರುವ ಈ ಸಮಾಜವನ್ನು ಒಡೆದುಹಾಕುತ್ತಾರೆ. ಈ ಕಾರಣದಿಂದ ಇವರ ಕಡೆಗೆ ಸರ್ಕಾರದವರು ಅವರಲ್ಲಯೂ ಹರಿಜನ ಗಿರಿಜನ ಮಂತ್ರಿಗಳು ಹೆಚ್ಚಿನ ಗಮನ ಕೊಡಬೇಕು ಬೇರೆ ಮಂತ್ರಿಗಳಿಗಿಂತ ಈ ಜನಾಂಗದ ಮಂತ್ರಿಗಳು ಇವರ ಕಡೆಗೆ ಹೆಚ್ಚಿನ ಗಮನ ಕೊಡಬೇಕು. ಆದರೆ ಇಂದು ಈ ಜನಾಂಗದ ಮಂತ್ರಿಗಳು ಇವರಿಗಾಗಿ ಆಲೋಚನೆ ಮಾಡುವುದು ಕಡಿಮೆಯಾಗಿದೆ. ಇದು ಹೋಗಬೇಕು. ಮುಖ್ಯವಾಗಿ ಸರ್ಕಾರದವರು ಈ ಜನಾಂಗದವರ ಬಗ್ಗೆ ಹೆಚ್ಚಿನ ಮುತುವರ್ಜಿ ವಹಿಸಬೇಕೆಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಪ್ರಭಾಕರ್ (ವರ್ತೂರ್).—ಮಾನ್ಯ ಸಭಾಪತಿಯವರೇ, ಈ ಸಭೆಯ ಮುಂದಿರುವ ಠರಾವಿನ ವಿಷಯದಲ್ಲಿ ಉಚ್ಚ ಸಲಹೆಗಳನ್ನು ಇಡಬಯಸುತ್ತೇನೆ. ಹರಿಜನ ಮತ್ತು ಗಿರಿಜನರು ಹಿಂದುಳಿದ ಜನಾಂಗದವರು ಎಂಬ ದೃಷ್ಟಿಯಿಂದ ನಾನಾ ರೀತಿಯಲ್ಲಿ ಅವರ ಅಭಿವೃದ್ಧಿಗಾಗಿ ಕೆಲಸ ಕಾರ್ಯಗಳು ಸರ್ಕಾರದ ಕಡೆಯಿಂದ ನಡೆಯುತ್ತಿದೆ. ಈ ಜನರು ಸರ್ಕಾರದವರು ಹಾಕಿಕೊಂಡಿರುವ ಗುರಿಯನ್ನು ಮುಟ್ಟುವುದರಲ್ಲಿ ಸಂಶಯವಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಸರ್ಕಾರದವರು ಹಾಕಿಕೊಂಡಿರುವ ಅನೇಕ ಯೋಜನೆಗಳಲ್ಲಿ ಕೆಲವು ಯೋಜನೆಗಳು ಚೆನ್ನಾಗಿ ನಡೆಯುತ್ತಿವೆ. ಫಲಪ್ರಾಯಕವಾಗಿ ನಡೆಯುತ್ತಿವೆ. ಮುಖ್ಯವಾಗಿ ನಾವು ommissions and commissions ಎಂದು ಏನು ಕರೆಯುತ್ತೇವೆ, ಅವು ಮತ್ತು Leakages and loopholes ಇಲ್ಲದೆ ಹೋದರೆ, ಕೆಲನ ಮಾಡತಕ್ಕಂತ ಅಧಿಕಾರಿಗಳಲ್ಲಿ ಹೆಚ್ಚಿನ ಒಂದು ಶ್ರದ್ಧೆ ಇದ್ದಿದ್ದೇ ಆದರೆ ಎಲ್ಲ ಯೋಜನೆಗಳು ಕಾರ್ಯಗತವಾಗುವುದರಲ್ಲಿ ಸಂಶಯವಿಲ್ಲ. ಈಗ ಇರತಕ್ಕಂಥ ನಿಯಮಗಳಲ್ಲಿ ಎಲ್ಲೆಲ್ಲಿ ದೋಷವಿದೆ ಎಂಬುದನ್ನು ಕಂಡುಹಿಡಿದು ಸರಿಪಡಿಸಬೇಕೇ ಹೊರತು ತಾತ್ಸಾರ ಮನೋಭಾವದಿಂದ ನೋಡುವುದು ಬೇಡ. ನಾವು ಪ್ರತಿವರ್ಷವೂ ಇವರ ಮೇಲ್ಮೆಗಾಗಿ ಬಜೆಟ್‌ನಲ್ಲಿ ಹಣ ಒದಗಿಸುತ್ತಿದ್ದೇವೆ.

ಶ್ರೀ(ಶ್ರೀ ಕೆ. ಪ್ರಭಾಕರ್)

ಸರ್ಕಾರದ ರೀತಿನೀತಿಗಳು ಮತ್ತು ಕಾರ್ಯ ಕಲಾಪಗಳು ಸರಿಯಾಗಿ ನಡೆಯುದೆ ಕುಂಠಿತ ವಾಗುತ್ತಿದೆಯೋನೋ ಎಂದು ಭಾನ ವಾಗುತ್ತಿದೆ. Harijan welfare is a national responsibility; it is not the responsibility of anv individual group this way or that way. ಹರಿಜನರು ಮತ್ತು ಗಿರಿಜನರು ಸಹ ಎಲ್ಲರ ಅಂತಸ್ತಿಗೆ ಬರುವಂತಾಗಲು ಮತ್ತು ಅವರೂ ಸಹ ಎಲ್ಲ ಪ್ರಾರರಂತೆ ಜೀವನ ನಡೆಸುವಂತಾಗಲು ನೊಡಿಕೊಳ್ಳುವುದು ಸರ್ಕಾರದ ಕರ್ತವ್ಯವಾಗಿದೆ. ಈ ಒಂದು ಕಾರಣದಿಂದ ಕಾಲೇಜುಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಈ ಜನಾಂಗದ ಎಲ್ಲ ವಿದ್ಯಾರ್ಥಿಗಳಿಗೂ ಸಹ ಈಗ ಇರತಕ್ಕಂಥ ಕುಂದು ಕೊರತೆಗಳನ್ನು ನಿವಾರಣೆ ಮಾಡಬೇಕು ಎನ್ನುವ ಸೂಚನೆಯನ್ನು ಸರ್ಕಾರಕ್ಕೆ ತಿಳಿಸುವ ಉದ್ದೇಶದಿಂದ ಮಾನ್ಯ ಸದಸ್ಯರು ಈ ಒಂದು ನಿರ್ಣಯವನ್ನು ತಂದಿದ್ದಾರೆ. ಹರಿಜನ ಮತ್ತು ಗಿರಿಜನರ ಮಕ್ಕಳು ಕಾಲೇಜುಗಳಲ್ಲಿ ವಿದ್ಯಾಭ್ಯಾಸ ಮಾಡಲು ಇರತಕ್ಕಂಥ ನ್ಯೂನತೆಗಳು ಏನು ಎಂಬುದನ್ನು ತಿಳಿಸುವುದಕ್ಕೆ ಮಾತ್ರ ನನ್ನ ಮಾತನ್ನು ಸೀಮಿತ ಗೊಳಿಸುತ್ತಿದ್ದೇನೆ. ವಿದ್ಯಾಭ್ಯಾಸದ ಗುರಿ ಎಂದರೆ ಪಾಸು ಮಾಡುವುದು. ಇದರಲ್ಲಿ ಎರಡು ಅರ್ಥಗಳಿವೆ. ಒಂದನೆಯದು ಹರಿಜನ ಮತ್ತು ಗಿರಿಜನರ ವಿದ್ಯಾರ್ಥಿಗಳ ಹೈಕ್ಲಿಷ್ ಓದಿದವರಲ್ಲಿ ಎಷ್ಟು ಜನರು ಮೇಲ್ತರಗತಿಗೆ ಪಾಸಾಗಿ ಹೋಗುತ್ತಾರೆಂಬುದು, ಅಂದರೆ ಶೇಕಡವಾರು ಎಷ್ಟು ಜನರು ಮೇಲ್ತರಗತಿಗೆ ಹೋಗುತ್ತಾರೆಂಬುದು ಸಾಮಾನ್ಯ ಅರ್ಥ; ಎರಡನೆಯದೆಂದರೆ, ಎಷ್ಟು ಜನ ವಿದ್ಯಾವಂತರಾದ ಮೇಲೆ ಒಳ್ಳೆಯ ಪ್ರಾರರಾಗಿ ಸಮಾಜದಲ್ಲಿ ಎಷ್ಟರಮಟ್ಟಿಗೆ ಬಾಳಲು ಇಂದಿನ ವಿದ್ಯಾಭ್ಯಾಸ ಸಹಾಯ ವಾಗುತ್ತದೆ ಎಂಬುದು ಮುಖ್ಯವಾದುದು. ಇವೆರಡನ್ನೂ ಮನಸ್ಸಿನಲ್ಲಿಟ್ಟುಕೊಂಡು ಆಲೋಚನೆ ಮಾಡುವುದಾದರೆ, ಈ ಒಂದು ಗುರಿ ಸಾಧನೆಯಾಗುತ್ತಿಲ್ಲ. ಸಾಧನೆಯಾಗುತ್ತಿಲ್ಲ ಅಂದಮೇಲೆ ಒಬ್ಬ ವಿದ್ಯಾರ್ಥಿ ಫೇಲ್ ಆದರೆ ಕೇಂದ್ರಸರ್ಕಾರದವರು ಮತ್ತು ರಾಜ್ಯ ಸರ್ಕಾರದವರು ಖರ್ಚು ಮಾಡುತ್ತಿರುವ ಹಣ ವೇಸ್ಟ್ ಆದಂತೆ. ಇದನ್ನು ಕ್ರಿಮಿನರ್ ವೇಸ್ಟ್ ಮತ್ತು ಸ್ಯಾಷನ್ಲ್ ವೇಸ್ಟ್ ಎಂದು ಕರೆಯುತ್ತಾರೆ. ಒಬ್ಬ ವಿದ್ಯಾರ್ಥಿ ಫೇಲ್ ಆದರೆ ಎಷ್ಟು ವೇಸ್ಟಾಗುತ್ತದೆ ಎಂಬುದನ್ನು ಅವರೇಜ್ ತೆಗೆಯುತ್ತಾರೆ. ಅಂದರೆ ಕುರ್ಚಿ, ಮೇಜು, ಬಟ್ಟೆ, ಊಟ, ಚಾರ ಮುಂತಾದುವುಗಳೆಲ್ಲಾ ಖರ್ಚಾಗುವುದನ್ನು ಸೇರಿಸಿ what is the per capita expenditure of each candidate ಎನ್ನುವುದನ್ನು ಕಂಡುಹಿಡಿಯುತ್ತಾರೆ. ಈ ರೀತಿಯಾಗದಂತೆ ಸರ್ಕಾರದವರು ನೋಡಿಕೊಳ್ಳಬೇಕೆಂದು ಈ ನಿರ್ಣಯವನ್ನು ಮಾನ್ಯ ಸದಸ್ಯರು ತಂದಿದ್ದಾರೆ. ಏನೇನು ಅನುಕೂಲಗಳನ್ನು ಕಲ್ಪಿಸಿಕೊಡಬೇಕೆಂಬುದರ ಬಗ್ಗೆ ಈಗಾಗಲೇ ಮಾತನಾಡಿದವರು ತಿಳಿಸಿದ್ದಾರೆ. ಮಾನ್ಯ ಕಾಗೋಡು ತಿಮ್ಮಪ್ಪನವರು ಮಾತನಾಡುವಾಗ ಸಮಾಜ ಕಲ್ಯಾಣ ಇಲಾಖೆ ಕೆಲಸ ಮಾಡುವ ರೀತಿ, ವಿದ್ಯಾಭ್ಯಾಸ ನಡೆಸುವ ವೈಖರಿಯನ್ನು ತಿಳಿಸುವುದಕ್ಕೆ ಪ್ರಯತ್ನ ಮಾಡಿದರು. ಈಗ ಇವರಿಗಾಗಿ ಖರ್ಚು ಮಾಡುತ್ತಿರುವುದು ಬಹಳ ಕಡಿಮೆ ಹಣ. ಆ ಹಣವೂ ಕೂಡ ಸರಿಯಾಗಿ ನಿಯೋಗವಾಗುತ್ತಿಲ್ಲವೆಂಬ ಅಂಶ ನಿರ್ವಿವಾದವಾಗಿದೆ. ಬುದ್ಧಿವಂತರಾದವರು ಸಮಾಜದಲ್ಲಿ ಬೆರೆತುಹೋಗುವ ರೀತಿಯಲ್ಲಿ ಮಕ್ಕಳು ಬೆಳೆಯಬೇಕು ಎಂಬುದೇ ಮುಖ್ಯವಾದ ಗುರಿಯಾಗಿರಬೇಕೆಂದು ಮಾನ್ಯ ಸದಸ್ಯರು ಹೇಳಿದರು. ಇಂದು ಸಮಾಜದಲ್ಲಿ ಏನು ನಡೆಯುತ್ತಿದೆ ಎಂಬುದನ್ನು ನಾವು ನೋಡುತ್ತಿದ್ದೇವೆ. There are psychological disparties, separate treatment and social ill-treatment in abundance. ಇದಕ್ಕೆ ಕಾರಣ ಏನು ಎಂಬುದನ್ನು ಕಂಡುಹಿಡಿಯಬೇಕಾಗಿದೆ. ಈ ಮಕ್ಕಳ ವಿದ್ಯಾಭ್ಯಾಸದಲ್ಲಿ ಏನಾದರೂ ಒಂದು ಟ್ರೀಟ್‌ಮೆಂಟ್ ಕೊಡಬೇಕೇನೋ ಎಂದು ನನ್ನಗನಿಸುತ್ತದೆ. ವೇದಾಭ್ಯಾಸದ ಗಂಧ ಈ ಮಕ್ಕಳಲ್ಲಿ ಇರುವುದಿಲ್ಲ. ಅಂದಮೇಲೆ ಕಲ್ಚರಲ್ ಎಜುಕೇಶನ್ ಈ ಮಕ್ಕಳಿಗೆ ಸ್ವಲ್ಪ ಮಟ್ಟಿಗೆ ಬೇಕಾಗುತ್ತದೆ. ಈ ಮಕ್ಕಳು ಹೆಚ್ಚಿನ ಮಟ್ಟದಲ್ಲಿ ಫೇಲಾಗುತ್ತಿರುವುದರಿಂದ ಇವರಿಗೆ ಇಂಟರ್‌ನಲ್ ಟ್ಯೂಷನ್ ಅಥವಾ ಎಕ್ಸ್‌ಟ್ರಾ ಕೋಚಿಂಗ್ ಕೊಡುವುದು ಅಗತ್ಯವಾಗಿದೆ. ಇವರಿಗಾಗಿ ಖರ್ಚು ಮಾಡುವ ಹಣ ಸದ್ವಿನಿಯೋಗವಾಗಬೇಕಾದರೆ ಇವರಿಗೆ ಇಂಟರ್‌ನಲ್ ಕೋಚಿಂಗ್ ಕೊಡಬೇಕು ಎಂಬುದನ್ನು ಫೈನಾನ್ಸ್ ಕಮಿಷನ್ ಅವರು ಸಹ ಹೇಳಿದ್ದಾರೆ. ಈಗ ಈ ವಿದ್ಯಾರ್ಥಿಗಳು ಸ್ಕಾಲರ್‌ಷಿಪ್ ಇಲ್ಲದೆ ಓದಬೇಕಾಗಿದೆ. ಬಹಳ ತಡವಾಗಿ ಅಂದರೆ ಪರೀಕ್ಷೆ ಮುಗಿದ ಮೇಲೆ, ಬೇಸಿಗೆಯಲ್ಲಿ ಸ್ಕಾಲರ್‌ಷಿಪ್ ಸಿಗುತ್ತಿದೆ. It is a known tragedy; an administrative tragedy. ಸಕಾಲದಲ್ಲಿ ಕೊಡುವುದಕ್ಕೆ ಏನು ಕೊಂಡರೆ ಇದೆ? ಏನು ದೇವಲೋಕದಿಂದ ಹಣ ಬರಬೇಕಾಗಿದೆಯೇ? ಇದೇ ಪದ್ಧತಿ ಇನ್ನೂ ಎಷ್ಟು ವರ್ಷ ಮುಂದು

ವರೆಯಬೇಕು ? ಇವರಲ್ಲಿ ಸೀರಿಯಸ್‌ನೆಸ್ ಎಂಬುದೇ ಇಲ್ಲವಾಗಿದೆ. ಸ್ಕಾಲರ್‌ಷಿಪ್ ಜಾಗ್ರತೆ ಸಿಗಬೇಕಲ್ಲದೆ, ಅವರ ಹಣವು ಜಾಸ್ತಿಯಾಗಬೇಕು. ಮತ್ತು foreign scholarship, special scholarship, technical education scholarship and scholarship for cultural education ಎಂಬುವಾಗಿ ಬ್ರೇಕ್‌ಅಪ್ ಮಾಡಿ ಬೇರೆ ಬೇರೆ ರೂಪದಲ್ಲಿ ಕೊಡುವುದಕ್ಕೆ ವ್ಯವಸ್ಥೆ ಮಾಡಬೇಕು. ಹರಿಜನ ಮತ್ತು ಗಿರಿಜನರಿಗಾಗಿ ಪ್ರತ್ಯೇಕ ಹಾಸ್ಟಲ್ ಪ್ರತಿಕ್ಕೆ ಇರಬೇಕು ಎಂಬುದಾಗಿ ನಾನು ಮೊದಲೇ ಹೇಳಿದ್ದೆನು. ಪ್ರತ್ಯೇಕವಾಗಿ ಇರಬೇಕು ಎಂದು ನಾನು ಹೇಳುವುದಿಲ್ಲ. ಆದರೆ ಅವರಿಗೆ ಪ್ರತ್ಯೇಕವಾಗಿ ಇಡುವುದಕ್ಕೆ ವ್ಯವಸ್ಥೆ ಮಾಡಬೇಕು. ಇದಕ್ಕೆ ನಾನಾದರೂ ಅವರೇಜ್ ಗಿಂತ ಜಾಸ್ತಿ ಖರ್ಚಾಗುವುದಾದರೆ ಅದನ್ನು ಸ್ಕಾಲರ್‌ಷಿಪ್ ರೂಪದಿಂದ ಕೊಡಿ. ಪ್ರತ್ಯೇಕವಾದ ಹಾಸ್ಟಲ್‌ನಲ್ಲಿ ಇವರನ್ನು ಇಡುವುದು ಪಾತ್ರವಾಗಿದೆ.

ಆದರೆ ಈಗ ಬಂದಿರುವ ತೊಡಕೆನ್ನು ಏನಿದೆ ಎಂದರೆ ಹರಿಜನ ಗಿರಿಜನ ಮಕ್ಕಳಿಗೆ ಜನರಲ್ ಹಾಸ್ಟಲ್‌ನಲ್ಲಿ 3-4 ಸೀಟುಗಳನ್ನು ಕೊಡುತ್ತಾರೆ. ಇದರಿಂದಾಗಿ ನಮ್ಮ ಗುರಿ ನಿರರ್ಥಕವಾಗುತ್ತದೆ. ಆದ್ದರಿಂದ ಹೆಚ್ಚು ಹರಿಜನ ಗಿರಿಜನ ಮಕ್ಕಳಿಗೆ ಜನರಲ್ ಹಾಸ್ಟಲ್‌ನಲ್ಲಿ ಸೀಟುಗಳನ್ನು ಕೊಡಬೇಕು. ಮತ್ತು ಆ ವಿದ್ಯಾರ್ಥಿಗಳು ಹೊರಗಡೆ ಪ್ರವಾಸಕ್ಕೆ ಹೋಗಿ ವಿಚಾರಗಳನ್ನು ತಿಳಿದುಕೊಂಡು ಬರುವುದಕ್ಕೆ ಸರ್ಕಾರದವರು ವ್ಯವಸ್ಥೆ ಮಾಡಬೇಕು. ವಿದ್ಯಾರ್ಥಿಗಳು ಹಾಸ್ಟಲ್‌ನಲ್ಲಿಯೇ ಅವರಿಗೆ ಟ್ಯೂಷನ್ ವ್ಯವಸ್ಥೆ ಇರಬೇಕು. ಸ್ಕಾಲರ್‌ಷಿಪ್ ಹಣವನ್ನು ಜಾಸ್ತಿ ಮಾಡಿ ಅವರು ಬಟ್ಟೆ ಮತ್ತು ಪುಸ್ತಕಗಳನ್ನು ಕೊಂಡುಕೊಳ್ಳುವುದಕ್ಕೆ ತೊಂದರೆಯಾಗದಂತೆ ವ್ಯವಸ್ಥೆ ಮಾಡಬೇಕು. ಮತ್ತು ಕಾಲೇಜು ವಿದ್ಯಾಭ್ಯಾಸಕ್ಕೆ ಅವರಿಗೆ ಹೆಚ್ಚಿನ ಅನುಕೂಲ ಮಾಡಿಕೊಡಬೇಕು. ಇಂಜಿನಿಯರಿಂಗ್ ಮತ್ತು ಮೆಡಿಕಲ್ ಕಾಲೇಜುಗಳಲ್ಲಿ ಹರಿಜನ ಗಿರಿಜನ ವಿದ್ಯಾರ್ಥಿಗಳಿಗೆ ಹೆಚ್ಚಿಗೆ ಸೀಟುಗಳನ್ನು ಕೊಡಬೇಕು. ಇಂಡಿಯಾ ಸರ್ಕಾರದವರು ಸ್ಕಾಲರ್‌ಷಿಪ್ ಕೊಡುವುದಕ್ಕಿಂತ ಮುಂಚೆ ಮೈಸೂರು ಸರ್ಕಾರದವರು, ಸ್ಕಾಲರ್‌ಷಿಪ್ ಕೊಡುತ್ತಿದ್ದರು. ಆಗ ಅವರು ಫೀಜನ್ನು ಮಾಫಿ ಮಾಡುತ್ತಿದ್ದರು. ಈಗ ಸರ್ಕಾರದವರು, ಕೊಡ್ಡಕ್ಕಂಥ್ ಸ್ಕಾಲರ್‌ಷಿಪ್‌ನಲ್ಲಿ ಫೀಜು ಬೋರ್ಡಿಂಗ್ ಚಾರ್ಜಸ್ ಇತ್ಯಾದಿಗಳನ್ನು ಸೇರಿಸಿದ್ದಾರೆ. ಇದೆಲ್ಲಾ ಸ್ಕಾಲರ್‌ಷಿಪ್‌ನಲ್ಲಿ ಕಳೆದ ಮೇಲೆ ವಿದ್ಯಾರ್ಥಿಗೆ ಬಟ್ಟೆ ಮತ್ತು ಪುಸ್ತಕ ಇತ್ಯಾದಿಗಳನ್ನು ಕೊಂಡುಕೊಳ್ಳುವುದಕ್ಕೆ ಎಷ್ಟು ಉಳಿಯುತ್ತದೆ ? ಆದ್ದರಿಂದ ಅದನ್ನು ಸ್ಕಾಲರ್‌ಷಿಪ್‌ನಲ್ಲಿ ಸೇರಿಸುವುದನ್ನು ಕೈಬಿಡಬೇಕು ಮತ್ತು ಸ್ಕಾಲರ್‌ಷಿಪ್ ಪೊತ್ತವನ್ನು ಹೆಚ್ಚು ಮಾಡಬೇಕು. ಹಾಸ್ಟಲ್‌ಗಳಲ್ಲಿ ವಿದ್ಯಾರ್ಥಿಗಳಿಗೆ ಸ್ಪೆಷಲ್ ಕೋಚಿಂಗ್ ಕೊಡಬೇಕ್ ಹಾಸ್ಟಲ್ ಬಿಲ್ಡಿಂಗ್ ಕಟ್ಟುವುದಕ್ಕೆ ನಪರೇಟಾಗಿ ಕಿರಣವನ್ನು ಒದಗಿಸಬೇಕು. ಹಾಸ್ಟಲ್‌ನಲ್ಲಿ ವಿದ್ಯಾರ್ಥಿಗಳಿಗೆ ಲೈಬ್ರರಿ, ಸೌಕರ್ಯವನ್ನು ಒದಗಿಸಬೇಕು. ಸ್ಪೆನ್ಸ್, ಆರ್ಟ್ಸ್ ಮತ್ತು ಜೆಕ್ಕಿಕಲ್ ಕಾಲೇಜುಗಳಲ್ಲಿ ಅವರಿಗೆ ಅವಕಾಶವನ್ನು ಒದಗಿಸಬೇಕು. ಅವರಿಗೆ ಕಲ್ಚರಲ್ ಏಜುಕೇಷನ್ನಿಗೆ ಅವಕಾಶ ಮಾಡಿಕೊಡಬೇಕು. ಈ 5-6 ಅಂಶಗಳನ್ನು ಸರ್ಕಾರದವರು ಪರಿಶೀಲನೆ ಮಾಡಿ ಅವುಗಳನ್ನು ಕಾರ್ಯಗತ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನು ಸರ್ಕಾರದವರಲ್ಲಿ ವಿನಂತಿ ಮಾಡಿಕೊಂಡು ಮಾನ್ಯ ಸದಸ್ಯರಾದ ಶ್ರೀ ಹೆಗ್ಗಡೆಯವರು ಈ ಸಭೆಯ ಮುಂದೆ ತಂದಿರುವ ನಿರ್ಣಯವನ್ನು ಮೂಲ ಉದ್ದೇಶವನ್ನು ನಾನು ಸಂಪೂರ್ಣವಾಗಿ ಅನುಮೋದಿಸುತ್ತೇನೆ. ಸರ್ಕಾರದವರು ಕೂಡಲೇ ಇದಕ್ಕೆ ನಿರ್ಣಯ ಮಾಡಬೇಕೆಂದು ಸಲಹೆ ಮಾಡಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ.ಬಿ. ರಾಮಸ್ವಾಮಿ (ಅನೇಕಲ್) : ಸನ್ಮಾನ್ಯ ಸಭಾಧ್ಯಕ್ಷರೇ ನಮ್ಮ ಹಿರಿಯ ಸದಸ್ಯರು ಈ ಸಭೆಯ ಮುಂದೆ ತಂದಿರತಕ್ಕ ನಿರ್ಣಯವನ್ನು ಬೆಂಬಲಿಸುತ್ತಾ, ಕೇವಲ ಒಂದೆರಡು ಸಲಹೆಗಳನ್ನು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ನಮಗೆ ಸ್ವರಾಜ್ಯ ಬಂದು 25 ವರ್ಷಗಳಾಯಿತು. ಎಲ್ಲರೂ ಹರಿಜನ ಗಿರಿಜನರಿಗೆ ಸರ್ಕಾರದಿಂದ ಅನೇಕ ವಿಧದಲ್ಲಿ ಅನೇಕ ರೀತಿಯಲ್ಲಿ ಸೌಲಭ್ಯಗಳು ಹೊರಬರುತ್ತಿವೆ ಎಂದು ಹೇಳುತ್ತಾರೆ. ಆದರೆ ಅವರಿಗೆ ಸೌಲಭ್ಯಗಳು ಸಮರ್ಪಕವಾಗಿ ತಲುಪುತ್ತಿಲ್ಲ ಎನ್ನುವುದು ಸಾಬೀತಾಗಿದೆ. ಅನೇಕ ಸೌಲಭ್ಯಗಳನ್ನು ಅವರಿಗೆ ನೀಡಲಾಗುತ್ತಿದೆ ಎನ್ನುವುದೂ ಸುಳ್ಳಾಗಿದೆ. ಆದರೆ ಆ ಸೌಲಭ್ಯಗಳು ಅವರಿಗೆ ಎಷ್ಟರ ಮಟ್ಟಿಗೆ ತಲುಪುತ್ತಿದೆ ಎನ್ನುವುದರಿಂದ ಪ್ರಶ್ನೆಯಾಗಿದೆ. ಅನೇಕ ತಜ್ಞರು ಅನೇಕ ವಿದ್ವಾಂಸರು ಈ ಒಂದು ಪೋಷಣೆಯಲ್ಲಿ ಕಾಲವನ್ನು ಕಳೆಯುತ್ತಾ ಬಂದಿದ್ದಾರೆ. ಇವತ್ತು ನಾನು ಮಹಾದುಃಖದಿಂದ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಬೇಕಾಗಿದೆ. ಹರಿಜನ ಗಿರಿಜನ ವಿದ್ಯಾರ್ಥಿಗಳಿಗೆ ಕಾಲೇಜುಗಳಲ್ಲಿ ಮತ್ತು ಕಾಲೇಜು ಹಾಸ್ಟಲುಗಳಲ್ಲಿ ಸೀಟನ್ನು ನವಲುತ್ತಿಗಳು ಹೊರಬರುತ್ತಿವೆ ಎನ್ನುವುದು ಜಾಸ್ತಿ ಪ್ರಶ್ನೆಯಾಗಿದೆ. ಹರಿಜನ ಗಿರಿಜನ ವಿದ್ಯಾರ್ಥಿಗಳಿಗೆ ಪ್ರತ್ಯೇಕವಾದ

(ಶ್ರೀ ಎಂ. ಬಿ. ರಾಮಸ್ವಾಮಿ)

ಹಾಸ್ಟಲುಗಳು ಬೇಡ ಎನ್ನುವುದು ಒಂದು ಅಭಿಪ್ರಾಯ ಇದೆ. ಜನರಲ್ ಹಾಸ್ಟಲುಗಳಲ್ಲಿ ಅವರಿಗೆ ಹೆಚ್ಚು ಸೀಟುಗಳನ್ನು ಕೊಟ್ಟರೆ ಅವರು ಎಲ್ಲಾ ಮಕ್ಕಳ, ಎಲ್ಲಾ ವಿದ್ಯಾರ್ಥಿಗಳ ಜೊತೆಯಲ್ಲಿಯೂ ಬೆರೆತು ಅಭ್ಯಾಸ ಮಾಡಿದರೆ ಅವರಿಗೆ ಬುದ್ಧಿ ವಿಕಾಸವಾಗುವುದಕ್ಕೆ ಅನುಕೂಲವಾಗುತ್ತದೆ ಎಂದು ಎಲ್ಲರಿಗೂ ಗೊತ್ತಿದೆ. ಆದರೆ ಈ ದಿವಸ ಬೆಂಗಳೂರಿನಲ್ಲಿರತಕ್ಕ ಜನರಲ್ ಹಾಸ್ಟಲ್ ಮತ್ತು ಸೆಂಟ್ರಲ್ ಕಾಲೇಜ್ ಹಾಸ್ಟಲ್ ಹರಿಜನ ಗಿರಿಜನ ವಿದ್ಯಾರ್ಥಿಗಳಿಗೆ ಕೇವಲ 25 ಸೀಟುಗಳನ್ನು ಮಾತ್ರ ಕೊಟ್ಟಿದ್ದಾರೆ. ಇದರ ಜೊತೆಗೆ ಹರಿಜನ ಗಿರಿಜನ ವಿದ್ಯಾರ್ಥಿಗಳಿಗೆ ಸರಿಯಾಗಿ ಸ್ಕಾಲರ್‌ಷಿಪ್ ದೊರೆಯುತ್ತಿಲ್ಲ. ಇದಕ್ಕೆ ಕಾರಣ ಶ್ರೀಮಾನ್ ತಿಮ್ಮಪ್ಪನವರು ಹೇಳಿದಹಾಗೆ ಸ್ಕಾಲರ್‌ಷಿಪ್ ಬಿಲ್‌ಗಳನ್ನು ಕೌಂಟರ್ ಸಿಗ್ನೇಚರ್‌ಗಾಗಿ ಸವಾಡಕರ್ಯಾಣ ಇಲಾಖೆಯಲ್ಲಿರತಕ್ಕ ರೆವಿನ್ಯೂ ಅಧಿಕಾರಿಗಳಿಗೆ ಕಳುಹಿಸಬೇಕೆಂದು ಮಾಡಿರುವುದು. ಆ ಬಿಲ್ಲುಗಳು ಕೌಂಟರ್‌ಸೈನ್ ಆಗಿ ಬರಬೇಕಾದರೆ 6-7 ತಿಂಗಳುಗಳಾಗುತ್ತದೆ. ಕಾಲೇಜಿನಲ್ಲಿ ಅಭ್ಯಾಸ ಮಾಡತಕ್ಕ ವಿದ್ಯಾರ್ಥಿಗಳಿಗೆ ಹಣಕೊಳ್ಳುವುದಕ್ಕೆ ಬಿಟ್ಟೆ ಕೂಡ ಇರಲಿಲ್ಲ. ಅದರ ಜೊತೆಗೆ ಅವರು ತಮ್ಮ ಸ್ವಂತ ಖರ್ಚಿಗಾಗಿ ಬೇರೆಯವರಿಂದ ಸಾಲ ತೆಗೆದುಕೊಂಡು ಬಂದಿರುತ್ತಾರೆ. ಆದರೆ ಈ ಸ್ಕಾಲರ್‌ಷಿಪ್ ಬರಬೇಕಾದರೆ ತಿಂಗಳು ಗಟ್ಟಲೇ ಕಾಯಬೇಕಾಗುತ್ತದೆ. ಆದ್ದರಿಂದ ಇಂಥಾ ಕೆಲವು ಕುಂದು ಕೊರತೆಗಳನ್ನು ಸರ್ಕಾರದವರು ಸರಿಪಡಿಸಬೇಕೆಂದು ನಾನು ಹೇಳುತ್ತೇನೆ. ಇವು ಕಾಲಕ್ಕೆ ಸರಿಯಾಗಿ ಬಾರದೇ ಹೋದರೆ ಸಂಬಂಧಪಟ್ಟ ಸೋಷಿಯಲ್ ವೆಲ್‌ಫೇರ್ ಆಫೀಸರ ಮೇಲೆ ಉಗ್ರವಾದ ಕ್ರಮಗಳನ್ನು ತೆಗೆದು ಕೊಳ್ಳಬೇಕು.

Mr. DEPUTY SPEAKER.—The time alloted for this resolution was 40 minutes. I think it will have to be extended. Is it the pleasure of the House that time be extend d by 15 minutes.

HON. MEMBERS.—Yes.

Mr. DEPUTY SPEAKER.—The time for this resolution is extended by 15 minutes.

ಶ್ರೀ ಎಂ. ಬಿ. ರಾಮಸ್ವಾಮಿ.—ಈ ರೀತಿಯಾಗಿ ಸರ್ಕಾರದವರು ಹರಿಜನ ಗಿರಿಜನ ವಿದ್ಯಾರ್ಥಿಗಳಿಗೆ ಕೊಡತಕ್ಕ ಸವಲತ್ತುಗಳು ಸರಿಯಾಗಿ ದೊರೆಯುತ್ತಿಲ್ಲ. ಶ್ರೀಮಾನ್ ಪ್ರಭಾಕರ್ ಅವರು ಹೇಳಿದ ಹಾಗೆ ಇದನ್ನು ಸರಿಪಡಿಸಬೇಕು. ಜನರಲ್ ಹಾಸ್ಟಲುಗಳಲ್ಲಿ ಹರಿಜನ ಗಿರಿಜನ ವಿದ್ಯಾರ್ಥಿಗಳಿಗೆ ಹೆಚ್ಚಿನ ಸೀಟುಗಳನ್ನು ದೊರಕಿಸಿಕೊಡುವಂತಹ ವ್ಯವಸ್ಥೆಯನ್ನು ಮಾಡಬೇಕು. ಅನೇಕ ವರ್ಷಗಳಿಂದ ಕಾಲೇಜ್ ಹಾಸ್ಟಲಿನಲ್ಲಿ ಹರಿಜನ ಗಿರಿಜನ ವಿದ್ಯಾರ್ಥಿಗಳಿಗೆ ಅವಕಾಶವನ್ನು ಕೊಟ್ಟಿರಲಿಲ್ಲ. ಈಗ ಇತ್ತೀಚೆಗೆ ಅವರಿಗೆ ಅವಕಾಶವನ್ನು ಕೊಟ್ಟಿದ್ದಾರೆ. ಲೈಬ್ರರಿಗಾಗಿ ಸರ್ಕಾರದವರು ಬೇಕಾದಷ್ಟು ಹಣವನ್ನು ವೆಚ್ಚ ಮಾಡುತ್ತಿದ್ದಾರೆ. ಆದರೆ ಆ ಹಣ ಆ ಕಾಲೇಜು ಹಾಸ್ಟಲುಗಳಲ್ಲಿರತಕ್ಕ ಕೆಲವೇ ಹಿತವಾಸಕ್ತಿಗಳಿಗೆ ಮಧ್ಯವರ್ತಿಗಳಿಗೆ ಹೋಗುತ್ತಿದೆ, ಇದರಿಂದಾಗಿ ಹರಿಜನ ಗಿರಿಜನ ವಿದ್ಯಾರ್ಥಿಗಳಿಗೆ ಸರ್ಕಾರದ ಮುಖಾಂತರ ಹಣವೇನೋ ಹೋಗುತ್ತದೆ. ಆದರೆ ವಾಸ್ತವವಾಗಿ ಅವರಿಗೆ ಹಣ ತಲುಪುತ್ತಿಲ್ಲ. ಆದ್ದರಿಂದ ಅದನ್ನು ಸರಿಪಡಿಸಬೇಕು. ಆ ಬಗ್ಗೆ ಸಂಬಂಧಪಟ್ಟ ಸೋಷಿಯಲ್ ವೆಲ್‌ಫೇರ್ ಆಫೀಸರ ಮೇಲೆ ಉಗ್ರವಾದ ಕ್ರಮಗಳನ್ನು ತೆಗೆದು ಕೊಳ್ಳಬೇಕು. ಹರಿಜನ ಗಿರಿಜನ ವಿದ್ಯಾರ್ಥಿಗಳಿಗೆ ಸ್ಕಾಲರ್‌ಷಿಪ್ ಮುಂತಾದ ಸೌಲಭ್ಯಗಳನ್ನು ಕೊಡುವ ವಿಷಯದಲ್ಲಿ ಸರ್ಕಾರದಲ್ಲಿ ಹಿಂದಿನಿಂದಲೂ ಏನು ಒಂದು ನೀತಿ ಮತ್ತು ರೂಲ್ಸ್ ಅಂಡ್ ರೆಗ್ಯುಲೇಷನ್ ಇವೆಯೋ ಅದನ್ನು ಸ್ವಲ್ಪ ಸಡಿಲಮಾಡಬೇಕು. ಹಿಂದೆ ಎಷ್ಟು ಸ್ಕಾಲರ್‌ಷಿಪ್ ಕೊಡುತ್ತಿದ್ದರೋ ಅಷ್ಟೆ ಸ್ಕಾಲರ್‌ಷಿಪ್ ಕೊಡುತ್ತಿದ್ದಾರೆ. ಆದ್ದರಿಂದ ಇದನ್ನು ಹೆಚ್ಚು ಮಾಡಬೇಕು. ಆ ರೀತಿ ಮಾಡಿದರೆ ಕಾಲೇಜಿನಲ್ಲಿ ಅಭ್ಯಾಸ ಮಾಡತಕ್ಕ ಹರಿಜನ ಗಿರಿಜನ ವಿದ್ಯಾರ್ಥಿಗಳಿಗೆ ಹೆಚ್ಚಿನ ಸೌಲತ್ತು ಕೊಟ್ಟರೆ ಅವರು ವಿದ್ಯಾವಂತರಾಗಿ ಬುದ್ಧಿವಿಕಾಸ ಮಾಡಿಕೊಂಡು ಅವರು ಉಚ್ಚ ವ್ಯಾಸಂಗವನ್ನು ಮಾಡುವುದಕ್ಕೆ ಅನುಕೂಲವಾಗುತ್ತದೆ. ಈಗ ಸೆಂಟ್ರಲ್ ಕಾಲೇಜ್ ಹಾಸ್ಟಲಿನಲ್ಲಿ ಮತ್ತು 3-4 ಹಾಸ್ಟಲುಗಳಲ್ಲಿ ಹರಿಜನ ಗಿರಿಜನ ವಿದ್ಯಾರ್ಥಿಗಳಿಗೆ ಕೆಲವು ಟ್ರೈನಿಂಗ್‌ಗಳನ್ನು ಸರ್ಕಾರದವರು ಕೊಡುತ್ತಿದ್ದಾರೆ. ಅಲ್ಲಿ ಟ್ರೈನಿಂಗ್‌ಗಳನ್ನು ಕೊಡುವುದಕ್ಕೆ ಅಲ್ಲಿರತಕ್ಕ ಉಪಾಧ್ಯಾಯರ ಪೈಕಿ ತಮ್ಮ ಸ್ವಂತಜಾತಿಯ ಉಪಾಧ್ಯಾಯರನ್ನೇ ಟ್ರೈನಿಂಗ್ ಕೊಡುವುದಕ್ಕೆ ನೇಮಕ ಮಾಡುತ್ತಾರೆಯೇ ವಿನಾ ಬೇರೆಯವರಿಗೆ ಅವಕಾಶ ಕೊಡುವುದಿಲ್ಲ. ಆ ಉಪಾಧ್ಯಾಯರು ಹುಡುಗರಿಗೆ

ಸರಿಯಾಗಿ ಪಾಠ ಕೂಡ ಮಾಡುವುದಿಲ್ಲ. ಆದ್ದರಿಂದ ಆ ಮಕ್ಕಳಿಗೆ ಸರಿಯಾಗಿ ಪಾಠವನ್ನು ಹೇಳಿ ಕೊಡುವುದಕ್ಕೆ ಸಧ್ಯಾದ ಉಪಾಧ್ಯಾಯರನ್ನು ನೇಮಕ ಮಾಡಿ ಆವರು ಪರೀಕ್ಷೆಯಲ್ಲಿ ತೇರ್ಗಡೆ ಯಾಗುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಹೇಳಿ, ಈ ತರಾವನ್ನು ನಾನು ಅನುಮೋದಿ ಸುತ್ತೇನೆ. ಇಷ್ಟು ಹೇಳಿ ನನಗೆ ಅಧ್ಯಕ್ಷರು ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟದ್ದಕ್ಕಾಗಿ ಅವರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ಮಾನ್ಯ ಸಭಾಧ್ಯಕ್ಷರೇ, ಈ ನಿರ್ಣಯವನ್ನು ಮಾನ್ಯ ಹೆಗರೆಯವರು ತೆಗೆದುಕೊಂಡು ಬಂದಿರುವುದು ಬಹಳ ಸಾದುವಾಗಿದು ಮತ್ತು ಅದನ್ನು ನಾನು ಪೂರ್ತಿಯಾಗಿ ಅನುಮೋದಿಸುತ್ತೇನೆ. ಇದರಲ್ಲಿ ನಿಮ್ನ ವರ್ಗದವರಿಗೆ ಕಾಲೇಜುಗಳಲ್ಲಿ ಹೆಚ್ಚಿನ ಸವಲತ್ತುಗಳನ್ನು ಕೊಡಬೇಕೆಂದು ಹೇಳಿದ್ದಾರೆ. ಇವತ್ತು ಹರಿಜನ ಗಿರಿಜನರ ಪರಿಸ್ಥಿತಿ ಇನ್ನೂ ಉತ್ತಮಗೊಂಡಿಲ್ಲ. ವಿದ್ಯಾರ್ಥಿಗಳ ಮತ್ತು ಇತರ ಹರಿಜನರ ಪರಿಸ್ಥಿತಿ ಇನ್ನೂ ಏಕೋ ಪಕ್ಕೆ ಹೋಗಿ ಅನ್ಯಾಯವಾಗುತ್ತಿದೆ . ನಾನು ಹೇಳುವುದೇನೆಂದರೆ ಈ ಜಾತಿ ಮತಗಳನ್ನು ಎಲ್ಲಿ ಯವರೆಗೆ ಸಮಾಜದಲ್ಲಿ ತೆಗೆದು ಹಾಕುವುದಿಲ್ಲವೋ ಅಲ್ಲಿಯವರೆಗೆ ಇದು ಹೋಗುವುದಿಲ್ಲ. ಇಂದು ಹರಿ ಜನರ ಶೋಷಣೆ ಬಹಳ ನಡೆಯುತ್ತಿದೆ. ಆದ್ದರಿಂದ ನಮ್ಮ ಸಮಾಜದಲ್ಲಿಯೇ ಮೂಲಭೂತವಾದ ಬದಲಾವಣೆಗಳನ್ನು ಮಾಡಬೇಕಾಗಿದೆ. ನಾವು ಹಿಂದು ಜಾತಿ ರಹಿತ, ವರ್ಗರಹಿತ ಸಮಾಜವನ್ನು ಕಟ್ಟಬೇಕಾಗಿದೆ. ಜಾತಿಯ ಆಧಾರದ ಮೇಲೆ ಯಾರಾದರೂ ಏನನ್ನಾದರೂ ಮಾಡಿದರೆ ಅದರ ಬಗ್ಗೆ ಸರ್ಕಾರದವರೂ ಉಗ್ರವಾದ ಕ್ರಮವನ್ನು ತೆಗೆದುಕೊಳ್ಳಬೇಕಾಗಿದೆ. ಇವತ್ತು ಕಾಲೇಜು, ಹೈಸ್ಕೂಲು ಮತ್ತು ಹಾಸ್ಟೆಲುಗಳ ಪರಿಸ್ಥಿತಿ ಹದಗೆಟ್ಟು ಹೋಗಿದೆ. ಹಿಂದೆ ವಿದ್ಯಾರ್ಥಿಗಳಿಗೆ 1 -20 ವರ್ಷಗಳ ಹಿಂದೆ 20-30 ರೂಪಾಯಿ ಕೊಡುವ ರೂಲ್ಸ್ ಮಾಡಿದರು. ಅದೇ ಪದ್ಧತಿ ಈಗಲೂ ನಡೆಯುತ್ತಿದೆ. ಅದರಲ್ಲಿ ವಿದ್ಯಾರ್ಥಿಗೆ ಎರಡು ಹೊತ್ತು ಊಟ ಸಹ ಮಾಡಲು ಸಾಧ್ಯವಾ ಗುವುದಿಲ್ಲ. ಆದ್ದರಿಂದ ಅವರಿಗೆ ಕೊಡುವ ಹಣವನ್ನು ಇನ್ನೂ ಹೆಚ್ಚಿಸಬೇಕೆಂದು ಹೇಳುತ್ತೇನೆ. ಸೋಶಿಯಲ್ ವೆಲ್‌ಫೇರಿನಲ್ಲಿ ಹೆಚ್ಚು ಹಣ ಒದಗಿಸಿಕೊಡುತ್ತೇವೆಂದು ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದಾರೆ. ಅದನ್ನು ಇದಕ್ಕೋಸ್ಕರ ಉಪಯೋಗಿಸಿಕೊಳ್ಳಬೇಕೆಂದು ಹೇಳುತ್ತೇನೆ.

ಅದೇ ರೀತಿ ಎಜ್ಯುಕೇಶನ್ನಿನಲ್ಲಿ ಕೈಗಾರಿಕೆಗಳ ಕೆಲಸಕ್ಕನುಗುಣವಾಗಿ ಓರಿಯೆಂಟೇಶನ್ ಕೋರ್ಸನ್ನು ಮಾಡಿ, ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮುಗಿಸಿದ ತಕ್ಷಣ ಕೈಗಾರಿಕಾ ಕ್ಷೇತ್ರಗಳಲ್ಲಿ ದುಡಿಯುವಂತೆ ವ್ಯವಸ್ಥೆ ಮಾಡಬೇಕು. ಏಕೆಂದರೆ ಮೊನ್ನೆ ಬಿ ಇ ಎಲ್ ನಲ್ಲಿ ಜಿರ್ಲಾಪಾರು ಪೋಸ್ಟುಗಳನ್ನು ಈ ನಿಮ್ನ ವರ್ಗದ ಜನರಿಗೆ ವಿಸಲಾಗಿಟ್ಟಿದ್ದರೂ, ಸಾಕಷ್ಟು ಅವುಗಳಿಗೆ ಅರ್ಹ ರಾಗಿ ಬಂದಿಲ್ಲ. ಆದ್ದರಿಂದ ವಿದ್ಯಾಭ್ಯಾಸದಲ್ಲಿ ಒಂದು ರೀ ಓರಿಯೆಂಟೇಶನ್ನು ಮಾಡಬೇಕು.

ಮೂರನೆಯದು ಏನೆಂದರೆ, ಈ ಫಾರಿನ್ ಸ್ಕಾಲರ್‌ಷಿಪ್, ಓರಿಯೆಂಟೇಶನ್ ಇನ್ ಎಜುಕೇಶನ್, ಹಾಸ್ಟೆಲ್ ಸೌಕರ್ಯ—ಇತ್ಯಾದಿಗಳನ್ನು ವಿಮರ್ಶೆ ಮಾಡಿ ಎಂದು ಒಪ್ಪಿಸಲು ನಮ್ಮ ಲೆಜಿಸ್ಲೇಚರಿನ ಒಂದು ಕಮಿಟಿಯನ್ನು ಮಾಡಬೇಕು. ಏಕೆಂದರೆ ಆದರ ಬಗ್ಗೆ ಈಗ ಒಂದು ಕಮಿಟಿ ಇದ್ದರೂ, ಅವರಿಗೆ ಪ್ರತ್ಯೇಕವಾಗಿ ಇವುಗಳನ್ನು ನೋಡಿಕೊಳ್ಳುವುದಕ್ಕೆ ಸಮಯವಿಲ್ಲ. ಆದ್ದರಿಂದ ಇಂತಹ ಒಂದು ಕಮಿಟಿಯನ್ನು ಮಾಡಬೇಕೆಂದು ನಾನು ಸೂಚನೆ ಮಾಡುತ್ತೇನೆ. ಇದರಿಂದ ಹರಿ ಜನ ಗಿರಿಜನರಿಗೆ ಇನ್ನೂ ಹೆಚ್ಚಿನ ಅನುಕೂಲವಾಗುತ್ತದೆ ಎಂದು ಹೇಳಿ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಸಿ. ಬೈರೇಗೌಡ (ವೇಮಗಲ್).—ಮಾನ್ಯ ಅಧ್ಯಕ್ಷರೆ, ನಭೆಯ ಮುಂದಿರುವ ನಿರ್ಣಯ ವನ್ನು ಬೆಂಬಲಿಸಿ ಕೆಲವು ಮಾತುಗಳನ್ನು ಹೇಳುತ್ತೇನೆ. ಇಪ್ಪತ್ತಿನ ದಿವಸ ಬಹುತೇಕ ಕಾಲೇಜು ಗಳು ನಗರದಲ್ಲಿ ಇವೆ. ಆದರೆ ಗ್ರಾಮಾಂತರ ಪ್ರದೇಶಗಳಲ್ಲಿ ಪರಿಸ್ಥಿತಿ ಏನಿವೆ ಎಂಬುದರ ಬಗ್ಗೆ ಕೆಲವು ಮಾತುಗಳಲ್ಲಿ ಹೇಳುತ್ತೇನೆ. ಈಗ ತಾಲೂಕುಗಳ ಮುಖ್ಯ ಕೇಂದ್ರಗಳಲ್ಲಿ ನಿಮ್ನ ವರ್ಗದವ ರಿಗೆ ಹಾಸ್ಟೆಲುಗಳನ್ನು ಕಟ್ಟಬೇಕೆಂಬ ನೀತಿ ಇದೆ. ಅದಕ್ಕೆ ತಾಲ್ಲೂಕು ಬೋರ್ಡಿನವರು ಕಟ್ಟುವದರ 25 ಪರ್ಸೆಂಟ್ ಇಲ್ಲವೇ over and above one lakh of rupees ಹಣವನ್ನು ಕೊಡ ಬೇಕೆಂದು ಮಾಡಿದಾರೆ. ಇದಕ್ಕೆ ತಾಲ್ಲೂಕು ಮಂಡಳಿಯವರು, ಕೊಡುವುದಿಲ್ಲವೆಂದು ಹೇಳಿದರೆ ಅಲ್ಲಿಯ ಜನರಿಗೆ ಆಗತಕ್ಕ ಅನುಕೂಲವು ಆಗದೆ ಕುಂಠಿತವಾಗುತ್ತದೆ. ಆದ್ದರಿಂದ ಇಂತಹ ಹಾಸ್ಟೆಲು ಗಳನ್ನು ಕಟ್ಟಿಸುವುದಕ್ಕೆ ಸರ್ಕಾರದವರು ಯಾರನ್ನೂ ಕೇಳದೆ ನೇರವಾಗಿ ಕಟ್ಟಿಸಿ ಕೊಡುವ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಏಕೆಂದರೆ ತಾಲ್ಲೂಕು ಬೋರ್ಡಿನ ಹಣಕಾಸಿನ ಪರಿ ಸ್ಥಿತಿಯೂ ಅಷ್ಟು ಉತ್ತಮವಾಗಿರುವುದಿಲ್ಲ. ಇವನ್ನು ಸರ್ಕಾರದವರು ಯೋಚನೆ ಮಾಡಬೇಕೆಂದು ಹೇಳುತ್ತೇನೆ.

Sri D. DEVARAJ URS.—We ask for that becau e a certain percentage is g.ven to them from gene al revenues. We are asking them to give a portion o that for his purpose.

11-30 A M.

ಶ್ರೀ ಸಿ. ಬೈರೇಗೌಡ.—ಈಗ ಸರ್ಕಾರದವರ ವಿದ್ಯಾರ್ಥಿವೇತನಗಳನ್ನು ಕೊಡುತ್ತಿದ್ದಾರೆ ಅದು ಹೇಗಿದೆಯೆಂದರೆ ಹಿಂದೆ ಸರ್ಕಾರದವರು ಯಾವುದೋ ಒಂದು ಕಾಲದಲ್ಲಿ ಏನು ಈ ವೇತನವನ್ನು ನಿಗದಿಮಾಡಿದ್ದರೋ ಅದನ್ನೇ ಈಗಲೂ ಕೊಡುತ್ತಿದ್ದಾರೆ. ಅದೇ ಸ್ಕೇಲಿನಲ್ಲಿ ವಿದ್ಯಾರ್ಥಿವೇತನಗಳನ್ನು ಕೊಡುತ್ತಿದ್ದಾರೆ. ಇಲ್ಲಿಯವರೆಗೂ ಅದೇ ರೀತಿ ಕೊಟ್ಟುಕೊಂಡು ಬರುತ್ತಿದ್ದಾರೆ. ಇವತ್ತಿನ ದಿನದ ಬೆಲೆಗಳು ವಿಪರೀತವಾಗಿ ಏರುತ್ತಿರುವಾಗ ಹಾಸ್ಟಲುಗಳಲ್ಲಿ ಬಿಲ್ ಹಿಂದೆ 60 70 ರೂಪಾಯಿಗಳಾಗುತ್ತಿದ್ದುದು ಈಗ 100-150 ರೂಪಾಯಿಗಳವರೆಗೆ ಆಗುತ್ತಿದೆ. ಆದ್ದರಿಂದ ಸ್ಕಾಲರ್‌ಷಿಪ್‌ಗಳನ್ನು ಈಗ ಹಿಂದೆ ಕೊಡುತ್ತಿದ್ದ ಹಾಗೆ ಕೊಟ್ಟರೆ ಅದು ಅಷ್ಟು ಸಮಂಜಸವಾಗಿರುವುದಿಲ್ಲ. ಕೆಲವು ವಿದ್ಯಾರ್ಥಿಗಳು ನಾನು ಕಂಡ ಹಾಗೆ ಹಾಸ್ಟಲ್‌ಗಳಲ್ಲಿರುವುದೇ ಇಲ್ಲ. ಅವರವರ ಮನೆಗಳಿಲ್ಲಿರುತ್ತಾರೆ. ಕೆಲವು ಕಡೆಗಳಲ್ಲಿ ಬೇರೆ ರೂಮ್‌ಗಳನ್ನು ತೆಗೆದುಕೊಂಡು ಬಾಡಿಗೆ ಕೊಟ್ಟುಕೊಂಡು ಇರುವಂಥ ನಿದರ್ಶನಗಳೂ ಇವೆ. ಇಂಥ ಬೆಲೆಗಳಿಗೆ ತಕ್ಕಹಾಗೆ ವಿದ್ಯಾರ್ಥಿಗಳಿಗೆ ಆಗುತ್ತಿರುವ ಖರ್ಚನ್ನು ಸಂದೂಗಿಸುವ ವಿಚಾರವನ್ನು ವಿದ್ಯಾರ್ಥಿವೇತನಗಳನ್ನು ಜಾಸ್ತಿಮಾಡಬೇಕು. ಇನ್ನೊಂದು ವಿಷಯ. ಈ ವಿದ್ಯಾರ್ಥಿವೇತನಗಳನ್ನು ರಿಲೀಜ್ ಮಾಡುವಾಗ ಬಹಳವಾಗಿ ವಿಳಂಬ ಮಾಡುತ್ತಾರೆ. ವರ್ಷದ ಅಂತ್ಯದಲ್ಲಿ ಅಂದರೆ ಮಾರ್ಚ್ 29ನೇ ತಾರೀಖಿನಲ್ಲಿ ರಿಲೀಜ್ ಮಾಡಿರುವ ನಿದರ್ಶನಗಳೂ ಉಂಟು. ಏಕೆ ಈ ರೀತಿ ಮಾಡುತ್ತಾರೋ ಗೊತ್ತಿಲ್ಲ. ಇದು ಬಹಳ ಅನ್ಯಾಯ.

Sri D. DEVARAJ URS.—Let him tell me whether this year it has happened like that.

ಶ್ರೀ ಸಿ. ಬೈರೇಗೌಡ.—ಈ ವರ್ಷದ ಪರಿಸ್ಥಿತಿ ನನಗೆ ಗೊತ್ತಿಲ್ಲ. ಆ ರೀತಿ ಹಿಂದೆ ಮಾಡಿರುವ ನಿದರ್ಶನಗಳು ಇವೆ. ಇದು ಖಂಡಿತವಾಗಿ ಅಪರಾಧ. ಆದ್ದರಿಂದ ವರ್ಷದ ಪ್ರಾರಂಭದಲ್ಲಿಯೇ ಅದನ್ನು ಅನಾನ್ಸ್ ಮಾಡಿ ವಿದ್ಯಾರ್ಥಿಗಳಿಗೆ ಜಾಗ್ರತೆಯಾಗಿ ರಿಲೀಜ್ ಮಾಡುವುದು ಉಚಿತ.

ಇನ್ನೊಂದು ವಿಚಾರ. ನಾನು ಕೆಲವು ಹಾಸ್ಟಲುಗಳನ್ನು ನೋಡಿದ್ದರಲ್ಲಿ ಅಲ್ಲಿ ವಿದ್ಯಾರ್ಥಿಗಳನ್ನು ಕುರಿ ದೊಡ್ಡಿಯಲ್ಲಿ ಕುರಿಗಳನ್ನು ಕೂಡುವ ರೀತಿಯಲ್ಲಿ ಕೂಡಿಹಾಕಿರುತ್ತಾರೆ. ವಿದ್ಯಾರ್ಥಿಗಳ ಪರಿಸ್ಥಿತಿ ಅಲ್ಲಿ ಆ ರೀತಿಯಾಗಿದೆ. ಒಂದೊಂದು ಕಡೆ ವಿದ್ಯಾರ್ಥಿಗಳು ಬೇಕಾದಷ್ಟು ಇದ್ದರೂ ಸ್ಥಳಾವಕಾಶವಿರುವುದಿಲ್ಲ. ಅವರಿಗೆಲ್ಲರಿಗೂ ಸ್ಥಳಾವಕಾಶವನ್ನು ಸಂಪೂರ್ಣವಾಗಿ ಯೋಗ್ಯವಾದ ಕಟ್ಟಡವನ್ನು ಒದಗಿಸುವ ರೀತಿಯಲ್ಲಿ ತೀವ್ರವಾದ ಕ್ರಮಗಳನ್ನು ತಕ್ಷಣ ತೆಗೆದುಕೊಳ್ಳಬೇಕು. ಇವತ್ತು ಸೇಕಡ 18 ರಷ್ಟು ರಿಜರ್ವೇಷನ್ ನಿಮ್ನವರ್ಗದವರಿಗೆ ವಿಸನರವಾಗಿಡಬೇಕೆಂದು ರಾಜ್ಯದ ಬಡ್ಜೆಟ್ಟಿನಲ್ಲಿ ಸೂಕ್ತ ವ್ಯವಸ್ಥೆಯಾಗಬೇಕು. ಈ ರೀತಿಯಾಗಿ ಈಗ ಯಾವ ರಾಜ್ಯದಲ್ಲಿಯೂ ಇಲ್ಲ. ಇನ್ನೂ ಬಡ್ಜೆಟ್ ನಮ್ಮ ಮುಂದೆ ಬಂದಿಲ್ಲ. ಸೇಕಡ 18ರಷ್ಟು ರಿಜರ್ವೇಷನ್ ನಾವು ಮಾಡಿರುವ ಕೀರ್ತಿ ನಮ್ಮ ಪೆಟ್ಟಿಸೂರು ರಾಜ್ಯಕ್ಕೆ ಬರಬೇಕೆಂದು ನಾನು ಹೇಳುತ್ತೇನೆ.

ಕೊನೆಯದಾಗಿ ನನಗೆ ಇಷ್ಟು ವಿಷಯಗಳನ್ನು ಈ ಸಭೆಯಲ್ಲಿ ಹೇಳುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಡಿ. ದೇವರಾಜ್ ಅರಸ್ (ಮುಖ್ಯಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ತಡದಿರತಕ್ಕ ನಿರ್ಣಯ ಬಹು ಮುಖ್ಯವಾಗಿ ಕಾಲೇಜಿನಲ್ಲಿ ಓದತಕ್ಕ ವಿದ್ಯಾರ್ಥಿಗಳಿಗೆ ಸೀಮಿತವಾದ ಒಂದು ನಿರ್ಣಯವಾಗಿದ್ದರೂ ಈ ನಿರ್ಣಯದಲ್ಲಿ ಹರಿಜನ ಗಿರಿಜನ ವಿದ್ಯಾರ್ಥಿಗಳಿಗೆ ಸಂಬಂಧಪಟ್ಟ ಎಲ್ಲಾ ಸಮಸ್ಯೆಗಳನ್ನು ಇಲ್ಲಿ ಪ್ರಸ್ತಾಪ ಮಾಡಲಾಗಿದೆ. ಒಂದು ರೀತಿಯಲ್ಲಿ ಅವರು ಆ ರೀತಿ ಪ್ರಸ್ತಾಪಮಾಡುವುದಕ್ಕೂ, ನಾವು ಅವಕ್ಕೆ ಒಂದು ಅವಕಾಶವನ್ನು ಕೊಟ್ಟಿದ್ದಕ್ಕೂ ನನ್ನ ದೃಷ್ಟಿಯಲ್ಲಿ ಒಳ್ಳೆಯ ದೆಂದು ನಾನು ಭಾವಿಸುತ್ತೇನೆ. ಏಕೆಂದರೆ ಈ ಸರ್ಕಾರಕ್ಕೆ ಈ ಒಂದು ವಿಚಾರದಲ್ಲಿ ಮಾನ್ಯ ಸದಸ್ಯರ ಅಭಿಪ್ರಾಯಗಳನ್ನು ತಿಳಿದು ಸೂಕ್ತವಾದ ಬದಲಾವಣೆಗಳನ್ನು ಮಾಡಿ ಸೂಕ್ತ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಒಂದು ಅವಕಾಶವನ್ನು ಮಾಡಿಕೊಟ್ಟ ಹಾಗೆ ಆಗಿದೆ. ಈ ನಿರ್ಣಯದ ಮುಖ್ಯೋದ್ದೇಶ ಈ ರೀತಿ ಇದೆ: "Provision be made

in the relevant rules to give full assistance to Scheduled Castes and Scheduled Tribes College students in the State so as to achieve the desired results in the advancement of these communities in education field." ಫುಲ್ ಅಸಿಸ್ಟೆನ್ಸ್ ಎಂದು ಹೇಳಿದರೆ ಕಾಲೇಜಿನಲ್ಲಿ ಓದತಕ್ಕ ಎಲ್ಲಾ ವಿದ್ಯಾರ್ಥಿಗಳಿಗೂ 100 ರೂಪಾಯಿಗಳವರೆಗೆ ಸ್ಕಾಲರ್‌ಷಿಪ್ ಕೊಡಲಾಗುತ್ತಿದೆಯೆಂದು ಕಾಣುತ್ತದೆ. ಅಂದರೆ, ಕೇಂದ್ರ ಸರ್ಕಾರದವರು ಕೊಡುವ ಸ್ಕಾಲರ್‌ಷಿಪ್ ಜೊತೆಗೆ ನಮ್ಮ ರಾಜ್ಯ ಸರ್ಕಾರದವರು ಸ್ವಲ್ಪ ಮುಟ್ಟಿಗೆ ಸೇರಿಸಿ ಕೊಡತಕ್ಕದ್ದಾಗಿರಬೇಕು. ಅಂದರೆ ಒಟ್ಟು ಅವರಿಗೆ 100 ರೂಪಾಯಿಗಳವರೆಗೆ ಈಗ ಬರುತ್ತಿದೆ. ಕಾಲೇಜಿನಲ್ಲಿ ಓದತಕ್ಕ ವಿದ್ಯಾರ್ಥಿಗಳಿಗೆ ತಾವು ಹೇಳಿದ್ದರಲ್ಲಿ 100 ರೂಪಾಯಿಗಳಿಗಿಂತ ಜಾಸ್ತಿ ಕೊಡಬೇಕೆಂದು ಅರ್ಥವಾಗುತ್ತದೆ.

ಶ್ರೀ ಕೆ. ಪ್ರಭಾಕರ್:—ಸ್ಕಾಲರ್‌ಷಿಪ್ ಕೊಡುವಾಗ ಫೀಸನ್ನು ಕಟ್ ಮಾಡಿ ಕೊಡುತ್ತಿದ್ದಾರೆ.

ಶ್ರೀ ಡಿ. ದೇವರಾಜ್ ಅರಸ್.—ಸ್ಕಾಲರ್‌ಷಿಪ್ ಬರುವವರಿಗೆ ಫೀಸ್ ಇಲ್ಲವೆಬುಂದು ನಮಗೂ ಗೊತ್ತಿದೆ.

ಶ್ರೀ ಕೆ. ಪ್ರಭಾಕರ್.—ಫೀಸನ್ನು ಅದರಲ್ಲಿ ಕಟ್ ಮಾಡಿದರೆ, ವಿದ್ಯಾರ್ಥಿವೇತನದ ನೆಟ್ ಬ್ಯಾಲೆನ್ಸ್ ಕಡಿಮೆಯಾಗುತ್ತದೆ. ಹಿಂದೆ ವಿದ್ಯಾರ್ಥಿವೇತನವನ್ನು ಹೇಗೆ ಕೊಡುತ್ತಿದ್ದರು ಅಂದರೆ All those boys who hold scholarship should automatically be exempted from fees. We will make a note of it. I do not know why that rule has been framed. If that is so, I do agree that it should be changed and it should be made upto Rs. 100/—without fees ಇದು ಅತ್ಯಗತ್ಯವಾಗಿ ಆಗಬೇಕಾದುದಾಗಿದೆ. ಈಗ ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳಿಂದ ಸುಮಾರು 67 ಲಕ್ಷ ರೂಪಾಯಿಗಳು ಖರ್ಚಾಗುತ್ತಿವೆ. ಇನ್ನೂ ಸ್ವಲ್ಪ ಖರ್ಚಾದರೂ ಪರವಾಇಲ್ಲ. ತಮಗೆ ಬೇಕಾದರೆ ಅಂಕಿಅಂಶಗಳನ್ನು ಕೊಡುತ್ತೇನೆ. ಈಗ ಸುಮಾರು 12 ಸಾವಿರ ಚಿಲ್ಲರೆ ಮಕ್ಕಳಿಗೆ ಸ್ಕಾಲರ್‌ಷಿಪ್ಪನ್ನು ಕೊಡುತ್ತಿದ್ದಾರೆ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡತಕ್ಕವರಿಗೆ ವಿದ್ಯಾರ್ಥಿ ವೇತನಗಳನ್ನು ಹೆಚ್ಚಿಗೆ ಕೊಡುವುದಕ್ಕೆ ನೂಕ್ಕವಾಗಿ ರೂಲ್ಸನ್ನು ಬದಲಾವಣೆ ಮಾಡುವುದಕ್ಕೆ ಆಜ್ಞೆ ಕೊಡಲಾಗುತ್ತದೆ. ಇನೊಂದು ವಿಚಾರವಾಗಿ ಮಾನ್ಯ ಸದಸ್ಯರು ಹೇಳಿದರು. ಅವರಿಗೆಲ್ಲರಿಗೂ ಹಾಸ್ಟಲ್ ಸೌಲಭ್ಯಗಳು ನಿಜವಾಗಿಯೂ ಬೇಕಾಗಿವೆ: ನಾನು ಅದನ್ನು ಒಪ್ಪತಕ್ಕವನೇ. ಆದರೆ ಈ ಹಾಸ್ಟಲ್ ಸೌಲಭ್ಯಗಳು ನಿಜವಾಗಿಯೂ ಬೇಕಾಗಿವೆ. ನಾನು ಅದನ್ನು ಒಪ್ಪತಕ್ಕವನೇ. ಆದರೆ ಈ ಹಾಸ್ಟಲ್ ಫೆಸಿಲಿಟೀಸನ್ನು ಕೊಡುವಾಗ ನನಗೆ ಈ ವಿಚಾರದಲ್ಲಿ ನನ್ನ ಮನಸ್ಸಿಗೆ ಒಂದು ಜಿಜ್ಞಾಸೆ ಇದೆ. ನನ್ನ ವೈಯಕ್ತಿಕ ಅಭಿಪ್ರಾಯದಲ್ಲಿ ಹಾಸ್ಟೆಲುಗಳು ಮಾತ್ರ ಯಾವ ಜಾತಿಯವರೇ ಆಗಲೀ ನಿಮ್ಮ ಪಂಗಡದವರೇ ಆಗಲೀ ಒಂದೇ ಜಾತಿಯವರಿಗೆಂದು ಅಲ್ಲಿ ಸೀಮಿತವಾಗಿ ಇರಬಾರದು. ಅದು ನನ್ನ ಒಮ್ಮತದ ಅಭಿಪ್ರಾಯ. ಈ ಸಭೆಯ ಸದಸ್ಯರೆಲ್ಲರ ಅಭಿಪ್ರಾಯವೂ ಅದೇ ಎಂಬುದಾಗಿ ನಾನು ಹೇಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಆ ರೀತಿಯಾಗಿ ಜಾಗ್ರತೆಯಾಗಿ ತೀರ್ಮಾನಮಾಡಿ ಅದನ್ನು ಜಾರಿಗೆ ತೆಗದುಕೊಂಡು ಬನ್ನಿ. ಆಗ ಎಲ್ಲರೂ ಅದನ್ನು ಒಪ್ಪುತ್ತಾರೆ.

ಶ್ರೀ ಡಿ. ದೇವರಾಜ ಅರಸ್.—ಕೆಲವಾರು ವರ್ಷಗಳಿಂದ ನಮ್ಮ ದೇಶದಲ್ಲಿ ಹಾಸ್ಟಲ್ ಕಟ್ಟ ತಕ್ಕಂಥದ್ದು, ಅದಕ್ಕಾಗಿ ದುಡ್ಡು ಕೊಡುವಂಥಾದ್ದು, ಇತರೇ ಸಹಾಯ ಸೌಲಭ್ಯಗಳನ್ನು ಒದಗಿಸುವಂತ ವಿಧಾನ, ಮಾರ್ಗವೇನಿದೆಯೋ ಅದು ನನಗಂತೂ ಏನೂ ಹಿಡಿಸಿಲ್ಲ. ಬಹಳ ಸಂಕಟವಾಗುತ್ತಿದೆ. ನನ್ನ ದೃಷ್ಟಿಯಲ್ಲಿ ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳುವುದಾದರೆ, ನಾನು ಕಾಲೇಜಿನಲ್ಲಿ ಓದುವಾಗ ಸೆಂಟ್ರಲ್ ಕಾಲೇಜ್ ಹಾಸ್ಟಲ್ ಎಂಬುದಾಗಿ ಇತ್ತು. ನನಗೆ ತಿಳಿದ ಮಟ್ಟಿಗೆ ಅಲ್ಲಿ ಎಲ್ಲಾ ಜಾತಿಯವರೂ ಇದ್ದರು. ನಿಮ್ಮ ಪಂಗಡಗಳವರೂ ಸಹ ಇದ್ದರು. ಅಲ್ಲಿನ ಮೆಸ್‌ನಲ್ಲಿ ವೆಜಿಟೇರಿಯನ್, ನಾನ್ ವೆಜಿಟೇರಿಯನ್ ಎಂದೇನೂ ಇರಲಿಲ್ಲ. ನಾನು ಊಟಮಾಡುವಾಗ ಅನೇಕ ಸಂದರ್ಭಗಳಲ್ಲಿ ಯಾರು, ಯಾವ ಜಾತಿಯವರು ಎಂದು ನೋಡುತ್ತಿರಲಿಲ್ಲ. ಇದೆಲ್ಲ ಇತ್ತೀಚೆಗೆ ಅನಿವಾರ್ಯವಾಗಿ ಬಂದಿರತಕ್ಕದ್ದು. ನನ್ನ ಜೊತೆಯಲ್ಲಿ ನಾನಾ ಪಂಗಡಗಳವರು ಇರುತ್ತಿದ್ದರು. ಆದರೆ ಆಗ ಜೆಮಾಕ್ಸನ್ ಬಂದಿರಲಿಲ್ಲ. ಈಗ ಇದು ಕೇವಲ ಓಟಿಗೋಸ್ಕರ ಬಂದಿರುವ ಕ್ಲೋಥೆ. ಜಾತಿ ಕೇವಲ ಓಟಿಗೋಸ್ಕರ ಬೇಕು. ಅವೆಲ್ಲವೂ ಓಟುಗಳಿಂದ ಮಾತ್ರ ಬಂದಿದೆ.

(ಶ್ರೀ ಡಿ. ದೇವೆರಾಜ ಅರಸ್)

ಆದ್ದರಿಂದ ಇವೆಲ್ಲವನ್ನೂ ಹುಡುಕಿ ಶೋಧಿಸಿ ಇಡಬೇಕಾದ ಪರಿಸ್ಥಿತಿ ಈಗ ಬರುತ್ತಿದೆ. ಡೆಮಾಕ್ರಸಿ ಬಂದಮೇಲೆ ಇವೆಲ್ಲವೂ ಇತ್ತೀಚೆಗೆ ಬಹಳ ಜಾಸ್ತಿಯಾಗಿ ಬಂದಿವೆ. ಸ್ವಾತಂತ್ರ್ಯ ಬಂದ ಈಚಿನ ಯುಗ ಮತ್ತು ಹಿಂದಿನ ಯುಗವನ್ನು ಹೋಲಿಸಿ ನೋಡಿದರೆ, ಈಗ ಉದ್ಭವಿಸಿರುವಂತಹ ಜಾತಿಯ ವಾದ ಆಗ, ಖಂಡಿತವಾಗಿಯೂ ಇರಲಿಲ್ಲವೆಂದು ನಾನು .ಈ ಸಂದರ್ಭದಲ್ಲಿ ಧೈರ್ಯವಾಗಿ ಹೇಳಬಲ್ಲೆ. ಏನೇ ಆಗಲಿ ಆಗಿದೆ. ಆದಕ್ಕೆ ಬೀಜವನ್ನು ಹಾಕಿದ್ದು ಈ ಹಾಸ್ಟಲುಗಳೇ ಎಂದು ನನ್ನ ಖಚಿತವಾದ ಅಭಿಪ್ರಾಯ. ಈ ಕೋಮುವಾರು ಹಾಸ್ಟಲುಗಳು ಆ ಕೊಮಿನ ಪದದ ಹಿಂದೆಯೋ ಅಥವಾ ಮುಂದೆಯೋ 'ಸಾರ್ವಜನಿಕ' ಎಂಬ ಒಂದು ಪದವನ್ನು ಹಾಕಿ ಸರ್ಕಾರದಿಂದ ಗ್ರಾಂಟನ್ನು ಪಡೆಯುವುದಕ್ಕೆ ಪ್ರಾರಂಭಮಾಡಿದರು. ಎಲ್ಲಾ ಜಾತಿಗಳ ಹಾಸ್ಟಲುಗಳ ಮುಂದೆ ಅಥವಾ ಹಿಂದೆ 'ಸಾರ್ವಜನಿಕ' ಎಂಬ ಒಂದು ಪದವನ್ನು ಹಾಕಿಬಿಟ್ಟರೆ ಅದು ಸಾರ್ವಜನಿಕ ಹಾಸ್ಟಲಾಯಿತೇನು ? ಅಷ್ಟು ನಗುಪಾಟಲು ? , ನಮ್ಮ ಸ್ಟ್ಯಾಂಡರ್ಡ್ ಆಫ್ ಥಿಂಕಿಂಗೇ ಹಾಗಾಗಿಬಿಟ್ಟಿದೆ. ಯಾರೂ ಇದನ್ನು ಚಿಂತನೆ ಮಾಡುತ್ತಿಲ್ಲ ; ಖಂಡನೆಯನ್ನೂ ಮಾಡುತ್ತಿಲ್ಲ. ಈ ದಿವಸ ಬ್ರಾಹ್ಮಣರ ಸಾರ್ವಜನಿಕ ಹಾಸ್ಟಲು, ಒಕ್ಕಲಿಗರ ಸಾರ್ವಜನಿಕ ಹಾಸ್ಟಲು, ಲಿಂಗಾಯಿತರ ಸಾರ್ವಜನಿಕ ಹಾಸ್ಟಲು, ಕರಾವರ ಸಾರ್ವಜನಿಕ ಹಾಸ್ಟಲು— ಎಂದರೆ ಹೀಗೆ ಎಲ್ಲವೂ ಸಾರ್ವಜನಿಕ ಎಂಬ ಒಂದು ಶಬ್ದವನ್ನು ಉಪಯೋಗಿಸಿದ್ದಾಕ್ಷಣಕ್ಕೆ ಅವರು ಮಾಡತಕ್ಕ ಕಾರ್ಯ ಪರಿಶುದ್ಧವಾಯಿತೇ ? ಅದೂ ಆಯಿತೆನ್ನೋಣ ಆದರೆ ಆ ಜಾತಿಯಲ್ಲಾದರೂ ತಾರತಮ್ಯವಿಲ್ಲದೆ ಎಲ್ಲರಿಗೂ ಒಂದೇ ಭಾವನೆಯಿಂದ ನೋಡಲಾಗುತ್ತಿದೆಯೇ ಎಂದರೆ ಅದೂ ಕೂಡ ಇಲ್ಲ. ಕಾರಣ ಆ ಜಾತಿಯಲ್ಲಿ ಮತ್ತೆ ಹತ್ತಾರು ಒಳಜಾತಿಗಳು, ಅಷ್ಟೇ ಅಲ್ಲದೆ ಅಲ್ಲಿ ಹಾಸ್ಟಲಿನಲ್ಲಿ ಯಾವ ವಿದ್ಯಾರ್ಥಿ ತಾನು ರಜಾದಲ್ಲಿ ಹಾಸ್ಟಲನ್ನು ಬಿಟ್ಟು ಹೋಗಿದ್ದರೂ ಇಲ್ಲಾ ನಾನು ಹಾಸ್ಟಲಿನಲ್ಲೇ ಇದ್ದೇ ಎಂದು ಸುಳ್ಳು ಬರವಣಿಗೆ ಮಾಡಿಕೊಡತಕ್ಕವನಿಗೆ ಈ ಹಾಸ್ಟಲುಗಳಲ್ಲಿ ಇರತಕ್ಕ ಮರ್ಯಾದೆ ಸಾಚಾ ಹುಡುಗನಿಗಿರುವುದಿಲ್ಲ. ಸಾಚಾ ಹುಡುಗರಿದ್ದ ಕಡೆ ಹಾಸ್ಟಲುಗಳಲ್ಲಿ ದುಡ್ಡು ತಿನ್ನುವುದಕ್ಕೆ ಅವಕಾಶವಿರುವುದಿಲ್ಲ. ಆದಾಗ್ಯೂ ನಾವು ಇವುಗಳಿಗೆಲ್ಲಾ ಅವಕಾಶವನ್ನು ಕೊಡುತ್ತಲೇ ಬಂದಿದ್ದೇವೆ. ಇದೇರೀತಿ ಇನ್ನು ಕೆಲವು ಕಡೆ ಹರಿಜನರ ಹಾಸ್ಟಲುಗಳಲ್ಲಿ ಕಡಿಮೆ ಸಂಖ್ಯೆಯಲ್ಲಿ ವಿದ್ಯಾರ್ಥಿಗಳಿದ್ದರೂ ಅಲ್ಲಿ ಒಂದು ಸಾವಿರ ವಿದ್ಯಾರ್ಥಿಗಳು ಪೂರ್ಣ ಇವ್ಯಾರೆಂದು ಬರೆದು ಗ್ರಾಂಟನ್ನು ಹೊಡೆಯುತ್ತಿದ್ದಾರೆ ಇಂಥಾವೆಲ್ಲಾ ಎಷ್ಟೋ ನಡೆಯುತ್ತಿದೆ. ಅದನ್ನೆಲ್ಲಾ ನಾನು ಇಲ್ಲಿ ಎಂದು ಹೇಳುವುದಿಲ್ಲ ಇಷ್ಟೆಲ್ಲಾ ಮೋಸಗಳು ನಡೆಯುತ್ತಿದರೂ ನಾವು ಈ ಹಾಸ್ಟಲುಗಳಿಗೆ ಗ್ರಾಂಟ್ ಕಟ್ಟಡಗಳಿಗೆ ಗ್ರಾಂಟ್ ಹೀಗೆಲ್ಲಾ ಕೊಡುತ್ತಾ ಬಂದಿದ್ದೇವೆ. ಈ ರೀತಿ ಇವತ್ತೆಲ್ಲಾ ಕೈಲೂ ಒಂದು ಬಣ್ಣ ಹೊರೆಸಿಕೊಳ್ಳುವುದರ ಬದಲು ನೇರವಾಗಿ ಸರ್ಕಾರದವರೇ ಏಕೆ ಇದನ್ನು ನಡೆಸಬಾರದೆಂಬ ಯೋಚನೆ ಈಗ ನನಗೆ ಬಾಧಿಸುತ್ತಿದೆ. ನಾನು ಈ ದಿವಸವೇ ನಾಳೆ ಬರತಕ್ಕ ಪ್ರಶ್ನೆಯ ವಿಚಾರದಲ್ಲಿ ಒಂದು ಎಚ್ಚರಿಕೆಯನ್ನು ಕೊಡುತ್ತಿದ್ದೇನೆ— ನಾಳೆ ನಾವು ಈ ಹಾಸ್ಟಲುಗಳಿಗೆ ಕೊಡತಕ್ಕ ಗ್ರಾಂಟನ್ನು ನಿಲ್ಲಿಸಿದಾಗ ಆ ಜಾತಿಯವರಿಗೆ ಕೊಟ್ಟು ನಮಗೆ ಪಾತ್ರ ನಿಲ್ಲಿಸಿದ್ದಾರೆಂದು ಯಾರೂ ಇದರ ಬಗ್ಗೆ ಪ್ರಶ್ನೆ ಮಾಡಬಾರದೆಂದು ಇದನ್ನು ಈಗಲೇ ಹೇಳುತ್ತಿದ್ದೇನೆ ; ಈಗಲೇ ಪೂರ್ವಭಾವಿಯಾಗಿ ಇದನ್ನೂ ತಿಳಿಸಿದ್ದರೆ ಅನುಕೂಲ.

ಇನ್ನು ಶ್ರೀ ಪ್ರಭಾಕರ್ ಅವರು ಸೆಗ್ರಿಗೇಷನ್ ವಿಚಾರ ಹೇಳಿದರು. ಆದರೆ ಅದನ್ನು ಅವರು ಕೂಡ ಹಿಂದಿನಿಂದಲೂ ಅಪ್ರತ್ಯಕ್ಷವಾಗಿ ಒಪ್ಪಿಕೊಂಡೇ ಬಂದಿದ್ದಾರೆ. I am realy against this suggestion. ಅಂಥಾ ಒಂದು ಸನ್ನಿವೇಶವನ್ನು ಉಂಟುಮಾಡುವುದಕ್ಕೆ ಒಂದು ಒಳ್ಳೆಯ ಅವಕಾಶ ಎಂದರೆ ಆ ಸ್ಕೂಲು ಕಾಲೇಜುಗಳಲ್ಲಿರುವುದೂ ಒಂದು ಕಡೆ ಇರಲಿ—ಆದರೆ ಇಂಥ ಹಾಸ್ಟಲುಗಳು ಎಲ್ಲಿರುತ್ತವೆಯೋ ಅಲ್ಲಿ ಎಲ್ಲರೂ ಒಂದು ಕಡೆ ಊಟ—ಆಟ—ಕೂಡಿ ಬೆಳೆಯುತ್ತಿದ್ದರೆ ಇದು ಬಹಳ ಬೇಗ ಹೋಗಬಹುದೆಂದು ನನಗನಿಸುತ್ತಿದೆ. ಆದರೆ ಶ್ರೀ ಕೃಷ್ಣನ್ ಅವರು ಈ ಜಾತಿಗಳು ಬಹು ಬೇಗ ಭಸ್ಮವಾಗಿ ಹೋಗಬೇಕೆಂದು ಹೇಳಿದರು. ಆದರೂ ಅವಿನ್ನೂ ಹೆಚ್ಚುತ್ತಲೇ ಇವೆ. ನಾವೊ ನಮ್ಮ ಹಿಂದಿನವರೂ 'ಸರ್ವೇ ಜನಾ ಸುಖಿನೆ ಭವಂತೂ' ಎಂದು ಹೇಳುತ್ತಿರುವುದು ಯಾವ ಕಾಲದಿಂದ ? ಆದರೆ ಎಲ್ಲರೂ ಸುಖಿಗಳಾಗಿದ್ದಾರೆಯೇ ? ಇಲ್ಲಿಯವರೆಗೂ ಯಾರೂ ಆಗಿಲ್ಲ. ನಮಾಜದಲ್ಲಿ ಏರು ಪೇರುಗಳು ಇದ್ದೇ ಇವೆ. ಅಂದಾಗ ಇನ್ನು ಈ ಜಾತಿಗಳು ಅವರು ಭಸ್ಮವಾಗಬೇಕೆಂದು ಹೇಳಿದರೆ ಅವು ಹೇಗೆ ಭಸ್ಮವಾಗುವುದಕ್ಕೆ ಸಾಧ್ಯ ? ಆದರೆ ಅದಕ್ಕೂ ಮಾರ್ಗವಿದೆ—ಅದು ಆ ಮಾರ್ಕ್ಸ್‌ವಾದ ಒಂದೇ. ಆದರೆ ಆ ಮಾರ್ಕ್ಸ್ ತತ್ವ ತಮಗೆಲ್ಲರಿಗೂ ಗೊತ್ತಿರುವಂತೆ ಜಗತ್ತಿ

ನಲ್ಲಿ ಎರಡು ರಾಷ್ಟ್ರಗಳಲ್ಲಿ ಮಾತ್ರ ಯಶಸ್ವಿಗಳಿಸಿವೆ. ಆದರೆ ನಾವು ಆ ಮಾರ್ಗ ಬೇಕೇ ಬೇಡವೇ ಎಂಬುದನ್ನು ಇನ್ನೂ ನಿರ್ಧಾರ ಮಾಡಬೇಕಾಗಿದೆ. ಆದರೆ ನಾವೀ ದಿವಸ ಇವನ್ನೇಲ್ಲಾ ಒಂದು ಶಾಂತ ಮಾರ್ಗದಲ್ಲಿ ಸಾಧಿಸಬೇಕೆ ಎಂಬುದು ನಮ್ಮ ಗುರಿ. ಇದಕ್ಕಾಗಿ ದೇಶದಲ್ಲಿ ರಕ್ತಪಾತ ವಾಗುವುದು ಬೇಡ ಎಂದು.....

ಶ್ರೀ ಎಂ. ಎಸ್. ಕೃಷ್ಣನ್.—ಹೀಗೆ ಹೇಳುತ್ತಿರುವುದನ್ನು ಜನರು ಕೇಳೀ ಕೇಳೀ ಕಡೆಗೆ ಅವರು ಇಂದು ರೊಚ್ಚಿಗೇಳುವ ಮಟ್ಟಕ್ಕೆ ಬಂದಿದ್ದಾರೆ.

ಶ್ರೀ ಡಿ. ದೇವರಾಜ ಅರಸ್.—ಆಂತೂ ಯಾರೂ ಇನ್ನೂ ರೊಚ್ಚಿಗೆದ್ದಿಲ್ಲ. ಅವರು ಹಾಗೆ ಏಳಲಿ ಅನಂತರ ನೋಡೋಣ. ಆದರೆ ಇದರಲ್ಲಿ ಇನ್ನೂ ಒಂದು ಬಹಳ ಮುಖ್ಯವಾದ ಅಂಶ ಎಂದರೆ ಎಲ್ಲವನ್ನೂ ಏಕ ಕಾಲಕ್ಕೆ ಬದಲಾವಣೆ ಮಾಡುವುದಕ್ಕಾಗುವುದಿಲ್ಲ. ಯಾವುದು ಆಗದಿದ್ದರೂ ಈ ಹಾಸ್ಟಲಿನ ವಿಚಾರವೊಂದರಲ್ಲಾದರೂ ಬದಲಾವಣೆ ಮಾಡೋಣ ಅನ್ನುವುದು ನನ್ನ ಅಭಿಪ್ರಾಯ.

ಶ್ರೀ ಎಂ. ಎಸ್. ಕೃಷ್ಣನ್.—ನಿಮ್ಮ ಪಾರ್ಟಿಯನ್ನು ನೀವು ಒಪ್ಪಿಸಬೇಕು. ಅಲ್ಲಿ ತಾವು ಇಷ್ಟನ್ನು ಹೇಳಿ ಪಾರ್ಟಿಯಲ್ಲಿ ತಾವು ಅವರ ಒತ್ತಾಯಕ್ಕೆ ಮಣಿಯಬಾರದೆಂದು ಹೇಳುತ್ತೇನೆ.

ಶ್ರೀ ಡಿ. ದೇವರಾಜ ಅರಸ್.—ಇಲ್ಲಿ ನಭೆಯಲ್ಲಿ ಒಪ್ಪಿದವರು ಪಾರ್ಟಿಯಲ್ಲಿ ಒಪ್ಪುವುದಿಲ್ಲವೇ? ಆದರೆ ಆ ಹಳೇ ಸಂಪ್ರದಾಯದಲ್ಲೇ ಬೆಂಗಳೂರಲ್ಲಿ ಎರಡು ಹಾಸ್ಟಲುಗಳನ್ನು ಕಟ್ಟಿಸಲು 34 ಲಕ್ಷ ರೂಪಾಯಿಗಳ ಹಣವನ್ನು ಒದಗಿಸಲಾಗಿತ್ತು. ಆ ಪೊಬಲಿಗಿನಲ್ಲಿ 200 ವಿದ್ಯಾರ್ಥಿಗಳಿಗೆ ನೆಳವಾ ಕಾಶ ಇದ್ದರೆ ಅದೇ ಹಣದ ಜೊತೆಯಲ್ಲಿ ಇನ್ನೂ 34 ಲಕ್ಷ ರೂಪಾಯಿಗಳನ್ನು ಹೆಚ್ಚು ವೆಚ್ಚ ಮಾಡಿ ಅಲ್ಲಿ 400 ಜನ ವಿದ್ಯಾರ್ಥಿಗಳಿಗೆ ಅವಕಾಶ ಮಾಡಿ ಅವರಲ್ಲಿ ಹರಿಜನ ಗಿರಿಜನರಿಗೆ ಹೆಚ್ಚಿನ ಪ್ರಾಶಸ್ತ್ಯ ಕೊಟ್ಟರೆ ಆಗಬಹುದೆಂದು ಕಾಣುತ್ತದೆ.

ಶ್ರೀ ಕೆ. ಪ್ರಭಾಕರ್.—ಸರ್ಕಾರದವರು ಈ ದಿವಸ ಬಜೆಟ್‌ನಲ್ಲಿ ಸಮಾಜ ಕಲ್ಯಾಣಾಬಾಬಿಗೆ ಹಣ ವನ್ನು ತೋರಿಸಿ ಆದನ್ನು ಸಾರ್ವಜನಿಕ ಹಾಸ್ಟಲುಗಳನ್ನು ಕಟ್ಟುವುದಕ್ಕೆ ಬಳಸಿದರೆ ಆ ಹಣ ನಮಗೆ ಕನ್ನಡಿಯಲ್ಲಿ ಕಾಣಿಸಿಕ್ಕ ಗಂಟಾಯತೇ ವಿನಾ ಆದರಿಂದ ಸಮಾಜ ಕಲ್ಯಾಣ ಇಲಾಖೆಗೇನೂ ಸಹಾಯವಾಗಲಲ್ಲ. ಇದಕ್ಕೆ ಸರ್ಕಾರದವರು ಏಕೆ ವಿದ್ಯಾ ಬಾಬಿನಿಂದ ಹಣವನ್ನು ಖರ್ಚುಮಾಡ ಬಾರದು ?

ಶ್ರೀ ಡಿ. ದೇವರಾಜ ಅರಸ್.—ನಾನು ಹೇಳುತ್ತಿರುವುದು ಹಾಗಲ್ಲ. ಇದೇ ರೀತಿ ರಾಜ್ಯದ ಇನ್ನೂ ಅನೇಕ ಭಾಗಗಳಲ್ಲಿ ಮೆಟ್ರಿಕ್ಯುಲೇಷನ್‌ಗೆ ಅಭ್ಯಾಸ ಮಾಡತಕ್ಕವರಿಗೆ 60 ಹಾಸ್ಟಲುಗಳನ್ನು ಆ ಹಿಂದಿನ ಸಂಪ್ರದಾಯದ ಮೇಲೆ ಕಟ್ಟಿಸುವುದಕ್ಕೆ ಹೊರಟಿರುತ್ತೆ. ಆದರೆ ಎಲ್ಲಾ ಕಡೆಯಲ್ಲೂ ಏಕಕಾಲಕ್ಕೆ ಈ ಬದಲಾವಣೆಯನ್ನು ಜಾರಿಗೆ ತರುವುದಕ್ಕಾಗುವುದಿಲ್ಲ. ಇದಕ್ಕೆಲ್ಲಾ ಕಾಲಾವಕಾಶ ಬೇಕು.

ಇನ್ನು ಈ ಹಾಸ್ಟಲುಗಳಲ್ಲಿ ಬ್ಯಾಸಂಗ ಮಾಡತಕ್ಕ ವಿದ್ಯಾರ್ಥಿಗಳಿಗೆ ಕೊಡತಕ್ಕ 30 ರೂಪಾಯಿಗಳ ವಿದ್ಯಾರ್ಥಿವೇತನ ಸಾಲದೆಂಬುದು ನನಗೂ ಗೊತ್ತಿದೆ. ಅದನು ನಾನೂ ಒಪ್ಪುತ್ತೇನೆ. ಈಗ ಅದಕ್ಕೇನು ಮಾಡಿದಾ ರೆಂದರೆ ಗೋಧಿಹಿಟ್ಟು ಮುಂತಾದ ಕೆಲವು ಆಹಾರ ಪದಾರ್ಥಗಳನ್ನು ಒದಗಿನುತ್ತಿದ್ದಾರೆ. ವರ್ಲ್ಡ್ ಫುಡ್ ಪ್ರೋಗ್ರಾಂ ಪ್ರಕಾರ 400 ಗ್ರಾಂ ಗೋಧಿ, 40 ಗ್ರಾಂ ಮಿಲ್ಕ್ ಪೌಡರ್, 40 ಗ್ರಾಂ ಆಯಿಲ್ ಒಂದು ದಿವಸಕ್ಕೆ ಒಬ್ಬ ಬೋರ್ಡರ್‌ಗೆ ಒದಗಿನುತ್ತಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಕೆಲವು ಕಡೆ ಹುಳುಬಿದ್ದು ಕೆಟ್ಟು ಹೋಗಿರುವುದನ್ನು ಕೊಡುತ್ತಿದ್ದಾರೆ.

ಶ್ರೀ ಡಿ. ದೇವರಾಜ ಅರಸ್.—ಅದನ್ನು ಗಮನಿಸುತ್ತೇವೆ. ಇತರರು ಯಾರೋ ಮೋಸ ಮಾಡುತ್ತಿದ್ದಾರೆಂದು ಕಾಣುತ್ತದೆ. ಕೊಡುವ 30 ರೂಪಾಯಿ ಸಾಲುವುದಿಲ್ಲ ಎಂಬುದು ಗೊತ್ತಾಗಿದೆ. ಅಮೇಲೆ ಹಾಸ್ಟಲಿನ ಅನುಕೂಲವಿಲ್ಲದಿರುವ ಕಡೆ ಬೇರೆ ಎಲ್ಲಾದರೂ ವಾಸವಾಗಿದ್ದರೆ ಹೋಟೇಲು ಮುಂತಾದ ಕಡೆಗಳಲ್ಲಿದ್ದರೆ ಅವರ ಖರ್ಚನ್ನು ವಹಿಸಿಕೊಳ್ಳಬೇಕೆಂಬ ನಲಹೆ ಇದೆ. ಈಗ ಕೊಡುವುದು ಸಾಲುವುದಿಲ್ಲ ಎಂದು ಹೇಳುತ್ತಿದ್ದಾರೆ. ಇದನ್ನು ಗಮನಿಸಿ ಕೊಡುವುದನ್ನು ಸ್ವಲ್ಪ ಹೆಚ್ಚಿಸಲು ಪ್ರಯತ್ನ ಮಾಡೋಣ.

ಶ್ರೀ ಎಂ. ಎಸ್. ಕೃಷ್ಣನ್.—ನಮ್ಮ ಸ್ಕೀಂ ಜಾರಿಗೆ ಬರುವುದಕ್ಕೆ ಮುಂಚೆ ಬೇರೆ ಹಾಸ್ಟಲುಗಳಲ್ಲಿ ಸೇರಿಕೊಳ್ಳಲು ಅವಕಾಶವಿಗಬೇಕು. ಆವರಿಗೆ ಬಾಡಿಗೆ ಕೊಡುವುದಕ್ಕಾಗದಿದ್ದರೆ ವ್ಯತ್ಯಾಸ ವಿರುವುದನ್ನು ಸರಕಾರ ಕೊಡಬೇಕು.

ಶ್ರೀ ಡಿ. ದೇವರಾಜ ಅರಸ್.—ಆದನ್ನು ಯೋಚನೆ ಮಾಡುತ್ತೇವೆ. ಬುಕ್ಸ್ ಕೊಡಬೇಕು ಎಂದು ಶ್ರೀ ಪ್ರಭಾಕರ್‌ರವರು ತಿಳಿಸಿದರು. ಅದಕ್ಕೆ ಸ್ಟೇಡಿ ಬ್ಯಾಂಕ್, ಬುಕ್ ಬ್ಯಾಂಕ್ ಎಂದು ಮಾಡಿ 200 ರೂಪಾಯಿ ಪುಸ್ತಕಗಳನ್ನು ಪ್ರತಿಯೊಬ್ಬರಿಗೂ ಒದಗಿಸಿ ಅನುಕೂಲ ಮಾಡುತ್ತಿದ್ದಾರೆ. ಈ ರೀತಿಯಾಗಿ ಈಗ ಸರಕಾರ ಕೈಗೊಂಡಿರುವ ಕಾರ್ಯಕ್ರಮ ಹೇಳಿದ್ದೇನೆ. ಮುಂದೆ ಮಾಡ ಬೇಕೆಂದಿರುವುದನ್ನೂ ಹೇಳಿದ್ದೇನೆ. ಒಟ್ಟಿನಲ್ಲಿ ಎಲ್ಲರ ಅಭಿಪ್ರಾಯ ಹರಿಜನ—ಗಿರಿಜನರ ಮಕ್ಕಳ ವಿದ್ಯಾಭ್ಯಾಸಕ್ಕೆ ಕಷ್ಟ ಹೆಚ್ಚು ಸೌಲಭ್ಯ ಕೊಡಬೇಕೆಂಬುದೇ ಆಗಿದೆ.

ಶ್ರೀ ಕೋಣಂದೂರು ಲಿಂಗಪ್ಪ.—ಅದು ನಿರಿ. ಹರಿಜನ—ಗಿರಿಜನರ ಮಕ್ಕಳು ಕಾಲೇಜು ಶಿಕ್ಷಣ ಮುಗಿಸಿ ಮುಂದೆ ಪೋಸ್ಟ್ ಗ್ರಾಜುಯೇಟ್ ಕೋರ್ಸ್, ಐ. ಎ. ಎಸ್. ಮತ್ತು ಐ. ಪಿ. ಎಸ್. ಪರೀಕ್ಷೆಗಳಿಗೆ ಹೋದಾಗ ಉದ್ದೇಶ ಪೂರ್ವಕವಾಗಿ ಅವರನ್ನು ಫೈಲ್ ಮಾಡಿಸುತ್ತಿದ್ದಾರೆ. ಹೀಗಾಗಿ ಅವರು ಇತರರ ಮಟ್ಟಕ್ಕೆ ಬರಲು ಅವಕಾಶವಿಲ್ಲದಂತಾಗಿದೆ. ಅಲ್ಲಿನ ಮಾತೃ ಭಾಷೆ ಯಲ್ಲಿ ಅವರು ವಿದ್ಯಾಭ್ಯಾಸ ಮುಂದುವರೆಸಲು ಕಲವು ಹಂತಗಳಲ್ಲಿ ಅವಕಾಶವಿಲ್ಲ.

ಶ್ರೀ ಡಿ. ದೇವರಾಜ ಅರಸ್.—ಉದ್ದೇಶ ಪೂರ್ವಕವಾಗಿ ಫೈಲ್ ಮಾಡಿಸುವುದು ಗೊತ್ತಿಲ್ಲ. ಎಲ್ಲಿಂದ ಎಲ್ಲಿಗೆ ಸವಾಚಾರ ಬಂತೋ ತಿಳಿಯದು. ಐ. ಎ. ಎಸ್. ಹುದ್ದೆಗಳಿಗೆ ಸೆಲೆಕ್ಟ್ ಆಗಿರು ವವರು ಅವರಲ್ಲೂ ಇರುವಾಗ ಉದ್ದೇಶ ಪೂರ್ವಕವಾಗಿ ಫೈಲ್ ಮಾಡಿಸುವರೆಂದು ಹೇಗೆ ಹೇಳಲು ಸಾಧ್ಯ? ಕೇಂದ್ರ ಸರ್ಕಾರ ಈ ವಿಚಾರ ಗಮನಿಸಬೇಕಾಗಿದೆ. ಸ್ಪೆಸಿಫಿಕ್ಕಾಗಿ ಏನಾದರೂ ಗೊತ್ತಿದ್ದರೆ ತಿಳಿಸಿದರೆ ನಂಡಿಯಾ ಸರಕಾರಕ್ಕೆ ಬರೆಯುತ್ತೇವೆ. ಇವಕ್ಕೆ ನಾವು ಜವಾಬ್ದಾರರಲ್ಲ. ಕೋಟಿಗಟ್ಟಲೆ ಮಕ್ಕಳಲ್ಲಿ ಒಂದು ಸಾವಿರ ಜನ ಐ. ಎ. ಎಸ್. ಪಾಸು ಮಾಡಿ ಉದ್ಧಾರವಾಗುವುದು ಅಷ್ಟರಲ್ಲೇ ಇದೆ. ಮುಖ್ಯವಾಗಿ ವಿದ್ಯಾವಂತರಾಗಬೇಕೆಂಬುದನ್ನು ಎಲ್ಲಿರೂ ಒಪ್ಪುವರು. ಆ ತತ್ವದ ಮೇಲೆ ಯೋಜನೆ ಮಾಡೋಣ. ಎಲ್ಲರಿಗೂ ವಿದ್ಯಾಭ್ಯಾಸ ಸಿಕ್ಕಬೇಕು. ಬಿ. ಎ. ಪಾಸಾದ ವರಿಗೂ ಕೆಲಸಗಳು ದೊರೆಯುತ್ತಿಲ್ಲ. ಟೆಕ್ನಿಕಲ್ ಓರಿಯಂಟಲ್ ಎಜುಕೇಷನ್ ಪಡೆದಿರುವವರು ಕಾರ್ಖಾನೆಗಳಿಗೆ ಬೇಕಾದವರು ಇಲ್ಲ. ಇದನ್ನು ದೃಷ್ಟಿಯಲ್ಲಿಟ್ಟು ಈಗಿನ ವಿದ್ಯಾಭ್ಯಾಸ ಕ್ರಮ ವನ್ನು ಪರಿಷ್ಕರಿಸಿ ಮಾಡಲು ಗಮನ ಕೊಡೋಣ.

ಶ್ರೀ ಕೆ. ಪ್ರಭಾಕರ್.—ಹಾಸ್ಟಲಿನಲ್ಲಿ ಇಂಟರ್ನಲ್ ಕೋಚಿಂಗ್ ಇರಬೇಕು. ಆದಿಲ್ಲದಿರುವು ದರಿಂದ ಹೆಚ್ಚು ಮಂದಿ ಫೈಲಾಗುವುದಕ್ಕೆ ಅವಕಾಶವಾಗಿದೆ ಎಂದು ಫ್ಲಾನಿಂಗ್ ಕಮೀಷನ್ ಕೂಡ ಸಲಹೆ ನೀಡಿದೆ.

ಶ್ರೀ ಡಿ. ದೇವರಾಜ ಅರಸ್.—ಈಗ ರಿಸರ್ವ್ ನೋಡಿದರೆ ಹರಿಜನ ಹುಡುಗರು ಮಾತ್ರವಲ್ಲದೆ ಎಲ್ಲಾ ಜಾತಿಯವರ ಮಕ್ಕಳು ಕೂಡ ಅವರ ಮಟ್ಟಕ್ಕೇ ಬಂದಿದ್ದಾರೆಂಬುದು ಗೊತ್ತಾಗುವುದು. ಪರ್ಸಂಟೇಜ್ ನೋಡಬಹುದು. ಒಟ್ಟಿನಲ್ಲಿ ಮಾನ್ಯ ಸದಸ್ಯರು ಹೇಳಿರುವ ಎಲ್ಲಾ ವಿಚಾರಗಳನ್ನೂ ಗಮನಿಸಿದ್ದೇನೆ. ಅವರು ಕಳಕಳಿಯಿಂದ ಅವರ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಹರಿಜನ ಗಿರಿಜನರ ವಿದ್ಯಾಭ್ಯಾಸದ ಬಗ್ಗೆ ಅವರ ಅಭಿವೃದ್ಧಿ ಬಗ್ಗೆ ಅವರಿಗಿರುವಷ್ಟೇ ಕಳಕಳಿ ಸರಕಾರಕ್ಕೂ ಇದೆ. ಆದುದರಿಂದ ಇಷ್ಟನ್ನು ಹೇಳಿದಮೇಲೆ ಮಾನ್ಯ ಸದಸ್ಯರು ಈ ಠರಾವನ್ನು ದಯವಿ ಮಾಡಿ ಹಿಂದಕ್ಕೆ ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಅವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಸಿ. ಬೈರೇಗೌಡ.—ಗರ್ಲ್ಸ್ ಹಾಸ್ಟಲಿನಲ್ಲಿ ತಾಲ್ಲೂಕು ಅಭಿವೃದ್ಧಿ ಮಂಡಲಿಯವರು ಹಣ ವಸೂಲು ಮಾಡುತ್ತಿದ್ದಾರೆ.

ಶ್ರೀ ಡಿ. ದೇವರಾಜ ಅರಸ್.—ಅದನ್ನು ಪರಿಶೀಲಿಸೋಣ.

ಶ್ರೀ ಪಿ. ಪಿ. ಹೆಗ್ಡೆ.—ಹರಿಜನ ಗಿರಿಜನರಿಗೆ ಎಲ್ಲಾ ಸೌಲತ್ತುಗಳನ್ನೂ ಕೊಡುತ್ತೇವೆಂದು ಭರವಸೆ ಕೊಟ್ಟಿದ್ದಾರೆ, ಸಂತೋಷ. ಆದರೆ ಒಂದು ಸಂಗತಿ ತಿಳಿಸಬೇಕಾಗಿದೆ. ಈಗ ಕಾಲೇಜು ಗಳಲ್ಲಿ 100 ರೂಪಾಯಿ ವಿದ್ಯಾರ್ಥಿ ವೇತನವಿದೆ, ಆರ್ಟ್ಸ್ ಮತ್ತು ಸೈನ್ಸ್ ಕಾಲೇಜುಗಳಲ್ಲಿ 30 ರಿಂದ 40 ರೂಪಾಯಿವರೆಗೆ ವಿದ್ಯಾರ್ಥಿ ವೇತನ ಇದೆ, ಮೆಡಿಕಲ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳಲ್ಲಿ 60 ರಿಂದ 70 ರೂಪಾಯಿಗಳವರೆಗೆ ವಿದ್ಯಾರ್ಥಿವೇತನವಿದೆ. ಹಾಸ್ಟಲುಗಳಲ್ಲಿರುವ ವಿದ್ಯಾರ್ಥಿಗಳಿಗೆ ಜಾಸ್ತಿ ಸಿಕ್ಕುವುದು. ಬೇರೆ ಕಡೆ ಇರುವ ವಿದ್ಯಾರ್ಥಿಗಳು 30 ರೂಪಾಯಿ ಬಾಡಿಗೆ

ಕೊಡಬೇಕಾಗುತ್ತದೆ. ಇದನ್ನು ಗಮನಿಸಿ ಅವರಿಗೆ ಯಾವ ರೀತಿ ಅನುಕೂಲ ಒದಗಿಸಬೇಕೋ ಅದನ್ನು ವಿಚಾರ ಮಾಡಬೇಕು. ಈ ತರಾವಿನ ಉದ್ದೇಶ ಎಸ್. ಎಸ್. ಎಲ್. ಸಿ. ಆನಂತರ ಕಾಲೇಜು ಪ್ರವೇಶ ಮಾಡುವ ವಿದ್ಯಾರ್ಥಿಗಳ ಸಂಪೂರ್ಣ ಜವಾಬ್ದಾರಿಯನ್ನು ಸರಕಾರ ವಹಿಸಬೇಕು ಎಂಬುದು. ಹಾಗೆ ವಹಿಸಿ ಜನರಲ್ ಹಾಸ್ಟಲ್ ಆಫಪಾ ಬೇರೆ ಕತೆ ಇರುವವರಿಗೆ ವಸತಿ, ಅರಿವೆ, ಪುಸ್ತಕ ಮುಂತಾದ ಎಲ್ಲಾ ಸೌಕರ್ಯಗಳಿಗೂ ಆಗುವ ಖರ್ಚನ್ನು ಸರಕಾರ ವಹಿಸಬೇಕು. ಇದು ಸ್ಪಷ್ಟವಾಗಿಲ್ಲ. ಕಾಲೇಜು ಶಿಕ್ಷಣದ ಸಂಪೂರ್ಣ ಹೊಣೆ ಸರಕಾರ ವಹಿಸಬೇಕು.

12-00 Noon

ಶ್ರೀ ಡಿ. ದೇವರಾಜ ಅರಸ್:—ಇದರಲ್ಲಿ ಒಂದು ತಾತ್ವಿಕವಾದ ವಿಚಾರ ಇದೆ. ಅವರು ಹೇಳುವುದು ಸಂಪೂರ್ಣವಾಗಿ ಎಲ್ಲಾ ವಿದ್ಯಾರ್ಥಿಗಳಿಗೆ ಕಾಲೇಜು ವಿದ್ಯಾಭ್ಯಾಸವನ್ನು ಸರ್ಕಾರವೇ ವಹಿಸಿಕೊಳ್ಳಬೇಕು ಎಂದು. ಆದರೆ ಕಾಲೇಜು ವಿದ್ಯಾಭ್ಯಾಸ ಎಲ್ಲರಿಗೂ ಅಗತ್ಯವೇ ಎನ್ನುವುದು ನನ್ನ ಪ್ರಶ್ನೆ. ಕಾಲೇಜು ವಿದ್ಯಾಭ್ಯಾಸ ಎಲ್ಲರಿಗೂ ಅಗತ್ಯವಾಗಿದ್ದರೆ ನಾನು ಒಪ್ಪಿಕೊಳ್ಳುವುದಕ್ಕೆ ತಯಾರಿದ್ದೇನೆ. ಆದರೆ ನಾನಂತೂ ಒಪ್ಪಿಲ್ಲ; ನನ್ನ ಮನಸ್ಸಿನಲ್ಲಿ ಅದು ಹಿಡಿಸುತ್ತಾ ಇಲ್ಲ. ಕಾಲೇಜು ವಿದ್ಯಾಭ್ಯಾಸದ ಹುಚ್ಚು ಹಿಡಿದು ಅದು ಪೆಸ್ಟ್ಡ್ ಇಂಟರೆಸ್ಟ್ ಆಗುತ್ತಾ ಇದೆ. ಅದು ಒಂದು ಕ್ಲಾಸ್ ಆಫ್ ಪೀಪಲ್‌ಗೆ ಹೋಗುತ್ತಾ ಇದೆ. ಇದು ದೇಶದಲ್ಲಿ ಒಳ್ಳೆಯದಾಗುವುದಕ್ಕಿಂತ ಅನರ್ಥವಾಗುತ್ತಿದೆ; ಇದರಿಂದ ನಿರುದ್ಯೋಗ ಸಮಸ್ಯೆ ಬಗೆಹರಿಯುವುದಿಲ್ಲ. ಇದರ ಬಗ್ಗೆ ತೀವ್ರವಾಗಿ ಯೋಚನೆ ಮಾಡಬೇಕಾದ ಕಾಲ ಬಂದಿದೆ, ಯೋಚನೆ ಮಾಡುತ್ತಿದ್ದೇವೆ. ನಮ್ಮ ದೇಶದಲ್ಲಿ ಎಲ್ಲರಿಗೂ ಹೈಸ್ಕೂಲು ವಿದ್ಯಾಭ್ಯಾಸ ಪುಕ್ಕಟೆ ಮಾಡಿ ಆಯಿತು, ಕಾಲೇಜು ವಿದ್ಯಾಭ್ಯಾಸ ಪುಕ್ಕಟೆ ಮಾಡಿ ಎಂದು ಕೇಳುತ್ತಿದ್ದಾರೆ, ಆಮೇಲೆ ಪೋಸ್ಟ್ ಗ್ರಾಜುಯೇಟ್ ಕೋರ್ಸ್ ಅನ್ನು ಪುಕ್ಕಟೆ ಮಾಡಿ ಎಂದು ಕೇಳುತ್ತಾರೆ, ಅರೀತಿ ಮಾಡಿ ಅವರನ್ನು ಯಾರಿಗೂ ಪ್ರಯೋಜನವಿಲ್ಲದ ಹಾಗೆ ಮಾಡಿದಂತಾಗುತ್ತದೆ. ಪೋಸ್ಟ್ ಗ್ರಾಜುಯೇಟ್ ಕೋರ್ಸ್ ಮಾಡಿದವರಿಗೆಲ್ಲ ಕೆಲಸ ಕೊಡುತ್ತೇವೆಯೇ? ಏತಕ್ಕೋಸ್ಕರ ಕಾಲೇಜು ವಿದ್ಯಾಭ್ಯಾಸ ಕೊಡಬೇಕು? ಮೆಟ್ರಿಕ್ಯುಲೇಟ್ ಆದಮೇಲೆ ಒಂದು ಜೆಕ್ಕಿ ಕಲ್ ಎಜುಕೇಷನ್ ಕೊಡುವುದು ಉತ್ತಮ. ಆಗ ಅವರು ತಮ್ಮ ಸ್ವಂತ ಕಾಲ ಮೇಲೆ ನಿಂತು ಜೀವನ ಮಾಡತಕ್ಕ ಜವಾಬ್ದಾರಿ ಬರುತ್ತದೆ. ಅದು ಬಿಟ್ಟು ಹಿಂದೆ ಹೇಳಿದ್ದನ್ನೇ ಹೇಳಿಕೊಂಡು ಹೋಗುವುದು ಬೇಡ.

ಶ್ರೀ ಎಚ್. ಡಿ. ದೇವೇಗೌಡ.—ಆ ಮಾರ್ಪಾಡು ತರುವವರೆಗೆ ಇವರಿಗೆ ಫೆಸಿಲಿಟೀಸ್ ಕೊಡಿ.

ಶ್ರೀ ಡಿ. ದೇವರಾಜ ಅರಸ್.—ಈಗ ಮೆಟ್ರಿಕ್ಯುಲೇಟ್ಸ್ ಸ್ಕಾಲರ್ಷಿಪ್ಸ್ ಅನ್ನು ಏನು ಮಾಡಿದ್ದೇವೆಂದರೆ, ಅದನ್ನು ಬಿ. ಎ. ಮಾಡಿ ಅವರಿಗೆ ಗುಮಾಸ್ತ ಕೆಲಸ ಕೊಡುತ್ತಿದ್ದೇವೆ. ಆದ್ದರಿಂದ ಎಲ್ಲರಿಗೂ ಏನಿಮಂ ಕೆಲಸ ಸಿಕ್ಕಲಿಕ್ಕೆ ಬಿ. ಎ. ಆಗಬೇಕು ಎನ್ನುವ ಭ್ರಾಂತಿ ಹುಟ್ಟಿದೆ. ಗುಮಾಸ್ತರಿಗೆ ಮೆಟ್ರಿಕ್ಯುಲೇಟ್ ಕ್ವಾಲಿಫಿಕೇಷನ್ ಏತಕ್ಕೆ ಇರಬಾರದು? I am asking to change that Rule and bring down the level of Education for Recruitment of Matriculates only. We will ask matriculate people to become constables. ಈ ರೀತಿ ಇದನ್ನು ನಾವು ಆಳವಾಗಿ ಯೋಚನೆ ಮಾಡಬೇಕಾಗುತ್ತದೆ. ಆದ್ದರಿಂದ ಈ ವಿಚಾರವನ್ನು ಇಷ್ಟಕ್ಕೆ ಬಿಡುತ್ತೇನೆ.

ಇನ್ನು ಸ್ಕಾಲರ್‌ಷಿಪ್ಸ್ ಕೊಡುವಾಗ ಡಿಲೇ ಆಗುತ್ತದೆ ಎಂದು ಕೆಲವರು ಹೇಳಿದರು. ಡಿಲೇ ವಿಚಾರದಲ್ಲಿ ಹೇಳುವುದಾದರೆ ಈ ವರ್ಷ ಅಂಥಾದ್ದು ಆಗಿಲ್ಲ, ಇದನ್ನು ನಾನು ವಿಚಾರ ಮಾಡಿಸಿದ್ದೇನೆ ಹಿಂದಿನ ಉದಾಹರಣೆಗಳು ಇದ್ದಿರಬಹುದು. ಎಲ್ಲಿ ಡಿಲೇ ಆಗಿದೆ ಎಂದರೆ, ಮಾಹಿತಿ ಸರಿಯಾಗಿ ಕೊಡದೆ ಕೆಲವು ಕಡೆ ಡಿಲೇ ಆಗಿದೆಯೆಂದು ಗೊತ್ತಾಗಿದೆ ಸ್ಪೆಸಿಫಿಕ್ ಆಗಿ, ಉದ್ದೇಶ ಪೂರ್ವಕ ಡಿಲೇ ಮಾಡಿದರೆ ತಿಳಿಸಿ ತಕ್ಷಣ ಅದನ್ನು ರೆಕ್ಟಿಫೈ ಮಾಡಿಸುತ್ತೇನೆ, We will also see that such thing does not repeat itself in future.

ಶ್ರೀ ಕಾಗೋಡು ತಿಮ್ಮಪ್ಪ.—ಮೂಲಭೂತವಾದ ಪ್ರಶ್ನೆಯನ್ನು ಮಾನ್ಯ ಮುಖ್ಯಮಂತ್ರಿಗಳು ಪ್ರಸ್ತಾಪ ಮಾಡಿದ್ದಾರೆ; ಅವರು ಕಾಲೇಜು ವಿದ್ಯಾಭ್ಯಾಸ ಬೇಡ ಎಂದು ಹೇಳಿದರು.

MR. DEPUTY SPEAKER.—This matter is completely extraneous and outside the scope of the Resolution.

ಶ್ರೀ ಪಿ. ಪಿ. ಹೆಗಡೆ.—ನಮ್ಮ ನಾಯಕರು ಕಾಲೇಜು ವಿದ್ಯಾಭ್ಯಾಸ ವಿತರಕ್ಕೆ ಎನ್ನುವ ಬಗ್ಗೆ ಪ್ರಸ್ತಾಪಿಸಿದ್ದಾರೆ ; ಸರ್ಕಾರಿ ನೌಕರಿಯಲ್ಲಿ ಹರಿಜನ ಗಿರಿಜನರಿಗೆ ಸಾಕಷ್ಟು ಪ್ರಾತಿನಿಧ್ಯ ವಿತರಕ್ಕೆ ದೊರಯುತ್ತಿಲ್ಲ ಎಂದರೆ, ಸ್ಥಾನಕ್ಕೆ ಸರಿಯಾದ ಯೋಗ್ಯತೆ ಇರುವ ಜನ ಸಿಕ್ಕಲಿಲ್ಲ, ಅದ್ದರಿಂದ ಅವರಿಗೆ ಸರಿಯಾದ ಪ್ರಾತಿನಿಧ್ಯ ದೊರೆಯಲಿಲ್ಲ ಎಂದು ಹೇಳಿದರು.

ಶ್ರೀ ಡಿ. ದೇವರಾಜ ಅರಸ್.—ಅದು ಹಿಂದಿನ ಮಾತು.

MR. DEPUTY SPEAKER.—Is the hon. member going to withdraw the Resolution, otherwise I will put it to vote,

ಶ್ರೀ ಪಿ. ಪಿ. ಹೆಗಡೆ.—ಕಾಲೇಜು ವಿದ್ಯಾಭ್ಯಾಸ ವಿತರ ಸಲುವಾಗಿ ಬೇಕು ಎಂದರೆ ನಾಳೆ ಸರ್ಕಾರದಲ್ಲಿ ನಮಗೆ ಹಕ್ಕು ಇದ್ದರೂ ಸಂಬಂಧಪಟ್ಟ ಜಾಗಕ್ಕೆ ತೆಗೆದುಕೊಳ್ಳುವುದಕ್ಕೆ ಯಾರು ಇಲ್ಲ ದಂತಾಗುತ್ತದೆ. ಆದ್ದರಿಂದ ಪ್ರೋನ್ನು ಸಲುವಾಗಿ ಎಜುಕೇಷನ್ ಕೊಡಬೇಕು. ಈ ದೃಷ್ಟಿಯಿಂದ ನಾನು ಕೇಳಿದ್ದು, ಕಾಲೇಜು ಎಜುಕೇಷನ್ ಬೇಕು, ತಾಂತ್ರಿಕ ಜ್ಞಾನವೂ ಇರಲಿ. ನಮ್ಮ ನಾಯಕರು ಸಾಕಷ್ಟು ಆಶ್ವಾಸನೆ ಕೊಟ್ಟಿದ್ದಾರೆ, ಈ ಸದನದವರು ಒಪ್ಪಿಗೆ ಕೊಡುವುದಾದರೆ ನನ್ನ ರೆಸಲ್ಯೂಷನ್ ಅನ್ನು ವಿತ್‌ಡ್ರಾ ಮಾಡಿಕೊಳ್ಳುತ್ತೇನೆ.

The Resolution was leave by withdrawn.

ಶ್ರೀ ಎಚ್. ಡಿ. ದೇವೇಗೌಡ (ಹೊಳೆನರಸೀಪುರ).—ಪ್ರಶ್ನೋತ್ತರ ವೇಳೆಯಾದ ಮೇಲೆ ರೂಲ್ 312ರ ಪ್ರಕಾರ ಒಂದು ವಿಷಯವನ್ನು ಪ್ರಸ್ತಾಪ ಮಾಡಲಕ್ಕೆ ಸ್ಪೀಕರ್‌ರವರ ಅನುಮತಿಯನ್ನು ಕೇಳಿದ. ಆಗ ಶ್ರೀಮಾನ್ ಬಸವಲಿಂಗಪ್ಪನವರು ಮೇಲ್ಮನೆಯಲ್ಲಿ ಪ್ರಶ್ನೆಗೆ ಉತ್ತರ ಕೊಡಬೇಕಾಗಿತ್ತು, ಅವರು ಬಂದಮೇಲೆ ಈ ವಿಷಯವನ್ನು ತೆಗೆದುಕೊಳ್ಳೋಣ ಎಂದು ತೀರ್ಮಾನವಾಯಿತು.

Mr. DEPUTY SPEAKER.—Can it not be taken on some other time

SRI H. D. DEVEGOWDA.—I have no objection.

(iii) *Re*: Reeommendig the Government of India to lay Railway line between Sakaleshpur and Birur.

ಶ್ರೀ ಜಿ. ಪುಟ್ಟಸ್ವಾಮಿ.—ನನ್ನ ನಿರ್ಣಯ ಈ ರೀತಿ ಇದೆ ಹಾಸನ ಜಿಲ್ಲೆಯ ಸಕಲೇಶಪುರದಿಂದ ಮೂಡಿಗೆರೆ ಹಾಗೂ ಚಿಕ್ಕಮಗಳೂರು ಮಾರ್ಗವಾಗಿ ಬೀರೂರಿಗೆ ಸಂಪರ್ಕ ಕಲ್ಪಿಸುವಂತೆ ರೈಲುಮಾರ್ಗ ನಿರ್ಮಿಸುವ ಬಗ್ಗೆ ತೀವ್ರ ಕ್ರಮಗಳನ್ನು ಕೈಕೊಳ್ಳುವಂತೆ ಭಾರತ ಸರ್ಕಾರದವರಿಗೆ ಶಿಫಾರಸು ಮಾಡಬೇಕೆಂದು ಈ ಸಭೆಯವರು ಅಭಿಪ್ರಾಯ ಪಡುತ್ತಾರೆ.

MR. DEPUTY SPEAKER.—Resolution moved that this Assembly is of the opinion that a recommendation be made to Government of India to link Sakaleshpur of Hassan District with Birur Via Chickmaglur and Mudigere of Chickmagalur District.

ಶ್ರೀ ಜಿ. ಪುಟ್ಟಸ್ವಾಮಿ.—ಸನ್ಮಾನ್ಯ ಅಧ್ಯಕ್ಷಣಿಯವರೇ ಈ ಪ್ರಶ್ನೆ ಸುಮಾರು 50-60 ವರ್ಷಗಳಿಂದಲೂ ಇದೆ. ಇದಕ್ಕಾಗಿ ಹಿಂದೆ ಜಿಲ್ಲಾಬೋರ್ಡಿನಲ್ಲಿ ಒಂದು ರೈಲ್ವೆ ಸೆಸ್ ಸಹ ವಸೂಲು ಮಾಡಿದ್ದಾರೆ. ಒಂದು ಉದ್ದೇಶಕ್ಕಾಗಿ ವಸೂಲೀ ಮಾಡಿದ ಹಣವನ್ನು ಬೇರೆ ಉದ್ದೇಶಕ್ಕೆ ಖರ್ಚು ಮಾಡಿರುವುದು ತಪ್ಪು. ಈ ಉದ್ದೇಶಕ್ಕಾಗಿ ಲಕ್ಷಾಂತರ ರೂಪಾಯಿ ಖರ್ಚು ಮಾಡಿದ್ದಾರೆ ಆಗಿನ ಸರ್ಕಾರ ರೈಲು ಮಾರ್ಗಕ್ಕೆ ಸರ್ವೆ ಮಾಡಿ ಪ್ರಯತ್ನ ಮಾಡಿದ್ದರೆ ಅತ್ಯಲ್ಪ ಖರ್ಚಿನಲ್ಲಿ ಇದು ಆಗುತ್ತಿತ್ತು. ಆಗ ಬ್ರಿಟಿಷ್ ಸರ್ಕಾರದವರು ಇದಕ್ಕೆ ಅವಕಾಶ ಕೊಡದೆ, ಸಂಪರ್ಕ ಕಲ್ಪಿಸಿದರೆ ದೇಶ ಅಭಿವೃದ್ಧಿಯಾಗುತ್ತದೆ ಎನ್ನುವ ಮಾತ್ಸರ್ಯ ಭಾವನೆಯಿಂದ, ಸಂಕುಚಿತ ಭಾವನೆಯಿಂದ ರೈಲು ಸಂಚಾರ ಸೌಕರ್ಯವನ್ನು ಸರಿಯಾದ ರೀತಿಯಲ್ಲಿ ಉಂಟುಮಾಡಲಿಲ್ಲ. ಇದನ್ನು ನಾನು ಇಲ್ಲಿ ವಿಷಾದದಿಂದ ಹೇಳಬೇಕಾಗಿದೆ. ರೈಲು ಸಂಚಾರ ಸೌಕರ್ಯ ಇಲ್ಲದೆ ಮಲೆನಾಡು ಅಭಿವೃದ್ಧಿ ಆಗುತ್ತಾ ಇಲ್ಲ. ರೈಲು ಸಂಚಾರ ಸೌಕರ್ಯ ಎಲ್ಲಿಯವರೆಗೆ ಆಗುವುದಿಲ್ಲವೊ

ಅಲ್ಲಿಯವರಿಗೆ ದೇಶ ಅಭಿವೃದ್ಧಿಯಾಗುವುದಕ್ಕೆ ಅವಕಾಶ ಇಲ್ಲ; ಇದು ಎಲ್ಲರಿಗೂ ಗೊತ್ತಿರತಕ್ಕ ವಿಚಾರ. ಮಲೆನಾಡಿನಲ್ಲಿ ಸಂಪತ್ತು ಹೇರಳವಾಗಿದೆ. ಖನಿಜ ಸಂಪತ್ತು, ಅರಣ್ಯ ಸಂಪತ್ತು, ಹಣ್ಣು ಸಂಪತ್ತು, ಕಾಫಿ ಏಲಕ್ಕಿ, ಮೆಣಸು, ಮತ್ತು ಭತ್ತ ಹೆಚ್ಚಾಗಿ ಬೆಳೆಯುತ್ತದೆ. ಕಿತ್ತಲೆ, ಹಲಸು, ಅನಾನಸ್, ಮೊದಲಾದವು. ತಾನೆ ತಾನಾಗಿ ಬೆಳೆದು ಕೊಳೆತು ಹೋಗುತ್ತಿದೆ. ಈ ರೀತಿ ಹೆಚ್ಚು ಸಂಪತ್ತು ಇರುವಾಗ, ಇದನ್ನು ನಾವು ಸರಿಯಾದ ರೀತಿಯಲ್ಲಿ ಸಾಗಾಣಿಕೆ ಮಾಡಲು ಸರಿಯಾದ ವ್ಯವಸ್ಥೆ ಇರುವುದಿಲ್ಲ.

ರೈಲ್ವೆ ಮಾರ್ಗ ಇದ್ದ ಪಕ್ಷದಲ್ಲಿ ಬಹಳ ಹೇರಳವಾದ ಸಂಪತ್ತನ್ನು ಸಾಗಾಣಿಕೆ ಮಾಡುವುದಕೆ ಅನುಕೂಲವಾಗುತ್ತದೆ ಜನ ಸಂಚಾರವು ಕೂಡ ಹೆಚ್ಚು ಆಗುತ್ತದೆ. ಮತ್ತು ಮಲೆನಾಡು ಸಂಪತ್ತನ್ನು ಅಭಿವೃದ್ಧಿಪಡಿಸಿ ಅಭಿವೃದ್ಧಿಯಾಗಲೂ ಅವಕಾಶವಾಗುತ್ತೆ. ಮಲೆನಾಡಿನ ಭೂಮಿ ಉತ್ಕೃಷ್ಟವಾಗಿದ್ದರೂ ಅಲ್ಲಿ ಸಂಪತ್ತು ಹೆಚ್ಚಿದ್ದರೂ ಅಲ್ಲಿ ಜನಸಾಂದ್ರತೆ ಹೆಚ್ಚಿಗೆ ಬೆಳೆಯುವುದಕ್ಕೆ ಅವಕಾಶವಿಲ್ಲ. ನಾನಾ ರೀತಿಯಲ್ಲಿ ಕವಿಗಳು ಮಲೆನಾಡಿನ ಸಂಪತ್ತನ್ನು ಹಾಡಿಪಾಡಿಕೊಂಡಾಡಿದ್ದಾರೆ. ಅಲ್ಲಿಯ ಸಂಪತ್ತು ಎಷ್ಟರ ಮಟ್ಟಿಗೆ ಇದೆ ಎಂಬುದು ಮಾನ್ಯ ಸಭೆಯ ಸದಸ್ಯರಿಗೆ ಗೊತ್ತಿರತಕ್ಕ ವಿಚಾರ. ಆದುದರಿಂದ ನಾನು ಹೆಚ್ಚಿಗೆ ಹೇಳುವುದಿಲ್ಲ. ಸಾಗಾಣಿಕೆ ವಸ್ತುಗಳು ಮತ್ತು ರಫ್ತಿನ ವಸ್ತು ಎಷ್ಟು ಬೇಕೋ ಅಷ್ಟೂ ಕೂಡ ಇವೆ. ಸಾಕಾಷ್ಟಿದೆ. ಲಾಭದಾಯಕವಾಗಿಯೂ ಕೂಡ ಆಗುತ್ತೆ. ರಾಜ್ಯದ ಎಲ್ಲಾ ಜಿಲ್ಲೆಗಳಿಂದ ಚಿಕ್ಕಮಗಳೂರು ಜಿಲ್ಲೆಯಿಂದ ರಾಜ್ಯಸರ್ಕಾರಕ್ಕೆ ಮತ್ತು ಕೇಂದ್ರಕ್ಕೆ ಹೆಚ್ಚು ವರಮಾನವಿದೆ. ಇಪ್ಪತ್ತನ ದಿವನ ನರ್ಸೆ ಮಾಡಿದ ಪಕ್ಷಧಲ್ಲಿ ಅಲ್ಲಿ ಸಂಪತ್ತು ಹೆಚ್ಚಿಗೆ ಇರುವುದು ಮತ್ತು ರಫ್ತು ಮಾಡತಕ್ಕ ವಸ್ತು ಹೇರಳವಾಗಿರುವುದರಿಂದ ಮತ್ತು ಅದು ಲಾಭದಾಯಕವಾಗಿರುವುದರಿಂದ ಸಂಚಾರ ಮಾರ್ಗಕ್ಕೆ ಮೊದಲು ನಮ್ಮ ಸರ್ಕಾರದವರು ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಬೇಕು ಎಂದು ಸರ್ಕಾರದವರನ್ನು ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ, ಈ ಸಭೆಯವರು ಇದಕ್ಕೆ ಬೆಂಬಲ ಕೊಡಬೇಕೆಂದು ಕೇಳಿಕೊಂಡು ಈ ನಿರ್ಣಯವನ್ನು ಹೃತ್ಪೂರ್ವಕವಾಗಿ ಈ ಮಾನ್ಯ ಸಭೆಯ ಮುಂದೆ ಮಂಡಿಸುತ್ತೇನೆ.

ಶ್ರೀ ಕೆ. ಪ್ರಭಾಕರ್.—ನಾನು ಈ ನಿರ್ಣಯವನ್ನು ಅನುಮೋದಿಸುತ್ತೇನೆ.

† ಶ್ರೀ ಕೊಣಂಡೂರು ಲಿಂಗಪ್ಪ(ಸಾಗರ).—ಮಾನ್ಯ ಅಧ್ಯಕ್ಷರೇ, ಈ ರೈಲುಮಾರ್ಗಗಳ ಬಗ್ಗೆ ಕಳೆದ 25 ವರ್ಷಗಳಿಂದಲೂ ನಮ್ಮ ರಾಜ್ಯದಲ್ಲಿ ಸರಿಯಾಗಿ ರೈಲ್ವೆ ಮಾರ್ಗಗಳು ಆಗಬೇಕು ಎಂದು ಕೇಳಿಕೊಳ್ಳುತ್ತಾ ಬಂದಿದ್ದೇವೆ. ದುರಾದೃಷ್ಟವಶಾತ್ ನಮ್ಮ ರಾಜ್ಯದವರೇ ಕೇಂದ್ರದಲ್ಲಿ ರೈಲ್ವೆಮಂತ್ರಿಗಳಾಗುತ್ತ ಬಂದಿದ್ದಾರೆ. ನಮ್ಮ ರಾಜ್ಯದಲ್ಲಿ ಬರೀ ಮಾತಿನ ರೈಲು ಬಿಡುತ್ತಾರೆಯೆ ವಿನಃ ಬೇರೆ ರಾಜ್ಯಗಳಲ್ಲಿ ನಿಜವಾದ ರೈಲು ಬಿಡುತ್ತಿದ್ದಾರೆ. ಆದರೆ ನಮ್ಮ ಕರ್ನಾಟಕವನ್ನು ಆದರಲ್ಲೂ ಮಲೆನಾಡು ಪ್ರದೇಶವನ್ನು ಸಂಪೂರ್ಣವಾಗಿ ಕೈಬಿಟ್ಟಿರುವುದು ಮಾತ್ರವೇ ಅಲ್ಲ ಉದ್ದೇಶಪೂರ್ವಕವಾಗಿ ನಿರ್ಲಕ್ಷವನ್ನು ತೋರಿಸಿವ್ದಾರೆಂದು ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಭಾರತ ಎಂದರೆ ಉತ್ತರ ಇಂಡಿಯಾದಲ್ಲರುವ ಉತ್ತರಪ್ರದೇಶ ಎಂದು, ದಕ್ಷಿಣ ಇಂಡಿಯಾ ಎಂದರೆ ತಮಿಳುನಾಡು ಎಂದು ಅಭಿಪ್ರಾಯ ಡೆಲ್ಲಿಯಲ್ಲರುವವರಿಗೆ ಈಗ ಆಂಧ್ರದವರು ಇದ್ದಾರೆ ಎಂದು ಅರ್ಥವಾಗುತ್ತಿದೆ. ಕೇರಳ, ಕರ್ನಾಟಕ, ಗುಜರಾತ್ ಮಿಕ್ಕ ಇಂಡಿಯಾದೇಶದ ಬೇರೆ ರಾಜ್ಯಗಳು ಇವೆ ಎನ್ನುವುದು ಅಲ್ಲಿ ಜನ ಇದ್ದಾರೆ ಎನ್ನುವುದು ಡೆಲ್ಲಿಯಲ್ಲಿ ಅಧಿಕಾರವರ್ಗದಲ್ಲಿ ಇರುವವರಿಗೆ ಅರ್ಥವಾಗಿಲ್ಲ. ನಾವು ಕೂಡ ಆ ನಿರ್ಲಕ್ಷವನ್ನು ಅನುಭವಿಸುತ್ತಿದ್ದೇವೆ. ಕರ್ನಾಟಕದ ಜನರ ಬಗ್ಗೆ ಕೇಂದ್ರ ಸರ್ಕಾರದವರು ಇದೇರೀತಿ ನಿರ್ಲಕ್ಷ್ಯದಿಂದ ಹೆಜ್ಜೆ ಹಾಕಿದರೆ ಭಾರತದ ಒಕ್ಕೂಟದಿಂದ ಹೊರಗೆ ಬಂದು ನಾವು ನಿಲ್ಲಬೇಕಾದ ಪರಿಸ್ಥಿತಿ ಬಂದು ಕರ್ನಾಟಕದ ಜನ ಏನು ಎಂಬ ಎಚ್ಚರಿಕೆ ಕೊಟ್ಟರೆ ಅಗ ಅರ್ಥವಾದೀತು. ರೈಲ್ವೆ ಮಾರ್ಗಗಳ ಬಗ್ಗೆ ಕೇಂದ್ರಸರ್ಕಾರ ನತತವಾಗಿ ನಿರ್ಲಕ್ಷ್ಯಮಾಡಿಕೊಂಡು ಹೆಜ್ಜೆ ಇಡುತ್ತಾ ಇದೆ. ಆದುದರಿಂದ ಈಗಲಾದರೂ ಕೂಡ ನಮ್ಮ ರಾಜ್ಯ ಸರ್ಕಾರ ಕೇಂದ್ರಸರ್ಕಾರದ ಮೇಲೆ ಪ್ರಭಾವವನ್ನು ಬೀರಬೇಕು. ಜೋ ಹುಜೂರು ಎನ್ನತಕ್ಕ ಮನೋಭಾವವನ್ನು ಕೈಬಿಡಬೇಕು. ಅದರ ಬದಲು ಕೇಂದ್ರಸರ್ಕಾರದಮೇಲೆ ಸರಿಯಾದ ಪ್ರಭಾವವನ್ನು ಬೀರಿ ಅವರ ಮನಸ್ಸಿನಮೇಲೆ ಪರಿಣಾಮವನ್ನು ಉಂಟುಮಾಡಬೇಕು. ರೈಲುಮಾರ್ಗ ಆಗುವ ಹಾಗೆ ಮಾಡಬೇಕು. ಮಲೆನಾಡಿನ ಸಂಪರ್ಕ ಸಾಧನಗಳನ್ನು ಅಧಿಕ ಮಾಡುವ ಉದ್ದೇಶ್ಯದಿಂದ ರೈಲುಮಾರ್ಗ ಬಹಳ ಆವಶ್ಯಕ. ಮಲೆನಾಡು ಎಂದರೆ ಪುಟ್ಟಸ್ವಾಮಿಯವರು ಹೇಳಿದಹಾಗೆ ಅಲ್ಲಿ ಸಾಕಷ್ಟು ಸಂಪತ್ತು ಇದೆ. ಆದರೆ ಸಂಪರ್ಕ ಮಾರ್ಗಗಳು ಇಲ್ಲ. ನಮ್ಮ ಸರ್ಕಾರದವರು ಏನೋ ಎಂತೋ ರಾಜ್ಯಸರ್ಕಾರದವರು ಕೂಡ ಮಲೆನಾಡು ಪ್ರದೇಶದ ಬಗ್ಗೆ ಒಂದು ದೃಷ್ಟಿಯಿಂದ ಮಲತಾಯಿಧೋರಣೆಯನ್ನು ತೋರಿಸಿಕೊಂಡೂ ಬಂದಿದ್ದಾರೆ ಎನ್ನುವ ಮಾತನ್ನು ಸ್ಪಷ್ಟವಾಗಿ ಹೇಳಬೇಕಾಗಿದೆ. ಪ್ರತಿಯೊಂದು ವಿಷಯದಲ್ಲೂ

(ಶ್ರೀ ಕೋಣಂದೂರು ಲಿಂಗಪ್ಪ)

ಕೂಡ ಏನಾದರೂ ಕೂಡ ಮಲೆನಾಡು ಸಂಪರ್ಕಸಾಧನೆಗೆ ರೈಲು ಮಾರ್ಗ ಇದ್ದರೆ ಸಾಧ್ಯ. ಮುಖ್ಯವಾಗಿ ರೈಲು ಮಾರ್ಗ ಚಿಕ್ಕಮಗಳೂರು ಜಿಲ್ಲೆಗೆ ಸಂಪರ್ಕಸಾಧನೆಗೆ ಬಹಳ ಅವಶ್ಯಕವಾಗಿದೆ. ಜೊತೆಯಲ್ಲಿ ಅನೇಕ ಸಣ್ಣ ಪುಟ್ಟ ರೈಲುಮಾರ್ಗಗಳು ಆ ಪ್ರಾಂತ್ಯಗಳಲ್ಲಿ ಆಗಬೇಕಾಗಿದೆ. ನಮ್ಮ ರಾಜ್ಯದಲ್ಲಿ ಮುಖ್ಯವಾದ ರೈಲುಮಾರ್ಗ ಏನು ಇದೆ ಸಕಲೇಶಪುರದಿಂದ ಚಿಕ್ಕಮಗಳೂರು ಮಂಡಿಗೆರೆ ಮಾರ್ಗವನ್ನು ಬಹಳ ತ್ವರಿತವಾಗಿ ಮಾಡಬೇಕು. ನಮ್ಮ ಸರ್ಕಾರದವರು ಮುಖ್ಯವಾಗಿ ಕೇಂದ್ರಸರ್ಕಾರದ ಮೇಲೆ ಒತ್ತಾಯ ತಂದು ಇದನ್ನು ಆಗು ಮಾಡಿಕೊಡಬೇಕು. ಹೀಗೆ ಪ್ರತಿಯೊಂದು ವಿಷಯವನ್ನು ಬಗ್ಗೆ ಮಲೆನಾಡನ್ನು ನಿರ್ಲಕ್ಷ ಮಾಡುತ್ತಾ ಹೋದರೆ ಅದರ ಪರಿಣಾಮ ಮುಂದೆ ಬಹಳ ಕೆಟ್ಟದ್ದು ಆದೀತು ಎನ್ನುವ ಎಚ್ಚರಿಕೆ ಹೇಳಬೇಕಾಗುತ್ತದೆ. ಆಂಧ್ರ ಮತ್ತು ತೆಲಂಗಾಣ ವಿಷಯವನ್ನು ನೆನಪು ಮಾಡಿಕೊಡುತ್ತೇನೆಂದು ಭಾವಿಸಬಾರದು ನಮ್ಮ ರಾಜ್ಯದಲ್ಲೂ ಇದೇರೀತಿ ನಿರ್ಲಕ್ಷತೆ ನಡೆದರೆ ಆ ಪರಿಸ್ಥಿತಿ ಇಲ್ಲೂ ಆದರೆ ಅಷ್ಟು ಏನೂ ಆಶ್ಚರ್ಯಪಡಬೇಕಾದ ವಿಷಯವಲ್ಲ.

ಶ್ರೀ ಡಿ. ದೇವರಾಜ ಅರಸ್.—ಒಳ್ಳೆ ಉದಾಹರಣೆ ಸಿಕ್ಕಿತಲ್ಲ.

ಶ್ರೀ ಕೋಣಂದೂರ ಲಿಂಗಪ್ಪ. ಮಲೆನಾಡಿನ ಬಗ್ಗೆ ಇದುವರೆಗೂ ಮಲತಾಯಿಧೋರಣೆ ಇದ್ದುದು ಸಾಕುಮಾಡಿ, ಮುಖ್ಯವಾಗಿ ರೈಲುಮಾರ್ಗಗಳ ಬಗ್ಗೆ ಕೇಂದ್ರಸರ್ಕಾರ ಒತ್ತಾಯ ಪಡಿಸಿ, ಈ ಕೆಲಸ ಆಗುಮಾಡಿಕೊಡಬೇಕು ಎಂದು ಒತ್ತಾಯಪಡಿಸಿ ನಿರ್ಣಯವನ್ನು ನಾನು ಸ್ವಾಗತ ಮಾಡುತ್ತೇನೆ.

†ಶ್ರೀ ಕೆ. ಎಂ. ರುದ್ರಪ್ಪ (ಸಕಲೇಶಪುರ).—ಮಾನ್ಯಸಭಾಧ್ಯಕ್ಷರೇ ಈಗ ಶ್ರೀ ಜಿ. ಪುಟ್ಟಸ್ವಾಮಿಯವರು ತಂದಿರತಕ್ಕ ನಿರ್ಣಯ ಬಹಳ ಸೂಕ್ತವಾಗಿದೆ. ಕಾರಣವಾದರೂ ಇಷ್ಟೇ. ಈಗ ಸಕಲೇಶಪುರದಿಂದ ಮಂಗಳೂರು ರೈಲುಮಾರ್ಗ ನಿರ್ಮಾಣವಾಗುತ್ತಾ ಇದೆ. ಜಿಲ್ಲಾ ಕೇಂದ್ರವಾದ ಚಿಕ್ಕಮಗಳೂರು ಅವು ಸಹ ಮಲೆನಾಡು ಪ್ರದೇಶಕ್ಕೆ ಸೇರಿದ್ದು ಹಿಂದೆ ನರ್ ಎಂ. ವಿಶ್ವೇಶ್ವರಯ್ಯನವರು ದಿವಾನರಾಗಿದ್ದಾಗ ಕಡೂರು ಚಿಕ್ಕಮಗಳೂರು ಸಕಲೇಶಪುರ ಮಾರ್ಗವಾಗಿ ಮಂಗಳೂರಿಗೆ ರೈಲು ಮಾರ್ಗ ಹಾಕಿಸಲು ಸರ್ವೆ ಮಾಡಿದರು. ಮತ್ತು ಮೈಸೂರು ದೇಶದವರಾಗಿದ್ದ ಶ್ರೀ ಹೆಚ್. ಸಿ. ದಾಸಪ್ಪನವರು ಕೇಂದ್ರದಲ್ಲಿ ರೈಲ್ವೆ ಸಚಿವರು ಆಗಿದ್ದ ಕಾಲದಲ್ಲಿ ಆಗ ನಾವು ಡೆಲಿಗೇಷನ್ ಹೋಗಿ ಅವರನ್ನು ಭೇಟಿ ಮಾಡಿದಾಗ ಅವರು ಸರ್ವೆ ಮಾಡಿಸುತ್ತೇವೆಂದು ಹೇಳಿದ್ದರು. ಯಾವ ಕಾರಣವಿಂದಲೋ ಅದು ಹಾಗೇ ನಿಂತು ಹೋಯಿತು. ಈಗ ಹಾಸನ ಮಂಗಳೂರು ರೈಲುಮಾರ್ಗ ನಿರ್ಮಾಣ ಆಗುವ ಕಾಲದಲ್ಲಿ ಸಕಲೇಶಪುರ, ಮಂಡಿಗೆರೆ ತಾಲ್ಲೂಕು ಚಿಕ್ಕಮಗಳೂರು ಮಾರ್ಗವಾಗಿ ಬೀರೂರಿಗೆ ರೈಲ್ವೆ ಲಿಂಕ್ ಮಾಡುವುದು ಬಹಳ ಸೂಕ್ತವಾದುದು ಮಲೆನಾಡು ಪ್ರದೇಶ ಅಭಿವೃದ್ಧಿಯಾಗಬೇಕಾದರೆ ಸಂಚಾರ ಸೌಲಭ್ಯ ಹೆಚ್ಚಿನ ರೀತಿಯಲ್ಲಿ ಆಗಬೇಕಾಗಿದೆ. ಸಕಲೇಶಪುರ ತಾಲ್ಲೂಕು ಏಲಕ್ಕಿ ಬೆಳೆಗೆ ಬಹಳ ಪ್ರಸಿದ್ಧವಾದುದು. ಚಿಕ್ಕಮಗಳೂರು ಕಾಫಿ ಬೆಳೆಗೆ ಬಹಳ ಪ್ರಸಿದ್ಧವಾದುದು. ಕಾಫಿ ಮಂಗಳೂರಿಗೆ ಹೋಗುತ್ತದೆ. ಅಲ್ಲಿ ಅನೇಕ ಕಾಫಿ ಕ್ಯೂರಿಂಗ್ ವರ್ಕ್ಸ್ ಇವೆ. ಅಲ್ಲಿಗೆ ಸಾಗಾಣಿಕೆಯಾಗಬೇಕಾಗಿದೆ. ಮತ್ತು ಕಬ್ಬಿಣದ ಅದಿರು ಕೂಡ ಮಂಗಳೂರಿಗೆ ಸಾಗಾಣಿಕೆಯಾಗಬೇಕಾಗಿದೆ. ಇದಕ್ಕೆ ರೈಲು ಮಾರ್ಗ ಬಹಳ ಅಗತ್ಯವಾಗಿ ಬೇಕಾಗಿದೆ. ಹಿಂದೆ ಇದ್ದಂಥ ಚಿಕ್ಕಮಗಳೂರು ಜಿಲ್ಲಾಬೋರ್ಡ್‌ನವರು ರೈಲ್ವೆ ಸೆಸ್ ಕಾಕಿದರು ಆ ಫಂಡ್ ಏನಾಯಿತೋ ಗೊತ್ತಿಲ್ಲ. 20-30 ವರ್ಷಗಳ ಕಾಲ ಸೆಸ್ಸನ್ನು ಜನಗಳ ಮೇಲೆ ಹೇರಿ ವಸೂಲು ಮಾಡಿದ್ದಾರೆ. ರೈಲುಹಾಕಲು ಸರ್ವೆ ಕಾರ್ಯ ಕೂಡ ಸ್ವಲ್ಪ ನಡೆದಿದೆ ಎಂದು ತಿಳಿದು ಬಂದಿರುತ್ತದೆ. ಆದ್ದರಿಂದ ಎಲ್ಲ ವಿಚಾರಗಳನ್ನೂ ಗಮನಿಸಿ ರಾಜ್ಯ ಸರ್ಕಾರದವರು ಕೇಂದ್ರ ಸರ್ಕಾರದವರಿಗೆ ಒತ್ತಾಯ ಪೂರ್ವಕವಾಗಿ ಈ ರೈಲು ಮಾರ್ಗವನ್ನು ಮಾಡಿಕೊಡಬೇಕೆಂದು ಕೇಳಿದರೆ ಮಲೆನಾಡು ಪ್ರದೇಶ ಅಭಿವೃದ್ಧಿಯಾಗುವುದಕ್ಕೆ ಅವಕಾಶವಾಗುತ್ತದೆ. ಮಾನ್ಯ ಸದಸ್ಯರಾದ ಪುಟ್ಟಸ್ವಾಮಿಯವರು ತಂದಿರುವ ಈ ನಿರ್ಣಯವು ಸೂಕ್ತವಾಗಿದೆ ಮತ್ತು ಆ ಭಾಗದ ಜನಗಳ ಆಶೋತ್ತರವೇನಿದೆ ಅದನ್ನು ಪೂರೈಸಿಕೊಡುವಂಥ ದಾರ್ಢ್ಯಗಿಯೂ ಇರುವುದರಿಂದ ರಾಜ್ಯ ಸರ್ಕಾರ ಕೇಂದ್ರದ ಮೇಲೆ ಒತ್ತಾಯವನ್ನು ಹೇರಿ ಈ ರೈಲು ಮಾರ್ಗವನ್ನು ಆಗ ಮಾಡಿಸಿಕೊಡಬೇಕೆಂದು ಹೇಳಿ ನಿರ್ಣಯಕ್ಕೆ ಬೆಂಬಲ ಕೊಡುತ್ತೇನೆ.

† ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಅಧ್ಯಕ್ಷರೇ, ಈ ನಿರ್ಣಯವನ್ನು ತಂದಿರತಕ್ಕ ಮಾನ್ಯ ಸದಸ್ಯರ ಹಾಗೂ ಅದಕ್ಕೆ ಬೆಂಬಲಕೊಟ್ಟ ಸದಸ್ಯರ ಉದ್ದೇಶವೇನೋ ಆರ್ಥಿಕವಾಗಿ ಮಲೆನಾಡು ಪ್ರದೇಶ ಅಭಿವೃದ್ಧಿಯಾಗಬೇಕು ಎನ್ನುವುದೇ ಆಗಿದೆ. ಆದರೆ ಬಹಳ ಹಳೇಕಾಲದಲ್ಲಿ

ಯೋಚನೆ ಮಾಡಿದಂತ ವಿಷಯಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಅವು ಈಗಲೂ ಫಲಕಾರಿಯಾಗುತ್ತವೆ ಎಂದು ತಿಳಿದುಕೊಂಡಿದ್ದಾರೆ. ಅದರಲ್ಲಿ ನ್ಯಲ್ಪ ಬದಲಾವಣೆಯಾಗಬೇಕು ಮತ್ತು ನಾವೂ ಸ್ವಲ್ಪ ಬದಲಾಯಿಸಿ ನೋಡಬೇಕಾದ್ದೂ ಇದೆ. ಸಕಲೇಶಪುರ ಚಿಕ್ಕಮಗಳೂರು ರೈಲು ಮಾರ್ಗ ಯಾವುದೋ ಕಾಲದಿಂದ ಮಾಡಬೇಕೆಂದಿದ್ದರು, ಅದಕ್ಕೆ ಜಿಲ್ಲಾಬೋರ್ಡ್‌ನವರು ದುಡ್ಡನ್ನೂ ಸಂಗ್ರಹಿಸಿದ್ದರು ಎಂದು ಕೇಳಿದರು. ಆದೆಲ್ಲ ಆಗಿನ ಕಾಲಕ್ಕೆ ಸರಿಯಾಗಿತ್ತು. ಆದರೆ ಈಗಿನ ಕಾಲಕ್ಕೆ ಬೇಕಾದಷ್ಟು ಬದಲಾವಣೆಗಳಾಗಿವೆ. ಮಹಾರಾಷ್ಟ್ರ ಗಡಿಯಿಂದ ಕೊಂಕಣ ರೈಲು ಮಾರ್ಗ ಹಾಕಬೇಕೆಂದು ಯೋಚನೆ ಮಾಡಿದ್ದಾರೆ. ಅದನ್ನು ಹಾಕಿದರೆ ನಮ್ಮ ದೇಶದ ಆರ್ಥಿಕಾಭಿವೃದ್ಧಿ ದೃಷ್ಟಿಯಿಂದ, ಸಾಮಾನುಗಳ ಸಾಗಾಣಿಕೆ ದೃಷ್ಟಿಯಿಂದ ಅದು ಮಂಗಳೂರುವರೆಗೂ ಬರುವುದಾದರೆ, ಅನುಕೂಲವಾಗುತ್ತದೆ. ಅಲ್ಲದೆ ಈಗ ಹಾಸನದಿಂದ ಮಂಗಳೂರಿಗೆ ಹಾಕತಕ್ಕ ರೈಲುಮಾರ್ಗವೇನಿದೆ ಅಂಥದನ್ನು ಅವಾಗ ಯೋಚನೆ ಮಾಡಿಯೇ ಇರಲಿಲ್ಲ. ಸಕಲೇಶಪುರ ರೈಲು ಮಾರ್ಗ ಯೋಚನೆ ಮಾಡಿದ್ದ ಕಾಲ ಎಂದರೆ ಸಕಲೇಶಪುರದಿಂದ ಆಚೆಗೆ ನಮ್ಮ ರಾಜ್ಯವಿಲ್ಲದೆ ಇದ್ದಾಗ. ರಾಜ್ಯವಿಸ್ತರಣೆ ಆಗುವುದಕ್ಕೆ ಮುಂಚೆ ಮತ್ತು ಕರಾವಳಿ ಪ್ರದೇಶ ನಮಗೆ ಸೇರಿರಲಿಲ್ಲದೆ ಇದ್ದಾಗ ಈ ಎಲ್ಲ ಯೋಚನೆಗಳನ್ನೂ ಮಾಡಿದ್ದರು. ಈಗ ವಿಚಾರಗಳು ಬದಲಾವಣೆಯಾಗುತ್ತಿವೆ. ನಮ್ಮ ಆರ್ಥಿಕಾಭಿವೃದ್ಧಿಯ ದೃಷ್ಟಿಯಿಂದ ಮಂಗಳೂರಿಗೆ ಬರುವ ಕೊಂಕಣ ರೈಲ್ವೆ ಏನಿದೆ ಅದು ಆಗಬೇಕೇಕು. ಅದನ್ನು ಬಹುಶಃ ಮಾನ್ಯ ಲಿಂಗಪ್ಪನವರೂ ಒಪ್ಪುತ್ತಾರೆಂದು ನಾನು ಭಾವಿಸುತ್ತೇನೆ. ಹಾಸನದಿಂದ ಮಂಗಳೂರಿಗೆ ಹೋಗತಕ್ಕ ರೈಲು ಮಾರ್ಗವನ್ನು ಬ್ರಾಡ್‌ಗೇಜ್ ಮಾಡಿ ಈಗಿರತಕ್ಕ ಮೀಟರ್ ಗೇಜನ್ನು ತೆಗೆದು ಹಾಕಿ ಎಂದು ಹೇಳುತ್ತಿದ್ದೇವೆ. ಮೀಟರ್‌ಗೇಜ್ ಇರುವುದರಿಂದ ಏನು ಅನುಕೂಲವಿದೆ, ಅದನ್ನು ಬ್ರಾಡ್‌ಗೇಜಾಗಿ ಪರಿವರ್ತನೆ ಮಾಡುವುದರಿಂದ ಏನು ಹೆಚ್ಚಿನ ಅನುಕೂಲಗಳಿವೆ ಎಂಬುದನ್ನು ನೋಡಬೇಕು. ನಮ್ಮ ದೇಶದಲ್ಲಿರತಕ್ಕ ಅದಿರು, ಹೊಸಪೇಟೆಯಲ್ಲಿ ಸಿಕ್ಕತಕ್ಕ ಅದಿರು, ಏನಿದೆ ಅವನ್ನೆಲ್ಲ ಈಗ ಮದ್ರಾಸ್ ಬಂದರಿಗೆ ಕಳುಹಿಸುತ್ತಿದ್ದೇವೆ. ಆದರೆ ನಮ್ಮ ದೇಶದ ಅದಿರನ್ನು ಮಂಗಳೂರು ಕಡೆಯಿಂದ ಕಳುಹಿಸುವುದಕ್ಕೆ ಏರ್ಪಾಡು ಮಾಡಬೇಕಾದರೆ, ಹೆಚ್ಚಿನ ಪ್ರಮಾಣದಲ್ಲಿ ಅದಿರುಹೋಗತಕ್ಕ ಅವಕಾಶವಿರಬೇಕಾದರೆ ಅದಕ್ಕೆ ರೈಲು ಮಾರ್ಗ ದೊಡ್ಡದಾಗಬೇಕು ; ಮೀಟರ್‌ಗೇಜ್ ಸಾಲದು ಎಂದು ಒತ್ತಾಯ ಮಾಡುತ್ತಿದ್ದೇವೆ. ನಾನು ಇದನ್ನೆಲ್ಲ ಹೇಳಿದಾಗ ಈ ರೈಲು ಮಾರ್ಗ ಮಾಡಲೇ ಬಾರದು ಎಂದಲ್ಲ. ಯಾವುದಕ್ಕೆ ಅದ್ಯತೆಯನ್ನು ಕೊಡಬೇಕು ಎಂಬುದನ್ನು ನೋಡಬೇಕು. ಅವೂ ಅಲ್ಲದೆ ಗಂತಕರ್ ಮಾರ್ಗವಾಗಿ ಬರುವುದನ್ನು ಮೈಸೂರುವರೆಗೂ ಬ್ರಾಡ್‌ಗೇಜ್ ಮಾಡಬೇಕಾಗುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ ಹೊಸಪೇಟೆ—ಹುಬ್ಬಳ್ಳಿ ಮಾರ್ಗವನ್ನು ಬ್ರಾಡ್‌ಗೇಜ್ ಮಾಡಬೇಕಾಗುತ್ತದೆ. ಹುಬ್ಬಳ್ಳಿ—ಮಿರಜ್‌ಲೋಂಡ ಗೋವಾ ಇದನ್ನೂ ಬ್ರಾಡ್‌ಗೇಜ್ ಮಾಡಿ ಎಂದು ಹೇಳುತ್ತಿದ್ದೇವೆ. ಈ ರೀತಿಯಾದ ಬೆಳವಣಿಗೆಯಿಂದ ನಮ್ಮ ಆರ್ಥಿಕ ಚಟುವಟಿಕೆಗಳು ನಮಗೆ ಬಹಳ ಮಟ್ಟಿಗೆ ದೇಶದ ಅಭಿವೃದ್ಧಿಯ ದೃಷ್ಟಿಯಿಂದ ದ್ವಿಗುಣವಾಗುತ್ತವೆ ಎಂದು ನಮ್ಮ ಲೆಕ್ಕಾಚಾರವಾಗಿದೆ. ಶ್ರೀ ಜಿ. ಪುಟ್ಟಸ್ವಾಮಿಯವರು ಸಕಲೇಶಪುರ, ಮೂಡಿಗೆರೆ, ಚಿಕ್ಕಮಗಳೂರು ಮಾರ್ಗವಾಗಿ ಬೀರೂರಿಗೆ ರೈಲು ಮಾರ್ಗ ಬರಬೇಕೆಂದು ಹೇಳುತ್ತಿದ್ದಾರೆ ಈಗ ನಾವು ಈ ಲೈನುಗಳೆಲ್ಲ ಬ್ರಾಡ್‌ಗೇಜ್ ಆಗಬೇಕೆಂದು ಹೇಳುತ್ತಿರುವುದರಿಂದ ಬಾಕಿ ಪ್ರಶ್ನೆಗಳು ಎರಡನೆಯದಾಗಿ ಉಳಿಯುತ್ತವೆ. ಈ ಮಾರ್ಗವನ್ನೂ ನಮ್ಮ ಯೋಜಿತವಾಗಿ ತೆಗೆದುಕೊಳ್ಳಲು ಹೇಳೋಣ. ಇಡೀ ನಮ್ಮ ರಾಜ್ಯದಲ್ಲಿ ಆಗುವುದನ್ನೆಲ್ಲ ಒಂದು ಪಟ್ಟಿಮಾಡಿ ಕೇಂದ್ರ ಸರ್ಕಾರಕ್ಕೆ ಬರೆದು ಕೊಟ್ಟರೆ ಅದನ್ನೆಲ್ಲ ಅವರು ಸೇರಿಸಿಬಿಡುತ್ತಾರೆಯೇ ? ಒಂದೊಂದು ರೈಲು ಮಾರ್ಗವಾಗಬೇಕಾದರೂ ಕೋಟಿಗಟ್ಟಲೆ ರೂಪಾಯಿ ಹಣ ಬೇಕಾಗುತ್ತದೆ. That was viewed at a time when we never thought of the States development in this fashion. Now, you have to rethink about all these things. It is a question of crores of rupees and not a few lakhs. ಐದನೆಯ ಯೋಜನೆಯಲ್ಲಿ ಎಷ್ಟು ಹಣವನ್ನು ಇಟ್ಟಿದ್ದಾರೆ, ರಾಜ್ಯಗಳಲ್ಲಿ ಎಷ್ಟು ಕೆಲಸಗಳನ್ನು ತೆಗೆದುಕೊಳ್ಳಬೇಕೆಂದು ಯೋಚನೆ ಮಾಡುತ್ತಿದ್ದಾರೆ. ನಮ್ಮ ರಾಜ್ಯದಲ್ಲಿಯೂ ತೆಗೆದುಕೊಳ್ಳಬೇಕೆಂಬ ತೀರ್ಮಾನಕ್ಕೆ ಕೇಂದ್ರಕ್ಕೆ ಇದೆ. I am trying to keep the House properly informed. I would like the hon. Members to kindly understand the position and have a proper perspective of the developments in the State and in what manner we should take these developments. Whatever we ask should be linked to the immediate needs and the

(ಶ್ರೀ ಡಿ. ದೇವರಾಜ ಅರಸ್)

developments that are to take place in the near future. We must make the best use of the developments. We should think of a line which will carry the ores to our own ports which have been developed. ಕೇಂದ್ರ ಸರ್ಕಾರದವರಿಗೆ ಕರ್ನಾಟಕದ ರಾಜ್ಯದ ಮೇಲೆ ಅಭಿಮಾನವಿಲ್ಲ, ಮಲತಾಯಿ ದೋರಣೆ ಇದೆ ಎಂದು ಏನೇನೋ ಹೇಳುತ್ತಿರುತ್ತಾರೆ. ಅದೆಲ್ಲ ಹಳೇ ಸ್ಲೋಗನ್. ಅಂಥದ್ದೇನೂ ಇಲ್ಲ. ಕೇಂದ್ರಕ್ಕೆ ನಮ್ಮ ಸಮಸ್ಯೆಗಳ ಬಗ್ಗೆ ಸಾಕಷ್ಟು ಕಳಕಳಿ ಇದೆ ಎನ್ನುವುದನ್ನು ಮಾತ್ರ ಹೇಳುತ್ತೇನೆ.

12-30 P.M.

ಶ್ರೀ ಎಂ. ಎಸ್. ಕೃಷ್ಣನ್.—ಸ್ವಾಭಾವಿಕವಾಗಿ ನಾನು ಯಾವ ಆಧಾರದ ಮೇಲೆ ಹೇಳಿದೆ, ಯಾವ ರೀತಿ ಕಮ್ಮನ್ನು ಜಡ್ಜ್ ಮಾಡಬೇಕು ಎಂದರೆ.....

Sri D. DEVARAJ URS.—By the result.

ಶ್ರೀ ಎಂ. ಎಸ್. ಕೃಷ್ಣನ್.—ಹಿಂದೆ ಹೆಚ್. ಸಿ. ದಾಸಪ್ಪ, ಹನುಮಂತಯ್ಯನವರು ರೈಲ್ವೆ ಮಂತ್ರಿಗಳಾಗಿದ್ದರು, ಟಿ. ಎ. ಪೈ ರೈಲ್ವೆ ಮಂತ್ರಿಗಳಾಗಿದ್ದರು. ಇವರು ಹೊಸ ರೈಲ್ವೆ ಲೈನನ್ನು ಯಾವ ರೀತಿ ಹಾಕಬೇಕು ಎಂದು ಸಜೆಷನ್ ಕೊಟ್ಟಿದ್ದಾರೆ, ಪ್ರಪೋಜಲ್ಸ್ ಕೊಟ್ಟಿದ್ದಾರೆ. ದುರಾದೃಷ್ಟವಶಾತ್ ಆ ಕೆಲಸ ಯಾಕೆ ಆಗಲಿಲ್ಲ ಎಂದು ನಾನು ಕೇಳಿದಾಗ, ಅದಕ್ಕೆ ಟೀಕೆ ಈ ಮನೆಯಲ್ಲಿ ಏನು ಬಂತು ಎಂದರೆ ಅಷ್ಟು ಧಾತಿ ಇಲ್ಲ, ಧೈರ್ಯ ಇಲ್ಲ, ಎದೆಗಾರಿಕೆ ಇಲ್ಲ ಎಂದು ಹೇಳುತ್ತಿದ್ದಾರೆ. ಮೈಸೂರಿನ ಮಂತ್ರಿಗಳಾಗಿ ಮೈಸೂರಿಗೆ ಇವರು ಹೊಸ ರೈಲ್ವೆ ಲೈನನ್ನು ಕೊಟ್ಟಿಲ್ಲ ಎಂದು ಹೇಳಿದರು.

ಶ್ರೀ ಡಿ. ದೇವರಾಜ್ ಅರ್ಸ್. ಯಾವ ಊರಿನವರು ಮಂತ್ರಿಗಳಾದರೆ ಆ ಊರಿಗೆ ರೈಲ್ವೆ ಲೈನ್ ಕೊಡುವುದಕ್ಕೆ ಆಗುತ್ತದೆಯೇ ?

ಶ್ರೀ ಎಂ. ಎಸ್. ಕೃಷ್ಣನ್. ಹಾಗಲ್ಲ ನಾನು ಹೇಳಿದ್ದು. ಅದೃಷ್ಟವೋ, ದುರದೃಷ್ಟವೋ ಈ ದೇಶದಲ್ಲಿ ಏನು ನಡೆದಿದೆ ಎಂದರೆ ಆಯಾ ರಾಜ್ಯದ ಮಂತ್ರಿಗಳಾಗಿದ್ದವರು ಅವರ ಏರಿಯಾದಲ್ಲಿ ಕೆಲಸಗಳನ್ನು ವಾಪಾಡುತ್ತಾ ಇದ್ದರು.

Sri D. DEVARAJ URS.—My point is that Railway lines were built at a time when the Britishers ruled and Britishers had their own methods and ideas; and their own ideas developed. And you know it very well what was uppermost in their mind; it may be Defence, may be their troop movement, and so on and so forth; it may be for economic development partly but mostly it was for something else. Today it is not a question of troop movement. Today it is a question of goods movement, its quick movement from place to place depending on the resources and the material available. Supposing we want the quickest possible movement of coal from North to South India great hindrance for it is want of proper railway lines. Now there is some trouble with regard to the Railway lines in Andhra Pradesh on account of an agitation. You know the position and in what difficulty it has resulted in Tamilnadu has to go without ade-

quate power and it has to resort to 20 to 75% power cut. This is all due to want of proper quick movement of coal from one place to the other and fr m one end to the other. So, we have been thinking in a different way. We are all happy that two Union Ministers from Mysore State happened to be Railway Ministers. ಅದೃಷ್ಟವೋ, ದುರದೃಷ್ಟವೋ ಹಿಂದಿದ್ದ ರೈಲ್ವೆ ಮಂತ್ರಿಗಳು 25ರಿಂದ30 ಕೋಟಿ ರೂಪಾಯಿ ಆದಾಯ ಬರುವಂಥಲೈನ್ ಮಾಡಿದ್ದರೆಂ They had programmed and they had planned and that plan is now being taken up Sri T. A Pai has been Railway Minister for a few months only. ಅವರು ಮಾಡಿ ಹೋದ ವೇಲೆ ಅಳಿಸಿಬಿಟ್ಟಿದ್ದಾರೆ. The Fifth Plan is coming. In this V Plan some of these ideas are going to be implemented. What I am suggesting is that simply because one Minister comes from one particular State or District, it does not mean that railway lines should go to that State or District.

Sri M. S. KRISHNAN.—The principles enunciated are very good. But in practice it is happening exactly the other way. You can examine the decision taken by the Railway Board and the previous Minister and assess to what extent development has taken place in this State and understand whether there has been centralised plan.

Sri D. DEVARAJ URS.—Whatever might have happened previously 10 to 20 years back, hereafter we will take care to see that proper development of both railways as well as other things are also done not only here but elsewhere depending upon these circumstances. What I wish to stress and point out is that hereafter we need not feel that Government of India is trying to look at this problem in a parochial manner. ಮಾನ್ಯ ಸದಸ್ಯರು ಮುಲತಾಯಿ ಧೋರಣೆ ಎಂದು ಹೇಳುತ್ತಿದ್ದಾರೆ. None of these things are there. We will also get our due share in the coming Plan and we are also going to have some of these railway lines. We will also study the a spect stressed by Sri Puttaswamy ; not that I am against it. With these major things coming, these are links which could be thought of at a later stage. Nothihg prevent us te examine it carefully and see that it is taken up at the appropriate time. With this assurance, I request the hon. Member to withdraw the Resolution.

ಶ್ರೀ ಜಿ. ಪುಟ್ಟಸ್ವಾಮಿ.—ಸಕಾರಣವಾಗಿ ತಿಳಿಸಲಿಲ್ಲವೋ ಏನೋ ಎಂದು ಅನ್ನಿಸುತ್ತದೆ. ನಾಗಪುರದಲ್ಲಿ ಕಿತ್ತಳೆ ಹಣ್ಣಿಗೆ ಒಂದನೇ ಮಾರ್ಕೆಟ್ ಇದೆ. ಎರಡನೆಯದು ಚಿಕ್ಕಮಗಳೂರಿನ ಕಿತ್ತಳೆ ಹಣ್ಣಿಗೆ ಇದೆ. ಈಗ ಲಕ್ಷಾಂತರ ರೂಪಾಯಿನ ಕಿತ್ತಳೆ ಹಣ್ಣು ಹಾಳಾಗಿ ಹೋಗುತ್ತಾ ಇದೆ. ನಾನು ಈ ನಭೆಗೆ ಸರಿಯಾದ ರೀತಿಯಲ್ಲಿ ಕನ್‌ವಿನ್ಸ್ ಮಾಡಿಲಿಲ್ಲವೋ ಏನೋ ಎಂದು ನನಗೆ ಅನುಮಾನವಾಗಿದೆ. I beg leave of the House to withdraw my Resolution.

(The resolution was by leave, withdrawn)

(iv) *Re* : **Steps to arrest the spiralling prices of essential commodities**

Sri T. R. SHAMANNA (Fort).—Sir, I beg to move :

"That this Assembly recommends to Government to take immediate steps to arrest the spiralling prices of essential commodities in the State"